ಸಂಪುಟ: 13 Volume | ಸಂಚಿಕೆ: 340 Issue | ಪುಟಗಳು 08 Pages | ಬುಧವಾರ 04 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಶಾಲೆಯಲ್ಲಿ ಕಲಿತದ್ದು ಮರೆತ ಬಳಿಕವೂ ನೆನಪಲ್ಲಿ ಉಳಿಯುವುದೇ ಶಿಕ್ಷಣ.

–ಆಲ್ಬರ್ಟ್ ಐನ್ ಸ್ಟೀನ್

ಪುಟ್ಟರಾಜ ಗವಾಯಿಗಳವರ 112ನೇ ಜಯಂತಿ 6

ಭಕ್ತರ ಭಕ್ತಿಯೇ ಗವಿಮಠದ ಶಕ್ತಿ: ಅಭಿನವ ಶ್ರೀ 7

ಎಚ್.ಡಿಕೆ, ಅಶೋಕ್; ತಾ ಕಳ್ಳ-ಪರರ ನಂಬ 8

## ಮಲ್ಲಮ್ಮ ನುಡಿ
### ಯುಗಾದಿ ವಿಶೇಷಾಂಕ- 2026

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com

## ಕೋರ್ಟ್‌ಗೆ ಹುಸಿ ಬಾಂಬ್ ಬೆದರಿಕೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ನಗರದ ಜಿಲ್ಲಾ ಕೋರ್ಟ್ ಗೆ ಮಂಗಳವಾರ ಬೆಳಗ್ಗೆ ಹುಸಿ ಬಾಂಬ್ ಬೆದರಿಕೆ ಕರೆ ಬಂದಿದೆ. ಇಡೀ ಜಿಲ್ಲಾ ನ್ಯಾಯಾಲಯದಲ್ಲಿ ಆತಂಕ ಮೂಡಿಸಿದೆ. ಜಿಲ್ಲಾ ನ್ಯಾಯಾಲಯದ ಕಚೇರಿ ಮೇಲ್‌ಗೆ ಸಂದೇಶ ಬಂದಿದ್ದು, ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದ್ದಾರೆ. 11.45ಕ್ಕೆ ಬಾಂಬ್ ಬ್ಲಾಸ್ಟ್ ಆಗಲಿದೆ ಎಂಬ ಸಂದೇಶ ಬಂದಿದ್ದು, ತಕ್ಷಣ ಕಾರ್ಯಪ್ರವೃತ್ತರಾದ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರು, ನೌಕರರು, ವಕೀಲರು ತಕ್ಷಣ ಆವರಣದ ಹೊರಗೆ ಬಂದಿದ್ದಾರೆ. ಪರಸ್ಪರ ಮಾಹಿತಿ ತಿಳಿಯುತ್ತಲೇ ಎಲ್ಲರನ್ನು ಹೊರಗೆ ಕಳುಹಿಸಿದ್ದಾರೆ.ತಕ್ಷಣ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿದ್ದು, ಎಲ್ಲರನ್ನು ಹೊರಗೆ ಕಳುಹಿಸಿ, ಎಲ್ಲೆಡೆ



ಪೊಲೀಸರಿಂದ ರಕ್ಷಣೆ ನೀಡಿದ್ದಾರೆ.ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳದ ತಂಡದೊಂದಿಗೆ ಆಗಮಿಸಿದ್ದು, ಪರಿಶೀಲನೆ ಮುಂದುವರಿಸಿದೆ.

## ಕನ್ನಡಿಗರ ರಕ್ಷಣೆಗೆ ಕೇಂದ್ರ ಜೊತೆ ಚರ್ಚೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಅಮೆರಿಕ, ಇಸ್ರೇಲ್–ಇರಾನ್ ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ದುಬೈಯಲ್ಲಿ ಸಿಲುಕಿ ಆತಂಕದಲ್ಲಿರುವ ಕನ್ನಡಿಗರ ಜೊತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಇಂದು ಮಾತನಾಡಿ ಅವರಿಗೆ ಧೈರ್ಯ ತುಂಬಿದ್ದಾರೆ.

ಸಂಕಷ್ಟದಲ್ಲಿ ಸಿಲುಕಿದ ಕನ್ನಡಿಗರನ್ನು ತಕ್ಷಣ ಕರ್ನಾಟಕಕ್ಕೆ ಕರೆದುಕೊಂಡು ಬರಲು ಕೇಂದ್ರ ಸರಕಾರದ ಜೊತೆ ಮಾತನಾಡುತ್ತೇನೆಂದು ಅವರು ಭರವಸೆ ನೀಡಿದರು. ಪ್ರಶಸ್ತಿ ಪಡೆಯಲೆಂದು ಒಟ್ಟು 61 ಜನರ ತಂಡವು ತೆರಳಿದ್ದು, ದುಬೈಯಲ್ಲಿ ವಾಸ್ತವ್ಯ ಇರುವುದಾಗಿ ತಂಡದವರು ನುಡಿದಿದ್ದಾರೆ.

ಅರಸೀಕೆರೆಯ 5 ಜನರೂ ಇವರ ಜೊತೆಗೆ ಇರುವುದಾಗಿ ಹಾಗೂ ಹೋಟೆಲ್ ಒಂದರಲ್ಲಿ ತಂಗಿರುವುದಾಗಿ ಅವರು ಆತಂಕವನ್ನು ಹಂಚಿಕೊಂಡರು. ಇದೀಗ 7ನೇ ದಿನ ತಲುಪಿದೆ. ಇವತ್ತು ರಾತ್ರಿ ಇದ್ದ ವಿಮಾನವೂ ರದ್ದಾಗಿದೆ ಎಂದು ವಿವರಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಜೀ ಅವರು ಇದರ ಸಂಬಂಧ ಆದ್ಯ ಗಮನ ಕೊಟ್ಟಿದ್ದಾರೆ. ಹಿಂದೆ ಉಕ್ರೇನ್‌ನಲ್ಲಿ ಇಂಥ ಸಮಸ್ಯೆ ಆದಾಗ ಕೇಂದ್ರ ಸರಕಾರವು ಅದನ್ನು ಬಗೆಹರಿಸಿತ್ತು. ಅಲ್ಲಿ ಸಿಲುಕಿದ್ದವರನ್ನು ಕರೆದುಕೊಂಡು ಬರುವ ವ್ಯವಸ್ಥೆ ಮಾಡಲಾಗಿತ್ತು. ಈ ಯುದ್ಧ ಅಚಾನಕ್ ಆಗಿ ಆರಂಭವಾಗಿದೆ. ದೆಹಲಿಯ ಸಂಬಂಧಿತರ ಜೊತೆ ನಾನು ಕೂಡ ಮಾತನಾಡುವೆ ಎಂದಿದ್ದಾರೆ.

# ಫೋನ್ ಕದ್ದಾಲಿಕೆಯ ಸದ್ದು..!

### ಪ್ರತಿ ಪಕ್ಷ ನಾಯಕ ಆರ್ ಅಶೋಕ್ ಗಂಭೀರ ಆರೋಪ | ಕೇಂದ್ರ ಸಚಿವ ಎಚ್ಡಿ ಕುಮಾರಸ್ವಾಮಿಯೂ ಸಾಥ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕುರ್ಚಿ ದನದ ಬೆನ್ನಲ್ಲೇ ಮತ್ತೊಮ್ಮೆ ಫೋನ್ ಕದ್ದಾಲಿಕೆಯ ಸದ್ದು ಚರ್ಚೆಗೆ ಗ್ರಾಸವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಪ ಮುಖ್ಯಂತ್ರಿ ಡಿಕ.ಶಿವಕುಮಾರ್ ಬೆಂಬಲಿಗರ ಫೋನ್‌ಗಳನ್ನು ಕದ್ದಾಲಿಕೆ ನಡೆಸುತ್ತಿದ್ದಾರೆ ಎಂದು ವಿಧಾನಸಭೆ ಪ್ರತಿ ಪಕ್ಷದ ನಾಯಕ ಆರ್.ಅಶೋಕ್ ಅವರು ಗಂಭೀರ ಆರೋಪ ಮಾಡಿದ್ದು, ಕೇಂದ್ರ ಸಚಿವ ಕುಮಾರಸ್ವಾಮಿ ಅವರೂ ಇದಕ್ಕೆ ಸಾಥ್ ನೀಡಿರುವುದು ರಾಜಕೀಯ ವಲಯದಲ್ಲಿ ಬಿರುಗಾಳಿಎ ಎಬ್ಬಿಸಿದೆ.

**ಅನಧಿಕೃತ ತಂಡ:** ಡಿಕೆ.ಶಿವಕುಮಾರ್ ಅವರ ಚಟುವಟಿಕೆಗಳ ಮೇಲೆ ನಿಗಾ ಇರಿಸಲು ಸಿದ್ದರಾಮಯ್ಯ ಅವರು ಎಸ್‌ಪಿ ನೇತೃತ್ವದಲ್ಲಿ ಅನಧಿಕೃತ ತಂಡ ರಚಿಸಿದ್ದಾರೆ. ಡಿಕೆ.ಶಿವಕುಮಾರ್ ಕಡೆಯ ಶಾಸಕರ ಚಲನವಲನದ ಮೇಲೆ ನಿಗಾ ಇರಿಸಲು ಫೋನ್ ಟ್ಯಾಪಿಂಗ್ ಮಾಡಿಸುತ್ತಿದ್ದಾರೆಂದು ಅಶೋಕ್ ಹೇಳಿದ್ದಾರೆ.

**ಸರ್ಕಾರದ ವಿರುದ್ಧ ಸಮರ:** ಮಾರ್ಚ್ 6ರಿಂದ ಆರಂಭವಾಗುವ ಬಜೆಟ್ ಅಧಿವೇಶನದಲ್ಲಿ ರಾಜ್ಯ ಸರ್ಕಾರದ ವೈಫಲ್ಯಗಳ ಕುರಿತು ಧ್ವನಿ ಎತ್ತಲಾಗುವುದು ಎಂದು ಆಶೋಕ್ ಹಘೇಳಿದ್ದಾರೆ. ಆಡಳಿತಾರೂಢ ಕಾಂಗ್ರೆಸ್ ಪಕ್ಷವೇ ಒಡೆದ ಮನೆಯಾಗಿದ್ದು, ಸರ್ಕಾರದ ಅವಧಿ ಅಂತ್ಯದತ್ತ ಸಾಗುತ್ತಿದೆ ಎಂದು ಟೀಕಿಸಿದ್ದಾರೆ.







ಆರೋಪ ಮಾಡಿರುವ ಒಬ್ಬರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು, ಇನ್ನೊಬ್ಬರು ಉಪಮುಖ್ಯಮಂತ್ರಿ ಮತ್ತು ಗೃಹ ಸಚಿವರಾಗಿದ್ದವರು. ಅವರ ಕಾಲದಲ್ಲಿ ಕೂಡಾ ಗುಪ್ತಚರ ವಿಭಾಗ ಮುಖ್ಯಮಂತ್ರಿಯವರ ಬಳಿಯೇ ಇತ್ತು. ಅವರ ಹೇಳಿಕೆಗಳನ್ನು ಗಮನಿಸಿದರೆ ಇವರಿಬ್ಬರೂ ತಮ್ಮ ಅನುಭವದ ಬಲದಿಂದಲೇ ಈ ಆರೋಪ ಮಾಡುತ್ತಿರುವಂತೆ ಕಾಣಿಸುತ್ತಿದೆ. –ಸಿದ್ದರಾಮಯ್ಯ, ಮುಖ್ಯಮಂತ್ರಿ

**ಆಂತರಿಕ ಘರ್ಷಣೆ: ಎಚ್ಡಿಕೆ**

ಅವರದ್ದೇ ಶಾಸಕರ ಮೇಲೆ ಅವರದ್ದೇ ಸಚಿವರು ಗುಪ್ತಚಾರಿಕೆ ಮಾಡುತ್ತಿರುವುದು ಇದೇ ಮೊದಲು. ಸಿಎಂ ಆಗಬೇಕೆಂದುಕೊಂಡವರು ಅವರ ಸರ್ಕಾರದ ಮೇಲೆ ಗುಪ್ತಚರಿಕೆ ಆರಂಭಿಸಿರುವುದು ದುರಂತ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಅವರ ಇತ್ತೀಚಿನ 'ಬೆಂಕಿ ಮತ್ತು ಹೊಗೆ' ಹೇಳಿಕೆಗಳಿಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಆಂತರಿಕ ಘರ್ಷಣೆಗೆ ಭರವಸೆಗಳ ಉಲ್ಲಂಘನೆ ಮತ್ತು ಅಧಿಕಾರ ಹಂಚಿಕೆ ಒಪ್ಪಂದಕ್ಕೆ ಸಂಬಂಧಿಸಿದಂತೆ ಪಾರದರ್ಶಕತೆಯ ಕೊರತೆಯೇ ಕಾರಣ ಎಂದಿದ್ದಾರೆ.

**ಆಗಲೂ ಇತ್ತು, ಈಗ್ಲೂ ಇದೆ**

ರಾಜ್ಯದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಈಗ ಫೋನ್ ಟ್ಯಾಪಿಂಗ್ ನಡೆಯುತ್ತಿದೆ. ಎಲ್ಲಾ ಸರ್ಕಾರದಲ್ಲೂ ಫೋನ್ ಟ್ಯಾಪಿಂಗ್ ಇತ್ತು. ಈಗಲೂ ಫೋನ್ ಟ್ಯಾಪಿಂಗ್ ಇದೆ. ಕೆಲವರು ಫೋನ್ ಟ್ಯಾಪಿಂಗ್ ಮಾಡಿಯೂ ಪತಿವ್ರತೆ ರೀತಿ ವರ್ತಿಸುತ್ತಾರೆ. ನಾನು ಸತ್ಯ ಹೇಳುತ್ತೇನೆ ಕೇಳಿ, ಎಲ್ಲಾ ಸರ್ಕಾರದಲ್ಲೂ ಫೋನ್ ಟ್ಯಾಪಿಂಗ್ ಇತ್ತು. ಈಗಅದು ಎಷ್ಟು ಹೆಚ್ಚಾಗಿದೆ ಎಂಬುದು ಅವರನ್ನೇ ಕೇಳಬೇಕು ಎಂದಿದ್ದಾರೆ ಕೇಂದ್ರ ಸಚಿವ ಎಚ್‌ಡಿಕೆ.

**ಅಧಿವೇಶನದಲ್ಲಿ ಪ್ರಸ್ತಾಪ**

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರ ನಾಯಕತ್ವ ವಿಚಾರದಲ್ಲಿ ಕಾಂಗ್ರೆಸ್ ಶಾಸಕರು ಬೀದಿಯಲ್ಲಿ ನಿಂತು ಮಾತನಾಡುತ್ತಿದ್ದಾರೆ. ಈ ವಿಷಯವನ್ನೂ ಅಧಿವೇಶನದಲ್ಲಿ ಪ್ರಸ್ತಾಪಿಸಲಾಗುವುದು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಕ್ರಮಗಳು, ಹಿಂದಿನ ಬಜೆಟ್ಗಳಲ್ಲಿ ಘೋಷಿಸಿದ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡದಿರುವುದು, ರಾಜ್ಯವನ್ನು ಸಾಲದ ಬಲೆಗೆ ತಳ್ಳಿರುವುದು ಎಂದು ಅಶೋಕ್ ಗುಡುಗಿದ್ದಾರೆ.



ಚಿಟಗುಪ್ಪ: ಪಟ್ಟಣದ ಪ್ರಿಯಾ ಫೋಟೋ ಸ್ಟುಡಿಯೋ ಮಾಲೀಕ ದಿನೇಶ್ ಪ್ಯಾಗೆ ಅವರು ಪ್ರತಿ ದಿನ ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆ ಓದಿ ನಮ್ಮ ಪತ್ರಿಕೆ ಬೆಳವಣಿಗೆಗೆ ಸಹಕರಿಸುತ್ತಿರುವ ಇವರಿಗೆ ಧನ್ಯವಾದಗಳು.

## ಎಟಿಎಂ ಕದವರಿಗೆ 3 ವರ್ಷ ಸಜೆ

**ಹುಮನಾಬಾದ್:** ಫೆ.5 ರಂದು ನಸುಕಿನ ಜಾವ ತಾಲ್ಲೂಕಿನ ಹಳ್ಳೀಖೇಡ (ಬಿ) ಎಸ್.ಬಿ.ಐ ಬ್ಯಾಂಕ್ ಸೆಟರ್ ಮುರಿದು ಗ್ಯಾಸ್ ಕಟರ್ ದಿಂದ ಎಟಿಎಂ ಮಸಿನ್ ಕಟ್ ಮಾಡಿ ರು.24,57,700 ಹಣ ಕದ್ದವರಿಗೆ ಶಿಕ್ಷೆ ಆಗಿದೆ. ಸಿಪಿಐ ಗುರುಲಿಂಗಪ್ಪಾ ಗೌಡ ಅವರು ಆರೋಪಿಗಳನ್ನು ಬಂಧಿಸಿ ನ್ಯಾಯಲಯಕ್ಕೆ ಒಪ್ಪಿಸಿದ್ದಾರೆ. ಶಾಯಿನ ಕಮಲ್‌ಖಾನ್, ಅಲೀಂ, ಇಲಿಯಾಸ್ ಅಬ್ದುಲ್ ರೆಹೆಮಾನ್, ಸಾ. ಮತೇಪೂರ, ತಾ. ಹತೇನ್, ಜಿಲ್ಲಾ ವಲ್ಲವಲ್ಕ ಹರಿಯಾಣ ರಾಜ್ಯದವರೇ ಶಿಕ್ಷೆಗೆ ಗುರಿಯಾದವರು. ಇವರಿಗೆ ಹುಮನಾಬಾದ್‌ನ ಜೆ.ಎಮ್‌ಎಫ.ಸಿ ನ್ಯಾಯಧೀಶ ಸಣ್ಣಹನುಮಗೌಡ ಇವರು ಮುಂದೆ ವಿಚಾರಣೆ ನಡೆದು ಫೆ.28 ರಂದು ಆರೋಪಿತರಿಗೆ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ.

## ತಾಯ್ನಾಡಿಗೆ ಮರಳಿದ 213 ಕನ್ನಡಿಗರು..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಅಮೆರಿಕಾ–ಇಸ್ರೇಲ್ ದಾಳಿ ಹಿನ್ನೆಲೆಯಲ್ಲಿ ಅಬುಧಾಬಿಯಲ್ಲಿ ಸಿಲುಕಿದ್ದ 213 ಕನ್ನಡಿಗರು ಸುರಕ್ಷಿತವಾಗಿ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಮೂರು ದಿನಗಳ ಕಾಲ ಆತಂಕದಲ್ಲಿಯೇ ದಿನ ದೂಡಿದ್ದ ಪ್ರಯಾಣಿಕರು, ಸೋಮವಾರ ರಾತ್ರಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಬಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎಬಿ) ಬಂದಿಳಿದು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ತಾಯ್ನಾಡಿಗೆ ಮರಳಿದವರಲ್ಲಿ ಕರ್ನಾಟಕದ ವಿಧಾನಪರಿಷತ್ ಸದಸ್ಯ (ಎಂಎಲ್ಸಿ) ಭೋಜೇಗೌಡ ಹಾಗೂ ಒಲಿಂಪಿಕ್ ಪದಕ ವಿಜೇತೆ, ಖ್ಯಾತ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಕೂಡ ಸೇರಿದ್ದಾರೆ. ಈ ಬಗ್ಗೆ ಮಾಧ್ಯಮಗಳೊಂದಿಗೆ ತಮ್ಮ ಆತಂಕದ ಕ್ಷಣಗಳನ್ನು ಹಂಚಿಕೊಂಡ ಎಂಎಲ್ಸಿ ಭೋಜೇಗೌಡ, ತಾವು ದಕ್ಷಿಣ ಆಫ್ರಿಕಾ ಪ್ರವಾಸ ಮುಗಿಸಿ ದುಬೈ ಮಾರ್ಗವಾಗಿ ಬೆಂಗಳೂರಿಗೆ ವಾಪಸ್ಸಾಗುತ್ತಿದ್ದಾಗ ಎದುರಿಸಿದ ಸಂಕಷ್ಟಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ಸ್ವಲ್ಪ ಸಮಯದ ನಂತರ ವಿಮಾನವೇ ರದ್ದಾಗಿದೆ ಎಂಬ ಆಘಾತಕಾರಿ ಮಾಹಿತಿ ನೀಡಿದರು.

## ಯುದ್ಧದ ಭೀಕರತೆಯ ದಾಳಿ ಪ್ರತಿದಾಳಿ

• ಮಲ್ಲಮ್ಮ ನುಡಿ ವಾರ್ತೆ ದುಬೈ

ಇರಾನ್ ವಿರುದ್ಧ ಇಸ್ರೇಲ್ ಮತ್ತು ಅಮೆರಿಕ ನಡೆಸಿದ ಜಂಟಿ ದಾಳಿಯ ಸಂಘರ್ಷವು ಮಂಗಳವಾರ ತೀವ್ರಗೊಂಡಿದೆ. ಇದಕ್ಕೆ ಪ್ರತಿಕಾರವಾಗಿ ಟೆಹ್ರಾನ್, ಗಲ್ಫ್ ಪ್ರದೇಶದಲ್ಲಿರುವ ಅಮೆರಿಕದ ನೆಲೆಗಳ ಮೇಲೆ ದಾಳಿಗಳನ್ನು ಮುಂದುವರೆಸಿದೆ.

ರಿಯಾದ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿ ಮೇಲೆ ಎರಡು ಡ್ರೋನ್‌ಗಳು ದಾಳಿ ನಡೆಸಿದ್ದರಿಂದಾಗಿ ಬೆಂಕಿ ಹೊತ್ತಿಕೊಂಡಿದ್ದು, ಸಣ್ಣಪುಟ್ಟ ಹಾನಿಯಾಗಿದೆ ಎಂದು ಸೌದಿ ರಕ್ಷಣಾ ಸಚಿವಾಲಯ ತಿಳಿಸಿದೆ. ಈ ದಾಳಿಯ ನಂತರ ಸೌದಿಯಲ್ಲಿನ ಎಲ್ಲ ಕಾನ್ಸುಲರ್ ಸೇವೆಗಳನ್ನು ಸ್ಥಗಿತಗೊಳಿಸುವುದಾಗಿ ಅಮೆರಿಕ ರಾಯಭಾರ ಕಚೇರಿ ಘೋಷಿಸಿದೆ.


**ಹಾರ್ಮುಜ್ ಜಲಸಂಧಿ ಬಂದ್**

ವಿಶ್ವದ ಐದನೇ ಒಂದು ಭಾಗದಷ್ಟು ತೈಲ ಸಾಗಣೆ ನಡೆಯುವ ಪ್ರಮುಖ ಜಲಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಮುಚ್ಚುತ್ತಿರುವುದಾಗಿ ಐಆರ್‌ಜಿಸಿ ಘೋಷಿಸಿದೆ.

## ಪ್ರಗತಿ ವಿಚಾರದಲ್ಲಿ ಕ್ಷುಲ್ಲಕ ರಾಜ್ಕೀಯ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಶತಮಾನಗಳ ಶಾಪದಿಂದ ಹಿಂದುಳಿದಿರುವ ಬೀದರ್ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಜಿಲ್ಲಾ ಉಸ್ತುವಾರಿ ಸಚಿವನಾಗಿ ನಾನು ಶ್ರಮಿಸುತ್ತಿರುವೆ. ಅಭಿವೃದ್ಧಿಯ ವಿಚಾರದಲ್ಲಿ ರಾಜಕಾರಣ ಮಾಡದೆ, ಪ್ರಗತಿಗೆ ಎಲ್ಲರೂ ಬೆಂಬಲ ನೀಡಬೇಕೆಂದು ಅರಣ್ಯ, ಜೀವಿಶಾಸ್ತ್ರ, ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ. ಜಿಲ್ಲೆಯ ಶಿಕ್ಷಣ ಕ್ಷೇತ್ರದ ಪ್ರಗತಿಯ ಭಾಗವಾಗಿ ಚಿಟಗುಪ್ಪ ತಾಲೂಕು ಹಿಪ್ಪರ್ಗಾ ಗ್ರಾಮದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 16.75 ಕೋಟಿ ರೂ. ಅನುದಾನದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ನಿಲಯ ನಿರ್ಮಾಣ ಪ್ರಸ್ತಾವನೆಯನ್ನು ತಾವು ಸಚಿವ ಸಂಪುಟಕ್ಕೆ ತಂದು ಮಂಜೂರಾತಿ ಕೊಡಿಸಿದ್ದಾಗಿ ಭರವಸೆ ನೀಡಿದ್ದಾರೆ. ತಾವು ಮಂಜೂರು ಮಾಡಿಸಿದ ಯೋಜನೆಗೆ ಜಿಲ್ಲಾ ಉಸ್ತುವಾರಿ ಸಚಿವರಾದ ತಮಗೂ ಮಾಹಿತಿ ನೀಡದೆ, ಅನುಮತಿ ಪಡೆಯದೆ, ಜಿಲ್ಲಾಡಳಿತಕ್ಕೂ ತಿಳಿಸದೆ, ಸ್ಥಳೀಯ ಜನಪ್ರತಿನಿಧಿಗಳನ್ನೂ ಆಹ್ವಾನಿಸದೆ ಶಾಸಕ ಸಿದ್ದುಪಾಟೀಲ್ ಅವರು ಫೆ.9ರಂದು ಶಂಕುಸ್ಥಾಪನೆ ಮಾಡಿರುವ ಕ್ರಮ ಸಲ್ಲ ಎಂದಿದ್ದಾರೆ. ಶಿಷ್ಟಾಚಾರ ಉಲ್ಲಂಘಿಸಿ ಶಾಸಕರು ತಾವೊಬ್ಬರೇ ಶಂಕುಸ್ಥಾಪನೆ ಮಾಡಿರುವುದು ಸರಿಯಲ್ಲ. ಜಿಲ್ಲಾಡಳಿತದ ವತಿಯಿಂದ ನಿಯಮಾನುಸಾರ ಶಂಕುಸ್ಥಾಪನೆ ನೆರವೇರಬೇಕು ಎಂದು ವಿಧಾನ ಪರಿಷತ್ ಸದಸ್ಯರುಗಳಾದ ಭೀಮರಾವ್ ಪಾಟೀಲ್, ಚಂದ್ರಶೇಖರ ಪಾಟೀಲ್ ಅವರು ತಮಗೆ ತಿಳಿಸಿದ ಹಿನ್ನಲೆಯಲ್ಲಿ ಜಿಲ್ಲಾಡಳಿತಕ್ಕೆ ಸೂಚನೆ ನೀಡಿ, ಶಿಷ್ಟಾಚಾರ ಪಾಲನೆಯೊಂದಿಗೆ ಕಾರ್ಯಕ್ರಮ ಆಯೋಜಿಸಲು ತಿಳಿಸಿದ್ದಾಗಿ ಸ್ಪಷ್ಟಪಡಿಸಿದ್ದಾರೆ.



## ಅತಿಕ್ರಮಣ ರಸ್ತೆ ತೆರವಿಗೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ನಗರದ ಚೆನ್ನಮ್ಮ ಸರ್ಕಲ್ ಯಿಂದ ಟಿಪ್ಪುಸುಲ್ತಾನ್ ಸರ್ಕಲ್‌ವರೆಗೆ ಎರಡೂ ಕಡೆಗೂ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಸುಗಮ ರಸ್ತೆ ಸಂಚಾರಕ್ಕೆ ಅವಕಾಶ ಕಲ್ಪಿಸಿ ಕೊಡಬೇಕೆಂದು ಕರ್ನಾಟಕ ರೈತ ಸಂಘದ ತಾಲೂಕು ಸಮಿತಿ ಆಗ್ರಹಿಸಿದೆ. ಈ ಕುರಿತು ತಾಲೂಕು ತಹಶೀಲ್ದಾರ್ ಅರುಣ್ ಕುಮಾರ್ ಎಚ್ ದೇಸಾಯಿ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.

ಸಿಂಧನೂರು ತಾಲೂಕ ನಗರ ಹಾಗೂ ಗ್ರಾಮೀಣ ಪ್ರದೇಶ ಅತಿ ವೇಗವಾಗಿ ಜನಸಂಖ್ಯೆ ಬೆಳೆಯುತ್ತಿದ್ದು. ವ್ಯಾಪಾರ ವ್ಯವಹಾರಗಳು ವಹಿವಾಟು ನಡೆಸುವ ಕಾರಣಕ್ಕೆ ಮತ್ತು ಸಿಂಧನೂರು ಜಿಲ್ಲೆ ಕೇಂದ್ರವಾಗಿವುದಕ್ಕೆ ಎಲ್ಲರೂ ಆಸೆ ಪಡುತ್ತಿದ್ದಾರೆ.

ನಗರಗಳು ರಸ್ತೆ, ವ್ಯಾಪಾರ ವಹಿವಾಟು ನಡೆಸುವುದಕ್ಕೆ ರಸ್ತೆಗಳು ಮೇಲೆ ಸುಗಮವಾಗಿ ಓಡಾಡುವುದಕ್ಕೆ ರಸ್ತೆಗಳು ಅಗಲೀಕರಣ ಇಲ್ಲದೆ ಸಂಚಾರಕ್ಕೆ ಅನಾನುಕೂಲವಾಗಿದೆ. ಚೆನ್ನಮ್ಮ ಸರ್ಕಲ್ ಯಿಂದ ಟಿಪ್ಪುಸುಲ್ತಾನ್ ಸರ್ಕಲ್ ವರೆಗೆ ಬಲ ಮತ್ತು ಎಡ ಭಾಗದ ಅತಿಕ್ರಮಣ ರಸ್ತೆಗಳನ್ನು ತೆರವುಗೊಳಿಸುವುದು ಅತ್ಯಂತ ಅಗತ್ಯವಿದೆ. ತೆರವು ಕಾರ್ಯಾಚರಣೆಗೆ ಅಧಿಕಾರಿಗಳು ಮುಂದಾಗಬೇಕು ಎಂದು ಬಿ ಎನ್ ಯರದಿಹಾಳ ಒತ್ತಾಯಿಸಿದ್ದಾರೆ.

ಕಳೆದ ವರ್ಷ 25 –12–2024ರಂದು ಹೈಕೋರ್ಟ್ ಆದೇಶವಿದೆ ಎಂದು ಬೀದಿ ಬದಿಯ ವ್ಯಾಪಾರಸ್ಥರಗಳನ್ನು ಬೀದಿಗೆ ತಳ್ಳುವ ಅಧಿಕಾರಿಗಳು ಅದೇ ಶ್ರೀಮಂತ ಶಾಸಕರು, ಖಾಸಗಿಯವರು ಬಿಲ್ಡಿಂಗ್‌ಗಳು ಸರ್ಕಾರಿ ಓಡಾಡುವ ರಸ್ತೆಗಳನ್ನು ಅತಿಕ್ರಮ ಮಾಡಿಕೊಂಡು ಕಟ್ಟಡಗಳನ್ನು ತೆರವುಗೊಳಿಸಿದೇ ಅವರನ್ನು ಬಚಾವ್ ಮಾಡಿದ್ದಾರೆ. ವ್ಯಾಪಾರಸ್ಥರನ್ನು ಹಟಾವ್ ಮಾಡಿದ್ದು ಇದು ನ್ಯಾಯ ಎಂದು ಪ್ರಶ್ನಿಸಿದ್ದಾರೆ. ಟಿ.ಯು.ಸಿ.ಐ ಜಿಲ್ಲಾಧ್ಯಕ್ಷ ಬಿ.ಎನ್. ಯರದಿಹಾಳ. ಜಿಲ್ಲಾ ಕಾರ್ಯದರ್ಶಿ ಚಿಟ್ಟಿ ಬಾಬು. ತಾಲೂಕು ಅಧ್ಯಕ್ಷ ರಮೇಶ್ ಪಾಟೀಲ್ ಬೇರಿಗೆ.ಮಘರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



**ಬಡವರಿಗೊಂದು–ಶ್ರೀಮಂತನಿಗೊಂದು ನ್ಯಾಯ?**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಬದುಕುತ್ತಿದ್ದೇವೆ. ಕಾನೂನು ದೃಷ್ಟಿಯಲ್ಲಿ ಎಲ್ಲರಿಗೂ ಒಂದೇ ನ್ಯಾಯ. ಆದರೆ ಈ ರಸ್ತೆ ಅಗಲೀಕರಣ ವಿಷಯದಲ್ಲಿ ಬಡವರಿಗೊಂದು ಶ್ರೀಮಂತರಿಗೊಂದು ನ್ಯಾಯ ಮಾಡಲಾಗಿದೆ. ಸ್ಥಳೀಯ ರಾಜಕಾರಣಿಗಳು. ಅಧಿಕಾರಿಗಳು ತಾರತಮ್ಯ ಧೋರಣೆಯನ್ನು ನಮ್ಮ ಸಮಿತಿ ತೀವ್ರವಾಗಿ ಖಂಡಿಸುತ್ತದೆ ಎಂದು ರಮೇಶ್ ಪಾಟೀಲ್ ವಿವರಿಸಿದ್ದಾರೆ.

**ಪರಿಶಿಷ್ಟ ಜಾತಿ, ವರ್ಗಕ್ಕೆ ಬಳಸಬೇಕಾದ ಎಸ್‌ಇಪಿ, ಟಿಎಸ್‌ಪಿ ಹಣವನ್ನು ಸರಕಾರ ಅನ್ಯ ಉದ್ದೇಶಕ್ಕೆ ಬಳಸಿದೆ: ವಿಧಾನಪರಿಷತ್ ಪತ್ರಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ**

## ಮಧ್ಯಪ್ರಾಚ್ಯ ದೇಶಗಳಲ್ಲಿನ ಬಿಕ್ಕಟ್ಟು: ಸಹಾಯವಾಣಿ ಆರಂಭ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಮಧ್ಯಪ್ರಾಚ್ಯ ಹಾಗೂ ಕೊಲ್ಲಿ ದೇಶಗಳಲ್ಲಿ ಯುದ್ದ ಸಂಭವಿಸಿದ್ದು, ಅಪಾರ ಪ್ರಮಾಣದ ಸಾವು ನೋವು ಸಂಭವಿಸಿದೆ. ಸದರಿ ದೇಶಗಳಲ್ಲಿ ಕರ್ನಾಟಕದ ಹಲವರು ಸಿಲುಕಿಕೊಂಡಿರುವ ಮಾಹಿತಿಯಿದೆ.

ಬೆಂಗಳೂರು ಬೀದರ ಜಿಲ್ಲೆಯ ಯಾರಾದರೂ ಈ ಯುದ್ದ ಪೀಡಿತ ದೇಶಗಳಲ್ಲಿ ಸಿಲುಕಿದ್ದರೆ ಈ ಕೆಳಕಂಡ ದೇಶಗಳ ಕಂಟ್ರೋಲ್ ರೂಂಗೆ ಅಥವಾ ಬೀದರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯ ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರದ ದೂರವಾಣಿಗೆ ಕರೆ ಮಾಡಿ ಮಾಹಿತಿ ನೀಡಬೇಕೆಂದು ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಪ್ರಕಟಣೆಯಲ್ಲಿ ತಿಳಿಸಿದೆ.

ಬೀದರ ಜಿಲ್ಲೆ ವಿಪತ್ತು ನಿರ್ವಹಣಾ ಕೇಂದ್ರ ದೂರವಾಣಿ 08482–225409, ಕತಾರ್ (Qatar): 00974–55647502, ಬಹ್ರೇನ್: 00973–39418071, ಜೋರ್ಡಾನ್: 00962–770422276, ಓಮನ್ (Oman) Toll Free: 8007 1234, WhatsApp: +968 98282270. ಇರಾಕ್ : +964 771 651 1185 (English & Hindi), +964 770 444 4899 (Arabic). ಕುವೈತ್ (Kuwait): +96565501946. ಪ್ಯಾಲೆಸ್ಟೈನ್ (Palestine): +970592916418.

## ಕುಡಿಯುವ ನೀರಿನ ಸಮಸ್ಯೆಗೆ ಕರೆ ಮಾಡಲು ಸಾರ್ವಜನಿಕರಲ್ಲಿ ಮನವಿ

• ಮಲ್ಲಮ್ಮ ನುಡಿ ವಾರ್ತೆ ಬೀದರ

2025–26ನೇ ಸಾಲಿನ ಮುಂಬರುವ ಬೇಸಿಗೆಯಲ್ಲಿ ಬೀದರ ಜಿಲ್ಲೆಯ ನಗರ ಮತ್ತ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಉದ್ಭವಿಸುವ ಸಾಧ್ಯತೆಗಳಿರುತ್ತವೆ. ಈ ಹಿನ್ನಲೆಯಲ್ಲಿ ಜಿಲ್ಲೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ತಾಲ್ಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಯ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳು ನೀಡಲಾಗಿದೆ.ಅದಾಗ್ಯೂ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದಲ್ಲಿ ಸಾರ್ವಜನಿಕರು ನೇರವಾಗಿ ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಗ್ರಾಮೀಣ ಕುಡಿಯುವ ನಿರು ಮತ್ತು ನಯರ್ಮಲ್ಯ ಅಧಿಕಾರಿಗಳ ಗಮನಕ್ಕೆ ದೂರವಾಣಿ ಅಥವಾ ನೇರವಾಗಿ ಲಿಖಿತ ರೂಪದಲ್ಲಿ ತಮನಕ್ಕೆ ತಂದಲ್ಲಿ ಕುಡಿಯು ನೀರು ಸರಬರಾಜು ಮಾಡಲು ಅಗತ್ಯ ಕ್ರಮವನ್ನು ವಹಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಸಂಪರ್ಕಿಸಬೇಕಾದ ಅಧಿಕಾರಿಗಳ ವಿವರ: ಔರಾದ ತಾಲ್ಲೂಕಿನತಹಸೀಲ್ದಾರ (7795516277), ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ (9480856100), ಗ್ರಾ.ಕು.ನೀ. ಮತ್ತು ನೈ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (8618546863). ಕಮಲನಗರ ತಾಲ್ಲೂಕಿನ ತಹಸೀಲ್ದಾರ (9916729555), ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ (9886938068), ಗ್ರಾ.ಕು.ನೀ. ಮತ್ತು ನೈ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (8618546863).

ಬೀದರನ ತಹಸೀಲ್ದಾರ (9972743266), ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ (9448654111), ಗ್ರಾ.ಕು.ನೀ. ಮತ್ತು ನೈ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (9448890795).

## ಕಷ್ಟ ಪಟ್ಟು ಓದಬೇಡಿ ಇಷ್ಟಪಟ್ಟು ಓದಿ: ಪ್ರಾಣೇಶ

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ



ವಿದ್ಯಾಭ್ಯಾಸವನ್ನು ಕಷ್ಟ ಪಟ್ಟು ಅಧ್ಯಯನ ಮಾಡದೇ ಇಷ್ಟ ಪಟ್ಟು ಅಭ್ಯಾಸ ಮಾಡಿದರೆ ಯಾವುದೇ ಪರೀಕ್ಷೆ ಎದುರಿಸಲು ಕಠಿಣವಾಗುವುದಿಲ್ಲ ಎಂದು ಸಾಹಿತಿ ಹಾಸ್ಯ ಚಕ್ರವರ್ತಿ ಪ್ರಾಣೇಶ ಗಂಗಾವತಿ ಅವರು ನುಡಿದರು. ತಾಲೂಕಿನ ಮನ್ನಾಎಖ್ಖೇಳ್ಳಿ ಗ್ರಾಮದ ಬಸವ ಮಹಾಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ಅಂದಿನ ಪಾಠವನ್ನು ಅಂದೆ ಕಂಠ ಪಾಠ ಮತ್ತು ಸ್ಮರಣೆಯನ್ನು ಮಾಡಿದರೆ ಯಾವ ಪರೀಕ್ಷೆಯೂ ಕಠಿಣ ಇಲ್ಲ. ಶಿಕ್ಷಕರು ಹೇಳುವ ಪ್ರತಿಯೊಂದು ವಿಷಯಗಳು ಅರ್ಥಗರ್ಭಿತದಿಂದ ಕೂಡಿರುತ್ತದೆ.

ನಮ್ಮ ಯುವ ಜನತೆ ಶಿಕ್ಷಣದ ಜತೆಗೆ ಸಾಹಿತ್ಯದ ಅಭಿರುಚಿಯನ್ನು ಬೆಳೆಸಿಕೊಳ್ಳಬೇಕು. ಪಠ್ಯ ಪುಸ್ತಕದೊಂದಿಗೆ ಸಾಹಿತ್ಯವನ್ನು ಓದಬೇಕು ಎಂದರು.

ಹಾಸ್ಯ ಕಲಾವಿದ ನರಸಿಂಹ ಜೋಶಿ ಮಾತನಾಡಿ, ವಿದ್ಯಾರ್ಥಿ ಜೀವನವವೂ ಮತ್ತೆ ಮತ್ತೆ ತಿರುಗಿ ಬರುವುದಲ್ಲ. ಈ ಸಮಯವನ್ನು ಬಂಗಾರದ ಸಮಯ ಎನ್ನುವರು. ಕಾರಣ ಉತ್ತಮ ಶಿಕ್ಷಣವನ್ನು ಪಡೆದು ಶಾಲೆಗೆ ರಾಜ್ಯಕ್ಕೆ ಕೀರ್ತಿ ತರಬೇಕು ಎಂದರು. ಬಸವ ಮಹಾಮಠದ ಮಾತೆ ಮೈತ್ರಾದೇವಿ ಸಾನಿಧ್ಯವಹಿಸಿ ಮಾತನಾಡಿದರು. ಹಾಸ್ಯಕಲಾವಿದ ಬಸವರಾಜ ಮಹಾಮನಿ ಅವರು ಮಕ್ಕಳಿಗೆ ಜೀವನದಲ್ಲಿ ಶಿಕ್ಷಣದ ಮಹತ್ವ ಮತ್ತು ಸಾಧನೆ ಕುರಿತು ಮಾತನಾಡಿದರು. ಹಾಸ್ಯಕಲಾವಿದ ನವಲಿಂಗ ಪಾಟೀಲ ಅವರು ಪ್ರಾಸ್ತವಿಕವಾಗಿ ಮಾತನಾಡಿದರು.

ಜೇವರ್ಗಿ ಪುರಸಭೆ ಮುಖ್ಯಾಧಿಕಾರಿ ಶಂಭುಲಿಂಗದೇಸಾಯಿ, ಮುಖ್ಯಶಿಕ್ಷಕ ಶಿವರಾಜ ಮನ್ನಳ್ಳಿ, ಗುರುಲಿಂಗಪ್ಪ ಉಳ್ಳಾಗಡಿ, ಪ್ರಮುಖರಾದ ಶಾರದಾ ಪಾಟೀಲ, ಬಸವಪ್ರಸಾದ ಪಾಟೀಲ, ವೈಷ್ಣವಿ ಪಾಟೀಲ, ಸಂತೋಷರೆಡ್ಡಿ ಸೋನಿ, ನೀಲೇಶ ಘನಾತೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಹಿಂದೂಗಳ ಮೇಲೆ ದಾಳಿ: ಕಠಿಣ ಕ್ರಮಕ್ಕೆ ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಬೀದರ



ರಾಜ್ಯದ ವಿವಿಧ ಭಾಗಗಳಲ್ಲಿ ಹಿಂದೂ ಸಮುದಾಯದ ಮನೆಗಳು, ಶಾಂತಿಯುತ ಮೆರವಣಿಗೆಗಳು ಹಾಗೂ ವ್ಯಕ್ತಿಗಳ ಮೇಲೆ ನಿರಂತರ ದಾಳಿ ನಡೆಯುತ್ತಿರುವ ಘಟನೆಗಳ ಬಗ್ಗೆ ಹಿಂದೂ ರಾಷ್ಟ ಸಮನ್ವಯ ಸಮಿತಿ ತೀವ್ರ ಆತಂಕ ವ್ಯಕ್ತಪಡಿಸಿದೆ. ಈ ಕುರಿತು ಗೃಹ ಸಚಿವರು, ಪೊಲೀಸ್ ಮಹಾನಿರ್ದೇಶಕರಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಫೆಬ್ರವರಿ22ರಂದು ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ನಡೆಯುತ್ತಿದ್ದ ಮೆರವಣಿಗೆಯ ಮೇಲೆ ಕಲ್ಲುತೂರಾಟ ನಡೆದಿದ್ದು, ಕರ್ತವ್ಯದಲ್ಲಿದ್ದ ಎಸ್‌ಪಿ ಸಿದ್ದಾರ್ಥ್ ಗೋಯಲ್ ಸೇರಿದಂತೆ ಕೆಲವರು ಗಾಯಗೊಂಡಿದ್ದಾರೆ.

ಫೆಬ್ರವರಿ 24ರಂದು ಚಿಕ್ಕಮಗಳೂರು (ತಿಲಕ್ ಪಾರ್ಕ್ ಸಮೀಪ) ಹಾಗೂ ಉತ್ತರ ಕನ್ನಡ ಜಿಲ್ಲೆಯ ಬೈಲೂರು, ಮುರುಡೇಶ್ವರ ಪ್ರದೇಶಗಳಲ್ಲಿ ಹಿಂದೂ ಮನೆಗಳ ಮೇಲೆ ಕಲ್ಲು ತೂರಾಟ ನಡೆಸಿ ಆತಂಕ ಸೃಷ್ಟಿಸಿರುವುದಾಗಿ ಆರೋಪಿಸಲಾಗಿದೆ. ಕೆಲವು ಆರೋಪಿಗಳನ್ನು ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿರುವುದಾಗಿ ತಿಳಿಸಲಾಗಿದೆ.

ಇದೇ ದಿನ ಶಿವಮೊಗ್ಗ ಜಿಲ್ಲೆಯ ಊರಗಡೂರಿನಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಯ ಹತ್ಯೆ ನಡೆದಿರುವುದಾಗಿ ಹಾಗೂ ಫೆಬ್ರವರಿ 25ರಂದು ಚಿತ್ರದುರ್ಗದಲ್ಲಿ ಮೊಬೈಲ್ ಅಂಗಡಿ ಮಾಲೀಕ ಹಾಗೂ ಹಿಂದೂ ನಾಯಕ ವಿಕ್ರಮ್ ಚೌದ್ರಿಗೆ ಚಾಕು ಇರಿತ ನಡೆದಿರುವ ಘಟನೆಗಳನ್ನೂ ಸಮಿತಿ ಉಲ್ಲೇಖಿಸಿದೆ.

ಈ ಎಲ್ಲಾ ಘಟನೆಗಳ ಬಗ್ಗೆ ವೇಗವಾದ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕು, ಅಪರಾಧಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು, ಪರಾರಿಯಾಗಿರುವ ಆರೋಪಿಗಳನ್ನು ಬಂಧಿಸಲು ವಿಶೇಷ ತಂಡ ರಚಿಸಬೇಕು ಹಾಗೂ ಮೆರವಣಿಗೆಗಳು ಮತ್ತು ಮನೆಗಳಿಗೆ ಸಮರ್ಪಕ ಪೊಲೀಸ್ ಭದ್ರತೆ ಒದಗಿಸಬೇಕು ಎಂದು ಸಮಿತಿ ಆಗ್ರಹಿಸಿದೆ.

ರಾಜ್ಯದಲ್ಲಿ ಶಾಂತಿ ಮತ್ತು ಸೌಹಾರ್ದ ಕಾಪಾಡಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಹಿಂದೂ ರಾಷ್ಟ ಸಮನ್ವಯ ಸಮಿತಿಯ ಜಿಲ್ಲಾ ಸಂಯೋಜಕರು ಶ್ರೀಕಾಂತ ಮೋದಿ, ಸಹ ಸಂಯೋಜಕರು ಗೋಪಾಲಕೃಷ್ಣ, ಶ್ರೀಮತಿ ಹೇಮಂತಾ ಜೋಶಿ, ಶ್ರೀಮತಿ ಮಾಯಾವತಿ ಕೋಟೆ, ಶ್ರೀಮತಿ ಜೋತಿ ಅನೀಲಕುಮಾರ, ಸಂಜುಕುಮಾರ ಸಜ್ಜನ, ನೀಲಕಂಠ ಉಳ್ಳಾಗಡ್ಡಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

## ಗ್ರಹಣಗಳಿಗೆ ಹೆಚ್ಚು ಒತ್ತು ನೀಡದೇ ಭಕ್ತಿಯಿಂದ ದೇವರ ಪೂಜೆ ಮಾಡಿದರೆ ಸಾಕು

ಭಾರತೀಯ ಸಂಸ್ಕೃತಿಯಲ್ಲಿ ಸೂರ್ಯಗ್ರಹಣ, ಚಂದ್ರಗ್ರಹಣಗಳಿಗೆ ವಿಶೇಷ ಮಹತ್ವ ನೀಡಲಾಗುತ್ತದೆ. ಪುರಾತನ ಕಾಲದಿಂದಲೂ ಗ್ರಹಣಗಳ ಸಮಯದಲ್ಲಿ ವಿವಿಧ ವಿಧಿ ವಿಧಾನಗಳನ್ನು ಪಾಲಿಸುವ ಪರಂಪರೆ ನಮ್ಮ ಸಮಾಜದಲ್ಲಿ ಕಂಡು ಬರುತ್ತಿದೆ. ಆದರೆ ಕಾಲ ಬದಲಾಗುತ್ತಿದ್ದಂತೆ ವಿಜ್ಞಾನ ಮತ್ತು ಜ್ಞಾನ ಬೆಳವಣಿಗೆಯೊಂದಿಗೆ ಗ್ರಹಣಗಳ ಬಗ್ಗೆ ಇರುವ ಅನೇಕ ಅಂಧನಂಬಿಕೆಗಳನ್ನು ಪ್ರಶ್ನಿಸುವ ಅಗತ್ಯವೂ ಉಂಟಾಗಿದೆ.

ಗ್ರಹಣವೆಂಬುದು ಪ್ರಕೃತಿಯಲ್ಲಿ ನಡೆಯುವ ಒಂದು ಖಗೋಳೀಯ ಘಟನೆ ಮಾತ್ರ. ಸೂರ್ಯ, ಚಂದ್ರ ಮತ್ತು ಭೂಮಿ ಒಂದೇ ಸರಳ ರೇಖೆಯಲ್ಲಿ ಬರುವ ಸಂದರ್ಭದಲ್ಲೇ ಇದು ಸಂಭವಿಸುತ್ತದೆ. ಇದರಲ್ಲಿ ಅತೀಂದ್ರಿಯ ಅಥವಾ ಭಯ ಹುಟ್ಟಿಸುವಂತಹ ಯಾವುದೇ ಅಂಶವಿಲ್ಲವೆಂದು ವಿಜ್ಞಾನಿಗಳು ಸ್ಪಷ್ಟಪಡಿಸಿದ್ದಾರೆ. ಆದರೂ ಕೆಲವರು ಗ್ರಹಣದ ಸಮಯದಲ್ಲಿ ಅನಾವಶ್ಯಕ ಭಯ ಹಾಗೂ ಕಟ್ಟುನಿಟ್ಟಿನ ನಂಬಿಕೆಗಳಿಗೆ ಹೆಚ್ಚು ಒತ್ತು ನೀಡುತ್ತಿರುವುದು ಕಾಣಿಸುತ್ತದೆ.

ಧರ್ಮದ ಮೂಲ ಉದ್ದೇಶ ಮನುಷ್ಯನಲ್ಲಿ ಶಾಂತಿ, ನಂಬಿಕೆ ಮತ್ತು ನೈತಿಕತೆಯನ್ನು ಬೆಳೆಸುವುದು. ದೇವರ ಆರಾಧನೆ ಎಂದರೆ ಮನಸ್ಸಿನ ಭಕ್ತಿ ಮತ್ತು ಶ್ರದ್ಧೆ ಮುಖ್ಯ. ಯಾವ ಸಮಯದಲ್ಲಾದರೂ ಭಕ್ತಿಯಿಂದ ದೇವರನ್ನು ಪೂಜಿಸಿದರೆ ಅದೇ ಸಾರ್ಥಕವಾದ ಆರಾಧನೆ. ಗ್ರಹಣದ ಸಮಯದಲ್ಲೇ ವಿಶೇಷ ಪೂಜೆ ಮಾಡಬೇಕು ಅಥವಾ ಅದನ್ನು ತಪ್ಪಿಸಿದರೆ ಅನಿಷ್ಟ ಸಂಭವಿಸುತ್ತದೆ ಎಂಬ ಭಯವನ್ನು ಮೂಡಿಸುವುದು ಸರಿಯಾದ ಧಾರ್ಮಿಕ ಮನೋಭಾವವಲ್ಲ.

ಇಂದಿನ ಶಿಕ್ಷಣ ಪಡೆದ ಸಮಾಜದಲ್ಲಿ ಅಂಧನಂಬಿಕೆಗಳಿಗೆ ಅವಕಾಶ ನೀಡದೆ, ವಿಜ್ಞಾನಬದ್ಧವಾದ ದೃಷ್ಟಿಕೋನವನ್ನು ಬೆಳೆಸುವುದು ಅಗತ್ಯವಾಗಿದೆ. ಮಕ್ಕಳಿಗೂ ಯುವಜನತೆಗೆ ಗ್ರಹಣವೆಂಬುದು ಪ್ರಕೃತಿಯ ಒಂದು ಸಹಜ ಘಟನೆ ಎಂದು ತಿಳಿಸುವ ಜವಾಬ್ದಾರಿ ಸಮಾಜದ ಮೇಲೆ ಇದೆ. ಇದರಿಂದ ಅವರು ಭಯವಿಲ್ಲದೆ ಜ್ಞಾನಪೂರ್ಣವಾಗಿ ಬದುಕಲು ಸಾಧ್ಯವಾಗುತ್ತದೆ.

ಆದರೆ ಇದರರ್ಥ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ತಿರಸ್ಕರಿಸುವುದಲ್ಲ. ದೇವರ ಮೇಲೆ ಭಕ್ತಿ ಇರುವುದು ಒಳ್ಳೆಯದು. ಆದರೆ ಭಕ್ತಿ ಅಂಧನಂಬಿಕೆಯಾಗಬಾರದು. ದೇವರನ್ನು ಭಕ್ತಿಯಿಂದ ಸ್ಮರಿಸುವುದು, ಒಳ್ಳೆಯ ಕೆಲಸಗಳನ್ನು ಮಾಡುವುದು, ಸಮಾಜದ ಒಳಿತಿಗಾಗಿ ಕಾರ್ಯನಿರ್ವಹಿಸುವುದೇ ನಿಜವಾದ ಪೂಜೆ.

ಹೀಗಾಗಿ ಗ್ರಹಣಗಳಿಗೆ ಅನಾವಶ್ಯಕ ಮಹತ್ವ ನೀಡುವುದಕ್ಕಿಂತ ಭಕ್ತಿಯಿಂದ ದೇವರ ಆರಾಧನೆ ಮಾಡುವುದು, ವಿಜ್ಞಾನಬದ್ಧ ಚಿಂತನೆ ಬೆಳೆಸುವುದು ಮತ್ತು ಸಮಾಜದಲ್ಲಿ ಜ್ಞಾನ ಹರಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಇದೇ ನಿಜವಾದ ಧಾರ್ಮಿಕತೆಯೂ ಆಗಿದೆ.

## ಮಹೇಶ್ ವಾಲಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕನ್ಸ್ಲ್ಟಿಂಗ್ ಸಿವಿಲ್ ಇಂಜಿನೀಯರಿಂಗ್ ಸಂಘದ ವತಿಯಿಂದ ಇತ್ತೀಚಿಗೆ ಬಣಜಿಗ ಸಮಾಜದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮಹೇಶ್ ವಾಲಿ ಅವರಿನ್ನು ಸೋಮವಾರ ಭೇಟಿ ಮಾಡಿ ಸನ್ಮಾನಿಸಲಾಯಿತು. ಈ ಸಂಧರ್ಭದಲ್ಲಿ ಕನ್ಸ್ಲ್ಟಿಂಗ್ ಸಿವಿಲ್ ಇಂಜಿನಿಯರ್ ಸಂಘದ ಅಧ್ಯಕ್ಷ ಭೀಮಣ್ಣಗೌಡ ಕ್ಯಾತ್ನಾಳ್, ಇಂಜಿನಿಯರ್ ಮುಕುಂದ ಆಚಾರ್ಯ, ಹೇಮಂತ್ ಕುಮಾರ್, ಬನ್ನಪ್ಪ ಸಜ್ಜನ್, ಶಿವಪುತ್ರ ಇದ್ದರು.

## ಕಸಾಪ ಅಧ್ಯಕ್ಷ ವಿರುದ್ಧ ವೀರೇಶ ತುಗಾಂವ ಆಕ್ರೋಶ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ತಾಲ್ಲೂಕು 3ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಪರಿಷತ್ತಿನ ಸದಸ್ಯರು ಹಾಗೂ ನಿಕಟಪೂರ್ವ ಪದಾಧಿಕಾರಿಗಳಿಗೆ ಯಾವುದೇ ಮಾಹಿತಿ ನೀಡದೆ, ಸಭೆಗೆ ಕರೆಯದೆ ಏಕ ಪಕ್ಷೀಯವಾಗಿ ನಡೆಸಲಾಗಿದೆ ಎಂದು ಬೀದರ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರು ಹಾಗೂ ಕಸಾಪ ಸದಸ್ಯ ವೀರೇಶ್ ತುಗಾಂವ ಆರೋಪಿಸಿದ್ದಾರೆ. ಮಂಗಳವಾರ ಪಟ್ಟಣದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತಿಚೆಗೆ ನಗರದಲ್ಲಿ ನಡೆದ 3ನೇ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನವನ್ನು ಏಕ ಪಕ್ಷೀಯವಾಗಿ ಮಾಡಿದ್ದಾರೆ. ಸಂಘಟನೆ ಎಂದರೆ ಎಲ್ಲ ಸದಸ್ಯರನ್ನು ಸಮಾನವಾಗಿ ಒಳಗೊಂಡು ಸಮಿತಿ ರಚಿಸಿ, ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಜವಾಬ್ದಾರಿಗಳನ್ನು ನೀಡಿ ಕಾರ್ಯಕ್ರಮ ನಡೆಸಬೇಕು. ಆದರೆ ಇಲ್ಲಿ ಕೇವಲ 810 ಸದಸ್ಯರನ್ನು ಮಾತ್ರ ಒಳಗೊಂಡು ಏಕವ್ಯಕ್ತಿ ಪ್ರದರ್ಶನದಂತೆ ಸಮ್ಮೇಳನ ಆಚರಿಸಲಾಗಿದೆ, ಇದಲ್ಲದೆ ಸಾಹಿತ್ಯ ಸಮ್ಮೇಳನಕ್ಕಾಗಿ ಸರ್ಕಾರಿ ಅಧಿಕಾರಿಗಳಿಂದ ಹಣ ವಸೂಲಿ ಮಾಡಿದ್ದಾರೆ. ಇದರ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದರು. ಈ ಹಿನ್ನೆಲೆಯಲ್ಲಿ ಜಿಲ್ಲಾಧ್ಯಕ್ಷರು ತಕ್ಷಣ ಕ್ರಮ ಕೈಗೊಂಡು ಪ್ರಸ್ತುತ ಅಧ್ಯಕ್ಷರನ್ನು ವಜಾಗೊಳಿಸಿ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಬೇಕು. ಅಗತ್ಯವಿದ್ದರೆ ರಾಜ್ಯಾಧ್ಯಕ್ಷರಿಗೂ ಪತ್ರ ಬರೆಯುವುದಾಗಿ ವೀರೇಶ ತೂಗಾಂವ ತಿಳಿಸಿದ್ದಾರೆ. ಈ ಬೆಳವಣಿಗೆ ಚಿಟಗುಪ್ಪ ಸಾಹಿತ್ಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದ್ದು, ಸಂಘಟನೆಯ ಒಳಗಿರುವ ಹಲವಾರು ಕನ್ನಡಾಭಿಮಾನಿಗಳು ಅ ಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರಶಾಂತ ಮೈನಳ್ಳಿ, ಸಂತೋಷ, ಸುನೀಲ ಇದ್ದರು.

## ವಿಜ್ಞಾನ, ಪರಿಸರ ಸಂರಕ್ಷಣೆ ಜನ ಜಾಗೃತಿ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ದೇಶದ ಅಭಿವೃದ್ಧಿಯಲ್ಲಿ ವೈಜ್ಞಾನಿಗಳ ಕೊಡುಗೆ ಅಪಾರವಾಗಿದೆ ಎಂದು ಗುಂಡಪ್ಪ ಹುಡುಗೆ ತಾಲೂಕಿನ ನಿರ್ಣಾ ಗ್ರಾಮದ ಸರ್ಕಾರಿ ಕನ್ಯಾ ಪ್ರೌಢ ಶಾಲೆಯಲ್ಲಿ ರಾಷ್ಟ್ರೀಯ ಹಸಿರು ಪಡೆ ಯೋಜನೆ ಅಡಿಯಲ್ಲಿ ಹಮ್ಮಿಕೊಂಡಿದ್ದ ವಿಜ್ಞಾನ ದಿನಾಚರಣೆ ಹಾಗೂ ಪರಿಸರ ಸಂರಕ್ಷಣೆ ಜನಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಪರಿಸರ ಸಮತೋಲನ ಕಾಪಾಡಲು ಪ್ರತಿಯೊಬ್ಬರು ಮರ ಗಿಡ ಬೆಳೆಸಿ ಉಳಿಸಬೇಕೆಂದು ತಿಳಿಸಿದರು. ಪರಿಸರವಾದಿ ಶೈಲೇಂದ್ರ ಕಾವಡಿ ಮಾತನಾಡಿ, ಈ ವರ್ಷದ ವಿಶ್ವ ಪರಿಸರ ದಿನಾಚರಣೆಯ ಘೋಷ ವಾಕ್ಯವಾದ ಪ್ಲಾಸ್ಟಿಕ್ ಮಾಲಿನ್ಯ ಹೋಗಲಾಡಿಸಿ ಪ್ರತಿಯೊಬ್ಬರು ಕಡ್ಡಾಯವಾಗಿ ಈ ಘೋಷವಾಕ್ಯವನ್ನು ಕೃತಿಯಲ್ಲಿ ತರಲು ತಮ್ಮ ತಮ್ಮ ಮನೆಯಲ್ಲಿ ಪ್ಲಾಸ್ಟಿಕ್ ನಿಷೇಧಿಸುವ ಸಂಕಲ್ಪ ವಿದ್ಯಾರ್ಥಿಗಳು ಮಾಡಬೇಕೆಂದು ತಿಳಿಸಿದರು. ಪ್ರತಿ ವರ್ಷ ಎರಡು 220 ಕೋಟಿ ಟನ್ ಪ್ಲಾಸ್ಟಿಕ್ ತಾಜ್ಯ ಉತ್ಪತ್ತಿಯಾಗುತ್ತಿದೆ, ಇದರಿಂದ ಜಲ ಮಾಲಿನ್ಯ, ಮಣ್ಣಿನ ಮಾಲಿನ್ಯವಾಗುತ್ತಿದೆ ಎಂದು ತಿಳಿಸಿದರು. ಪತ್ರಕರ್ತರ ರಾಜಕುಮಾರ್ ಆರ್. ಹಡಪದ ಮಾತನಾಡಿ, ರಾಷ್ಟ್ರೀಯ ಹಸಿರು ಪಡೆ ಯೋಜನೆ ಪರಿಸರ ಅರಿವು ಒಡ ಮೂಡಿಸಲು ತುಂಬಾ ಸಹಾಯವಾಗಿದೆ ಎಂದರು. ಡಾ. ರವಿ ಸ್ವಾಮಿ ನಿರ್ಣಾ ಮಾತನಾಡಿ, ಈ ವರ್ಷದ 10ನೇ ತರಗತಿಗ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದವರಿಗೆ 5000 ರೂಪಾಯಿ ಕೊಡುವುದಾಗಿ ಘೋಷಣೆ ಮಾಡಿದರು. ಶಾಲೆಯ ಮುಖ್ಯ ಶಿಕ್ಷಕಿ ಸರುಬಾಯಿ ಪವರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಮ್ಮ ಶಾಲೆ ಪರಿಸರ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಿದ್ದೇವೆ. ಹಾಗೂ ವಿಜ್ಞಾನ ತಂತ್ರಜ್ಞಾನ ಅರಿವು ಒಡ ಮೂಡಿಸಲು ನಮ್ಮ ಶಾಲೆಯ ಶಿಕ್ಷಕರು ಶ್ರಮಿಸುತ್ತಿದ್ದಾರೆ ಎಂದರು. ವಿಜ್ಞಾನ ಶಿಕ್ಷಕ ಮಲ್ಲಪ್ಪ ಅವರು ವಿಜ್ಞಾನ ದಿನಾಚರಣೆ ಬಗ್ಗೆ ಸುದೀರ್ಘವಾಗಿ ಮಾತನಾಡಿದರು. ವಿದ್ಯಾರ್ಥಿಗಳಿಂದ ಕಿರು ನಾಟಕಗಳು ಪ್ರದರ್ಶನ ಮಾಡಲಾಯಿತು. ಪ್ರಬಂಧ, ಚಿತ್ರಕಲಾ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಕರಾದ ಸುರೇಖಾ, ಮೌನೇಶ್ವರಿ, ಆಶಾರಾಣಿ, ಸುನೀತಾ, ವಿಜ್ಞಾನ ಶಿಕ್ಷಕಿ ಭವ್ಯ ನಿರಪಿಸಿದರು ದೈಹಿಕ ಶಿಕ್ಷಕ ಜೈಪಾಲ ರೆಡ್ಡಿ ಕೊನೆಯಲ್ಲಿ ವಂದಿಸಿದರು. ಶಾಲೆ ಸಿಬ್ಬಂದಿ ವರ್ಗ ಸೇರಿದಂತೆ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ಕಾಮಣ್ಣನ ದಹನಕ್ಕೆ ಅಗ್ನಿ ಸ್ಪರ್ಶ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ಪಟ್ಟಣದ ಸುಭಾಷ್ ಚೌಕ್ ಸೇರಿದಂತೆ ವಿವಿದೆಡೆ ಹೋಳಿ ಹುಣ್ಣಿಮೆ ದಿನದಂದು ಕಾಮಣ್ಣನ ದಹನಕ್ಕೆ ಪೂಜೆ ಸಲ್ಲಿಸಿ ಅಗ್ನಿ ಸ್ಪರ್ಶ ಮಾಡಿ, ಶ್ರದ್ಧೆ, ಭಕ್ತಿ, ನಿಷ್ಠೆ ಮತ್ತು ಸಡಗರ ಸಂಭ್ರಮದಿಂದ ಹೋಳಿ ಹುಣ್ಣಿಮೆ ಆಚರಿಸಲಾಯಿತು.


ಪಟ್ಟಣದ ಸುಭಾಷ್ ಚೌಕ್‌ನಲ್ಲಿ ಹೋಳಿ ಹುಣ್ಣಿಮೆ ದಿನದಂದು ಪುರಸಭೆಯ ನಾಮನಿರ್ದೇಶಿತ ಸದಸ್ಯ ಪಂಚಶೀಲ ಪಾಟೀಲ ಕಾಮಣ್ಣನ ದಹನಕ್ಕೆ ಪೂಜೆ ಸಲ್ಲಿಸಿ ಅಗ್ನಿ ಸ್ಪರ್ಶ ಮಾಡಿ, ಮಾತನಾಡಿದ ಅವರು, ಪ್ರತಿಯೊಂದು ಸಂಪ್ರದಾಯದಲ್ಲಿ ತನ್ನದೆಯಾದ ಮೌಲ್ಯವಿದೆ. ಕಾಮ ದಹನ ಮಾಡುವುದು ಪ್ರಾಚೀನ ಕಾಲದಿಂದಲೂ ನಡೆದು ಬಂದ ಪರಂಪರೆಯಾಗಿದೆ.

ಕಾಮ ದಹನದ ಮೂಲ ಉದ್ದೇಶ ದುಷ್ಟರ ದುಷ್ಟಗುಣಗಳನ್ನು ಕಾಮಣ್ಣನ ಬೆಂಕಿ ಸುಟ್ಟು ಹಾಕಲಿ ಹಾಗೂ ಶಿಷ್ಟರ ರಕ್ಷಣೆ ಕಾಮಣ್ಣನಿಂದ ಆಗಲಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಯುವಕರು ಕೆಲವು ಸ್ಲೋಗನ ಹೇಳಿ, ಬೊಬ್ಬೆ ಹೊಡೆಯುವ ಮೂಲಕ ಹೋಳಿ ಆಚರಣೆ ಮಾಡಿದರು. ಪ್ರತಾಪ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಪರಶುರಾಮ್ ಹುಟ್ಟುಹಬ್ಬ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ

ಸಮಾಜದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆ ಪಾತ್ರ ಮಹತ್ವದ್ದಾಗಿದೆ ಎಂದು ಪಟ್ಟಣದಲ್ಲಿ ಪೊಲೀಸ್ ಪೇದೆಯಾಗಿ ಸೇವೆ ಸಲ್ಲಿಸುತ್ತಿರುವ ಪರಶುರಾಮ್ ರವರ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಮಹೇಶ ಭಾರಮಭಾಯಿ ರವರು ಮಾತನಾಡುತ್ತಾ ನುಡಿದರು. ಹಗಲು–ರಾತ್ರಿ ಎನ್ನದೇ ಕಾನೂನು ಸುವ್ಯವಸ್ಥೆ ಹಾಗೂ ಶಾಂತತೆ ಕಾಪಾಡಲು ಪೊಲೀಸ್ ಸಿಬ್ಬಂದಿ ಸದಾ ಕಾರ್ಯನಿರತರಾಗಿರುತ್ತಾರೆ.



ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು, ನೊಂದವರಿಗೆ ಭರವಸೆ ನೀಡುವುದು ಪೊಲೀಸ್ ಕಾರ್ಯವೈಖರಿ. ಪ್ರತಿಯೊಂದು ಹಂತದಲ್ಲಿ ಪೊಲೀಸರ ಅವಶ್ಯಕತೆ ಇದೆ. ನೆಮ್ಮದಿಯ ಅಪರಾಧ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಪೊಲೀಸರ ಕರ್ತವ್ಯ ಮೆಚ್ಚುವಂತದ್ದು ಎಂದು ಹೇಳಿದರು.

ಪೊಲೀಸ್ ಇಲಾಖೆ ಬೇರೆ ಇಲಾಖೆಯ ರೀತಿ ಅಲ್ಲ. ಇದೊಂದು ಶಿಸ್ತಿನ ಇಲಾಖೆ. ಬಹಳಷ್ಟು ಜನರು ಸರಕಾರಿ ಕೆಲಸಕ್ಕೆ ಸೇರಬೇಕೆಂಬ ಬಯಕೆ ಇರುತ್ತದೆ. ಅಂತದರಲ್ಲಿ ನೀವು ಪೊಲೀಸ್ ಇಲಾಖೆಯಲ್ಲಿ ಸೇರ್ಪಡೆಯಾಗಿದ್ದೀರಿ ಹಾಗೂ ಜವಾಬ್ದಾರಿಯಿಂದ ಕೆಲಸ ಮಾಡುತ್ತೀರಿ ಎಂಬ ನಂಬಿಕೆ ನನಗಿದೆ ಎಂದರು. ಪೊಲೀಸ್ ಪೇದೆಯಾದ ಸೋಮಶೇಖರ ಸಜ್ಜನ್, ವಿಜಯಕುಮಾರ, ಬಾಲಾಜಿ, ಚನ್ನವೀರ, ಸಂಗಮೇಶ, ಜ್ಯೋತಿಬಾ ಜಾಧವ ರವರು ಪರಶುರಾಮರವರಿಗೆ ಶಾಲು ಹೊದಿಸಿ ಸನ್ಮಾನಿಸಿ ಹುಟ್ಟುಹಬ್ಬದ ಶುಭಾಷಯಗಳು ಕೋರಿದರು. ಈ ಸಂದರ್ಭದಲ್ಲಿ ಅವಿನಾಶ, ದತ್ತು ಗುತ್ತಿ, ಸಾಯಿಕುಮಾರ, ಅನೀಲರೆಡ್ಡಿ ಉಪಸ್ಥಿತರಿದ್ದರು.

## ಸಂಭ್ರಮದಿಂದ ಹೋಳಿ ಹಬ್ಬ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಮಂಗಳವಾರ ಜೈ ಶ್ರೀರಾಮ್ ಚಾರಿಟೇಬಲ್ ಎಜುಕೇಶನ್ ಸೊಸೈಟಿ ವಿದ್ಯಾನಗರ ಬಡಾವಣೆ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷ ಕೂಡ ಸೊಸೈಟಿ ಎಲ್ಲಾ ಸದಸ್ಯರು ಚಿಣ್ಣರು, ಯುವಕರು, ಬಣ್ಣದೋಕಳಿಯಲ್ಲಿ ಮಿಂದೆದ್ದರು. ಪುಟಾಣಿಗಳು ಪಿಚಕಾರಿಗಳ ಮೂಲಕ ದಾರಿ ಹೋಕರಿಗೆ ತಮ್ಮ ಗೆಳೆಯರಿಗೆ ಬಣ್ಣ ಎರಚಿ ಸಂಭ್ರಮಿಸಿದರು.

ಬೊಬ್ಬೆ ಮೂಲಕ ಪರಸ್ಪರ ಬಣ್ಣ ಎರಚಿ ಸಂಭ್ರಮಿಸಿದರು. ಸೊಸೈಟಿ ಅಧ್ಯಕ್ಷ ಚಂದ್ರಶೇಖರ್ ಪೊಲೀಸ್,

ಸೊಸೈಟಿಯ ಉಪಾಧ್ಯಕ್ಷ ಶ್ರೀಕಾಂತ್ ಪಾಟೀಲ್, ಕಲ್ಯಾಣರಾವ ಬಿರಾದರ, ಮೋಹನ್ ಸೋನಾರ್, ಪ್ರಭು ಆಲೊರೆ, ರಾಜಕುಮಾರ್

ಸೋನಾರ್, ಸಂತೋಷ್ ಕುಮಾರಸೋನಾರ, ಪ್ರಭಾಕರ್ ಜಟ್ಲಾ, ಜಗದೀಶ್ ಜಟ್ಲಾ, ಸೂರ್ಯಕಾಂತ್ ಕೋಟೆ, ಬಾಬುರಾವ್ ಸಂಗೊಳ್ಳಿಗಿ, ಹಾವಗಿರಾವ, ನಾಗೇಂದ್ರರೆಡ್ಡಿ, ರಾಚಪ್ಪ ಪಾಟೀಲ್, ಶ್ರೀಮಂತ ಪಾಟೀಲ್, ಶ್ರೀನಿವಾಸ್ ಗದ್ದೆ, ನರೇಂದ್ರಚಾರಿ, ಬಾಲು ಸುಬ್ರಮಣ್ಯಂ ಚಾಲಕ್, ವೀರಶೆಟ್ಟಿ ಹುಡುಗೆ, ಮಲ್ಲಿಕಾರ್ಜುನ್ ಯಾಕಾತಪುರ, ನಾಗಪ್ಪ ಮಿಲಿಟರಿ, ವಿಜಯ್ ಕುಮಾರ್ ಹದಿನೂರೇ, ಹವಾಗಿರಾವ ಉದಗಿರೆ,

ಪ್ರಕಾಶ ಗದ್ದೆ, ಭರತ್, ನಕುಲ್ ಪಾಟೀಲ್, ವೈಭವ್ ಪಾಟೀಲ್ ಸೇರಿದಂತೆ, ಪ್ರಮುಖರು ವಿವಿಧರೀತಿಯ ಬಣ್ಣಗಳನ್ನು ತಮ್ಮ ಮುಖಕ್ಕೆ, ಮೈಮೇಲೆ ಹಚ್ಚಿಕೊಂಡು ಒಬ್ಬರಿಗೊಬ್ಬರು

ಗುರುತು ಸಿಗದಂತೆ ಕಂಡು ಬಂತು.

# ಡಿಗ್ಗಿ ಗ್ರಾಮದಲ್ಲಿ ಸಂಭ್ರಮದ ಹೋಳಿ ದಹನ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ**

ತಾಲೂಕಿನ ಡಿಗ್ಗಿ ಗ್ರಾಮದಲ್ಲಿ ಸೋಮವಾರ ಸಂಜೆ ಹೋಳಿ ಹಬ್ಬದ ಪ್ರಯುಕ್ತ ಅತ್ಯಂತ ಸಡಗರ–ಸಂಭ್ರಮದಿಂದ 'ಹೋಳಿ ದಹನ' (ಕಾಮದಹನ) ಕಾರ್ಯಕ್ರಮವನ್ನು ಆಚರಿಸಲಾಯಿತು.

ಗ್ರಾಮದ ಪ್ರಮುಖ ಮಡಿವಾಳೇಶ್ವರ ದೇವಸ್ಥಾನ ಮುಂಭಾಗದಲ್ಲಿ ಗ್ರಾಮಸ್ಥರೆಲ್ಲರೂ ಒಂದೆಡೆ ಸೇರಿ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿ, ನಂತರ ಹೋಳಿ ದಹನ ಮಾಡಿದರು. ಕೆಟ್ಟದ್ದನ್ನು ಸುಟ್ಟು ಹಾಕುವ ಸಂಕೇತವಾಗಿ ಆಚರಿಸಲಾಗುವ ಈ ಸಂಪ್ರದಾಯದಲ್ಲಿ ಹಿರಿಯರು, ಯುವಕರು ಮತ್ತು ಮಹಿಳೆಯರು ನೈವೇದ್ಯ ಅರ್ಪಿಸಿ ಪೂಜೆ ಮಾಡಿ ನಮಿಸಿದರು.

# ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರಕ್ಕೆ ಚಾಲನೆ



• **ಮಲ್ಲಮ್ಮ ನುಡಿ ಹುಣಸಗಿ**

ಶ್ರೀ ಆದಿ ಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ರಾಯಚೂರು ಹಾಗೂ ಸ್ವಾಮಿ ವಿವೇಕಾನಂದ ಪದವಿ ಮಹಾವಿದ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನಾ ಸಮಾರಂಭವು ತಾಲೂಕಿನ ಚೆನ್ನೂರ ತಾಂಡದಲ್ಲಿ ರಾಷ್ಟ್ರೀಯ ಭಾವೈಕ್ಯತೆಯ ವಾತಾವರಣದಲ್ಲಿ ಸಡಗರದಿಂದ ಜರುಗಿತು.

ವಿ ಎಸ್ ಪಿ ಎಮ್ ಐ ಟಿ ಐ ಕಾಲೇಜು ಪ್ರಾಚಾರ್ಯ ಬಸವರಾಜ್ ಮರೋಳ ಮುಖ್ಯ ಅತಿಥಿಗಳೊಂದಿಗೆ ದೀಪ ಬೆಳಗಿಸುವುದರ ಮೂಲಕ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಪಠ್ಯೇತರ ಚಟುವಟಿಕೆಗಳ ಜೊತೆಗೆ ಸಾಮಾಜಿಕ ಸೇವೆಯ ಮಹತ್ವ ಅಪಾರವಾಗಿದೆ ಎಂದರು. ಎನ್‌ಎಸ್‌ಎಸ್ ಶಿಬಿರಗಳು ವಿದ್ಯಾರ್ಥಿಗಳಿಗೆ ಸಮಾಜದ ನೆಲೆಯಲ್ಲಿರುವ ಸಮಸ್ಯೆಗಳನ್ನು ನೇರವಾಗಿ ಅರ್ಥಮಾಡಿಕೊಳ್ಳಲು ಹಾಗೂ ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಸಹಕಾರಿಯಾಗುತ್ತವೆ. ಶಿಬಿರವನ್ನು ಸದುಪಯೋಗಪಡಿಸಿಕೊಂಡು ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.ಅಧ್ಯಕ್ಷತೆವಹಿಸಿದ ಪ್ರಾಚಾರ್ಯ ಸುರೇಶ ಕೀರಣಗಿ ಮಾತನಾಡಿ, ಸ್ವಚ್ಛತಾ ಅಭಿಯಾನ, ವೃಕ್ಷಾರೋಪಣ, ಸಾಕ್ಷರತಾ ಜಾಗೃತಿ, ಆರೋಗ್ಯ ಮತ್ತು ನೈರ್ಮಲ್ಯ ಕುರಿತು ಗ್ರಾಮದಲ್ಲಿ ಜಾಗೃತಿ ಮೂಡಿಸುವುದು ಶಿಬಿರದ ಪ್ರಮುಖ ಉದ್ದೇಶವಾಗಿದೆ. ಯುವಜನತೆಯ ಶಕ್ತಿಯನ್ನು ಸಮಾಜದ ಅಭಿವೃದ್ಧಿಗೆ ಬಳಸಿಕೊಳ್ಳುವ ಅಗತ್ಯತೆ ಇದೆ ಎಂದು ತಿಳಿಸಿದರು.

ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಪ್ರಕಾಶ್ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ, ಎನ್‌ಎಸ್‌ಎಸ್ ಕೇವಲ ಒಂದು ಚಟುವಟಿಕೆಯಲ್ಲ, ಅದು ಒಂದು ಜೀವನ ಶೈಲಿ. ಈ ಶಿಬಿರದ ಮೂಲಕ ಪಡೆಯುವ ಅನುಭವಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಚೋಕ್ಲಾನಾಯಕ್ ಕೃಷ್ಣನಾಯಕ್ ಚವ್ಹಾಣ ಅವರು ಧ್ವಜಾರೋಹಣ ನೆರವೇರಿಸಿದರು. ಉಪನ್ಯಾಸಕರಾದ ಬಸವರಾಜ್ ಅಗ್ನಿ ಕಾರ್ಯಕ್ರಮ ನಿರೂಪಿಸಿದರು. ಸರಸ್ವತಿ ಸ್ವಾಗತಿಸಿದರು. ಪದ್ಮಾವತಿ ಘಂಟಿ ವಂದಿಸಿದರು.ಈ ಸಂದರ್ಭದಲ್ಲಿ ಗ್ರಾಮ ಮುಖಂಡರಾದ ಆನಂದ್ ಫೆಮಲಾ ನಾಯಕ ಖಾರಬಾರಿ, ಸುರನಾಯಕ್ ನೇಮಾನಾಯ್ಕ, ಹನಮಂತ ದೇವಲಾನಾಯ್ಕ, ಉಪನ್ಯಾಸಕರಾದ ಸೋಮಶೇಖರ್ ಸುತಾರ್, ಮಲ್ಲಿಕಾರ್ಜುನ, ವಿಜಯ ತಿರುಪತಿ ರಾಠೋಡ್, ಬಸಪ್ಪ ಶರಣರ, ಪ್ರಾಚಾರ್ಯ ರವಿಕುಮಾರ ಬಂಟನೂರ, ಮಾಜಿ ಗ್ರಾ.ಪಂ ಸದಸ್ಯೆ ಸೋನುಬಾಯಿ ಸೇರಿದಂತೆ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

# ಮಾಲೀಕರಿಂದ ಜಮೀನು ಖರೀದಿ: ಆಕ್ಷೇಪಣೆ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಭೂ ಒಡೆತನ ಯೋಜನೆಯಡಿ ಈ ಕೆಳಕಂಡ ತಾಲೂಕುಗಳ ಭೂ ಮಾಲೀಕರ ಜಮೀನುಗಳನ್ನು ಪರಿಶಿಷ್ಟ ಜಾತಿ ಮಹಿಳಾ ಫಲಾನುಭವಿಗಳ ಹೆಸರಿಗೆ ನೋಂದಣಿ ಮಾಡಿಸಲಾಗುತ್ತಿದೆ. ಕೆಳಕಂಡ ಭೂ ಮಾಲೀಕರ ಜಮೀನುಗಳನ್ನು ಖರೀದಿ ಮಾಡಲು ಯಾವುದೇ ಅಕ್ಷೇಪಣೆಗಳು ಇದ್ದಲ್ಲಿ ಸಂಬಂಧಿಸಿದ ಕುಟುಂಬದ ಸದಸ್ಯರು/ವಾರಸುದಾರರು ಏಳು ದಿನದೊಳಗಾಗಿ ಕಲಬುರಗಿ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿಯಲ್ಲಿ ಅಕ್ಷೇಪಣೆ ಸಲ್ಲಿಸಬೇಕೆಂದು ಕಲಬುರಗಿ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ. ಭೂಮಾಲೀಕರ ಹೆಸರು, ವಿಳಾಸ, ಸರ್ವೆ ನಂಬರ್, ಜಮೀನು ಇರುವ ಗ್ರಾಮ ಹಾಗೂ ವಿಸ್ತೀರ್ಣದ ವಿವರ ಇಂತಿದೆ. ಆಳಂದ ತಾಲೂಕಿನ ದೇವಂತಗಿ ಗ್ರಾಮದ ಶ್ರೀ ಅಲ್ಲಾವುದ್ದೀನ ತಂದೆ ಮಹಿಬೂಬ ಶೇಖ ಇವರ ಸರ್ವೆ ನಂ. 3/10 ರಲ್ಲಿ 1–00 ಎಕರೆ ಹಾಗೂ ಸರ್ವೆ ನಂ. 3/13 ರಲ್ಲಿ 4–02 ಎಕರೆ ಪೈಕಿ 3–00 ಎಕರೆ. ಮಟಕಿ ಗ್ರಾಮದ ಶ್ರೀ ಆನಂದರಾಯ ತಂದೆ ಶಿವಲಿಂಗಪ್ಪಾ ಇವರ ಸರ್ವೆ ನಂ. 158/2 ರಲ್ಲಿ 5–10 ಎಕರೆ. ಪಡಸಾವಳಿ ಗ್ರಾಮದ ಶ್ರೀ ಶಾಂತಪ್ಪ ತಂದೆ ಈರಣ್ಣಾ ಕೋರೆ ಇವರ ಸರ್ವೆ ನಂ. 58/2 ರಲ್ಲಿನ 4–00 ಎಕರೆ. ಮಟಕಿ ಗ್ರಾಮದ ಶ್ರೀಮತಿ ಇಂದುಬಾಯಿ ಗಂಡ ಮೋಹನ ಇವರ ಸರ್ವೆ ನಂ. 280 ರಲ್ಲಿ 10–13 ಎಕರೆ.ಆಳಂದ ತಾಲೂಕಿನ ಏಲನಾವದಗಿ ಗ್ರಾಮದ ಶ್ರೀ ರವೀಂದ್ರ ತಂದೆ ರಾಮಲಿಂಗರೆಡ್ಡಿ ಇವರ ಸರ್ವೆ ನಂ. 89 ರಲ್ಲಿ 4–00 ಎಕರೆ. ಪಡಸಾವಳಿ ಗ್ರಾಮದ ಶ್ರೀ ದೀಪಕ ತಂದೆ ಸಿದ್ರಾಮ ಇವರ ಸರ್ವೆ ನಂ. 65/5 ರಲ್ಲಿ 5–00 ಎಕರೆ. ಆಳಂದ ಶ್ರೀ ದಸ್ತಗೀರಸಾಬ ತಂದೆ ಮಹೆಬೂಬ ಖುರೇಸಿ ಮತ್ತು ಶ್ರೀ ಗೌಸೋದ್ದೀನ್ ತಂದೆ ಮಹೆಬೂಬ ಖುರೇಸಿ ಇವರ ಸರ್ವೆ ನಂ. 668/3ರಲ್ಲಿ 6–00 ಎಕರೆ. ನಿಂಬರ್ಗಾ ಗ್ರಾಮದ ಶ್ರೀಮತಿ ಭಾರತಿಬಾಯಿ ಗಂಡ ಧರ್ಮಣ್ಣಾ ಮತ್ತು ಶ್ರೀ ಸಂಜುಕುಮಾರ ತಂದೆ ಧರ್ಮಣ್ಣಾ ಇವರ ಸರ್ವೆ ನಂ. 275/7 ಮತ್ತು 275/5 ರಲ್ಲಿ 5–29 ಎಕರೆ.

## ಕಲಬುರಗಿ ಐಟಿಎಫ್ ಟೆನಿಸ್ ಟೂರ್ನಿ

# ಪಂದ್ಯಾವಳಿಗಳಿಗೆ ಖರ್ಗೆ ಚಾಲನೆ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ನಗರದ ಚಂದ್ರಶೇಖರ್ ಪಾಟೀಲ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ಕಲಬುರ್ಗಿ 'ಐಟಿಎಫ್ ಮಹಿಳಾ ಟೆನಿಸ್ ಟೂರ್ನಿ 'ಪ್ರಧಾನ ಸುತ್ತಿನ ಪಂದ್ಯಾವಳಿಗಳಿಗೆ ' ಇಂದು



ಜಿಲ್ಲಾ ಉಸ್ತುವಾರಿ ಸಚಿವರಾದ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ, ಮತ್ತು ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಇಲಾಖೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ್ ಸೇರಿದಂತೆ ಪ್ರಮುಖರು ಬಲೂನ್ ಹಾರಿ ಬಿಡುವ ಮೂಲಕ ಚಾಲನೆ ನೀಡಿದರು.

ಇಂದು ಬೆಳಗ್ಗೆ ನಡೆದ ಪ್ರದಾನ ಸುತ್ತಿನ ಪಂದ್ಯದಲ್ಲಿ ಭಾರತೀಯ ಆಟಗಾರರಾದ ಮೂರನೇ ಶ್ರೇಯಾಂಕಿತೆ ವೈಷ್ಣವಿ ಅಡ್ಕರ್ ಹಾಗೂ ಚೆವಿಕಾ ರೆಡ್ಡಿ ಅವರು ನೇರ ಹಣಾ–ಹಣಿ ನಡೆಸಿದ್ದು, ರೋಚಕತೆಯ ಘಟ್ಟ ತಲುಪಿದ ಪಂದ್ಯದಲ್ಲಿ ತಮ್ಮ ಉತ್ತಮ ಪ್ರದರ್ಶನ ಹಾಗೂ ಮಾರಕ ದಾಳಿಯಿಂದ ವೈಷ್ಣವಿ ಅವರು 6–0,6–3 ಅಂತರದಿಂದ ಚೆವಿಕಾರನ್ನು ಪರಾಭವಗೊಳಿಸಿ 16ನೇ ಸುತ್ತಿಗೆ ವೈಷ್ಣವಿ ಅವರು ಆಯ್ಕೆಯಾದರು.

ಇಂದು ಸಂಜೆ ವರೆಗೂ ಒಟ್ಟು 11 ಪ್ರದಾನ ಸುತ್ತಿನ ಪಂದ್ಯಗಳು ನಡೆಯಲಿದ್ದು ವಿಜೇತ 11 ಜನರು ನೇರವಾಗಿ ನಾಳೆ ನಡೆಯುವ 16ನೇ ಸುತ್ತಿನ ಪಂದ್ಯಾವಳಿಗೆ ಆಯ್ಕೆ ಆಗಿ ಅಲ್ಲಿ ತಮ್ಮ ಗೆಲುವಿನ ಆಟವನ್ನು ಮುಂದುವರೆಸಲಿದ್ದಾರೆ.

ಇಂದು ನಡೆದ ಮುಖ್ಯ ಪಂದ್ಯಾವಳಿಗಳ ಚಾಲನೆ ಕಾರ್ಯಕ್ರಮದಲ್ಲಿ ಇಂದು ಜಿಲ್ಲಾ ಉಸ್ತುವಾರಿ ಸಚಿವರಾದ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವವೃದ್ಧಿ ಇಲಾಖೆ ಸಚಿವರಾದ ಡಾ. ಶರಣ ಪ್ರಕಾಶ ಪಾಟೀಲ್, ಹಾಗೂ ವಿಧಾನ ಪರಿಷತ್ ಸದಸ್ಯರಾಧ ಶಶೀಲ್ ಜಿ. ನಮೋಶಿ ಅವರು ಕೋರ್ಟನಲ್ಲಿ ಟೆನಿಸ್ ಆಡುವ ಮೂಲಕ ಅಧಿಕೃತವಾಗಿ ಮುಖ್ಯ ಪಂದ್ಯಾವಳಿಗಳಿಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಜಗದೇವ ಗುತ್ತೇದಾರ್, ತಿಪ್ಪಣ್ಣಪ್ಪ ಕಮಕನೂರ, ಕಲಬುರಗಿ ನಗರಾಭಿವೃದ್ಧಿ ನಗರದ ಪ್ರಾಧಿಕಾರದ ಅಧ್ಯಕ್ಷರಾದ ಮಜಹರ್ ಆಲಂ ಖಾನ್, ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್, ಸಿಇಓ ಭಂವರ್‌ಸಿಂಗ್ ಮೀನಾ, ಮಹಾನಗರ ಪಾಲಿಕೆ ಪೂಜ್ಯ ಮಹಾಪೌರರಾದ ವರ್ಷಾ ಜಾನೆ, ಪಾಲಿಕೆ ಆಯುಕ್ತರಾದ ಅವಿನಾಶ ಸಿಂಧೆ, ಪೊಲೀಸ್ ಆಯುಕ್ತರಾದ ಡಾ. ಶರಣಪ್ಪ ಎಸ್.ಡಿ, ಎಸ್ಪಿ ಅಡ್ಡೂರು ಶ್ರೀನಿವಾಸುಲು, ಸಹಾಯಕ ಆಯುಕ್ತೆ ಸಾಹಿತ್ಯ, ಆಲದ್‌ಕಟ್ಟಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಸಮದ್ ಪಟೇಲ್ ಅವರು ಸೇರಿದಂತೆ ಐಟಿಎಫ್ ಪಂದ್ಯ ಆಯೋಜಕರು ಸೇರಿದಂತೆ ಆಟಗಾರರು ಪ್ರೇಕ್ಷಕರು ಇದ್ದರು.

# ಅರ್ಹ ಹಾಗೂ ಅನರ್ಹ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿ ಪ್ರಕಟ: ಆಕ್ಷೇಪಣೆ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಕಲಬುರಗಿ ಮಹಾನಗರ ಪಾಲಿಕೆಯಿಂದ 2025–26ನೇ ಸಾಲಿಗೆ ಎಸ್.ಎಫ್.ಸಿ. (ಮುಕ್ತನಿಧಿ) ಕ್ರಿಯಾ ಯೋಜನೆಯಡಿ ಪರಿಶಿಷ್ಟ ಪಂಗಡದ ಜನರಿಗೆ ಸಣ್ಣ ಉದ್ದಿಮೆ ಸ್ಥಾಪಿಸಲು ಬ್ಯಾಂಕ್ ಮುಖಾಂತರ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಿ, ಅರ್ಹ ಹಾಗೂ ಅನರ್ಹ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ಕಲಬುರಗಿ ಮಹಾನಗರ ಪಾಲಿಕೆಯ ನೋಟೀಸ್ ಬೋರ್ಡ್‌ನಲ್ಲಿ ಈಗಾಗಲೇ ಪ್ರಚುರಪಡಿಸಲಾಗಿದೆ ಎಂದು ಕಲಬುರಗಿ ಮಹಾನಗರ ಪಾಲಿಕೆಯ ಉಪ ಆಯುಕ್ತರು (ಆಡಳಿತ) ಅವರು ತಿಳಿಸಿದ್ದಾರೆ.

ಈ ತಾತ್ಕಾಲಿಕ ಅರ್ಹ ಹಾಗೂ ಅನರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳು ಇದ್ದಲ್ಲಿ 2026ರ ಮಾರ್ಚ್ 4 ರಿಂದ 13 ರೊಳಗಾಗಿ ಪೂರಕ ದಾಖಲೆಗಳೊಂದಿಗೆ ಕಲಬುರಗಿ ಮಹಾನಗರ ಪಾಲಿಕೆ ಕಚೇರಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬೇಕು. ತದನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

# ಸಮೂದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡಲು ಶಾಸಕರಿಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ವಿಶ್ವಕರ್ಮ ಸಮೂದಾಯದ ವತಿಯಿಂದ ಸೋಮವಾರದಂದು ಲಿಂಗಸಗೂರು ಕ್ಷೇತ್ರದ ಶಾಸಕ ಮಾನಪ್ಪ ಡಿ. ವಜ್ಜಲ್ ಅವರಿಗೆ ವಿಶ್ವಕರ್ಮ ಸಮೂದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡುವಂತೆ ಮನವಿ ಸಲ್ಲಿಸಲಾಯಿತು.

ಪಟ್ಟಣದ ಕಿಲ್ಲಾದಲ್ಲಿರುವ ಐತಿಹಾಸಿಕ ಶ್ರೀಕಾಳಿಕಾ ದೇವಿ ದೇವಸ್ಥಾನದಲ್ಲಿ ನೂತನ ಸಮೂದಾಯ ಭವನ ನಿರ್ಮಾಣದಿಂದ ಸರ್ವರ ವಿವಿಧ ಧಾರ್ಮಿಕಾಚರಣೆ ಹಾಗೂ ವಿವಿಧ ಶುಭ ಕಾರ್ಯಗಳನ್ನು ನೇರವೇರಿಸಿಕೊಳ್ಳುವ ಅನುಕೂಲವಾಗುವ ನಿಟ್ಟಿನಲ್ಲಿ ನೂತನ ಸಮುದಾಯ ಭವನ ನಿರ್ಮಿಸಲು ಅನುದಾನ ಮಂಜೂರು ಮಾಡಲು ಮನವಿ ಸಲ್ಲಿಸಿದರು.ಈ ವೇಳೆ ಶ್ರೀಧರ ಪತ್ತಾರ, ನೀಲಪ್ಪ ಕಮ್ಮಾರ, ಉದಯ ಕಮ್ಮಾರ, ಡಾ! ರಮೇಶ, ಕಾಳಪ್ಪ ಬಡಿಗೇರ, ಶ್ರೀಶೈಲಪ್ಪ ಪತ್ತಾರ, ಶ್ರೀನಿವಾಸ ಪತ್ತಾರ, ವೈ. ನಾರಾಯಣ, ಕಾಶೀಪತಿ ಪತ್ತಾರ, ಗುರುರಾಜ ಪತ್ತಾರ, ಚಂದ್ರು ಕೆ.ವಿ ಪತ್ತಾರ, ಸಂಪತ್ತ ಪತ್ತಾರ ತಂಗಡಗಿ ಸೇರಿದಂತೆ ಇತರರಿದ್ದರು.

# ಉಪನ್ಯಾಸಕನಿಂದ ಬಲಾತ್ಕಾರ ಯತ್ನ ಗುಪ್ತದೂರು




• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಜಿಲ್ಲೆ ಕುಕನೂರ ಪಟ್ಟಣದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅತಿಥಿ ಉಪನ್ಯಾಸಕರೋಬ್ಬರು ವಿದ್ಯಾರ್ಥಿನಿಗೆ ನೋಟ್ಸ್ ನೀಡುವ ನೆಪ ಹೇಳಿ ಬಲತ್ಕಾರಕ್ಕೆಯತ್ನಿಸಿರುವ ಘಟನೆ ನಡೆದಿದೆ ಎಂದು ಮೂರನೇ ವ್ಯಕ್ತಿಗಳಿಂದ ಪೊಲೀಸ್ ಠಾಣೆಗೆ ಗುಪ್ತ ದೂರು ಅಂಚೆ ಮುಖಾಂತರ ಬಂದಿರುತ್ತದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಖಾಸಗಿ ಅಭ್ಯರ್ಥಿಯಾಗಿ ದ್ವಿತೀಯ ಪಿಯುಸಿ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದ ಪಟ್ಟಣದ ಪಕ್ಕದ ಗ್ರಾಮದ ಪಿ ಯು ಸಿ ವಿದ್ಯಾರ್ಥಿನಿಗೆ ಪರೀಕ್ಷೆಗೆ ಸಂಬಂಧಪಟ್ಟ ನೋಟ್ಸ್ ಗಳನ್ನು ನೀಡುವುದಾಗಿ ಹೇಳಿಕೊಂಡು ವಿದ್ಯಾರ್ಥಿನಿಯನ್ನು ಮನೆಗೆ ಕರೆಸಿ ಅತ್ಯಾಚಾರಕ್ಕೆ ಉಪನ್ಯಾಸಕ ಯತ್ನಿಸಿದ್ದಾನೆ ಮತ್ತು ವಿದ್ಯಾರ್ಥಿನಿಯ ಆತನ ಕೈಯಿಂದ ಹೇಗೋ ತಪ್ಪಿಸಿಕೊಂಡು ಬಂದಿದ್ದು ಮನೆಯ ಮರ್ಯಾದೆಗೆ ಅಂಜಿ ದೂರು ನೀಡಿಲ್ಲ ಎನ್ನಲಾಗುತ್ತಿದ್ದು ಮೂರನೇ ವ್ಯಕ್ತಿಗಳು ಅಂದರೆ ಕಾಲೇಜಿನ ಉಳಿದ ವಿದ್ಯಾರ್ಥಿನಿಯರಿಂದ ಸ್ಥಳೀಯ ಪೊಲೀಸ್ ಠಾಣೆ ಹಾಗೂ ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಅಂಚೆ ಮೂಲಕ ಗುಪ್ತದೂರನ್ನು ರವಾನಿಸ ಲಾಗಿದೆ. ಈ ಗುಪ್ತದೂರಿನ ಮನವಿ ಪತ್ರವನ್ನು ಬಲತ್ಕಾರ ಪ್ರಯತ್ನಕ್ಕೆ ಒಳಗಾದ ವಿದ್ಯಾರ್ಥಿನಿ ನೀಡದೇ ಇರುವುದು ಹಾಗೂ ಕಾಲೇಜಿನ ವಿದ್ಯಾರ್ಥಿನಿಯರು ಎಂದು ನಮೂದಿಸಿ ಪೊಲೀಸ್ ಇಲಾಖೆಗೆ ರವಾನೆ ಮಾಡಲಾಗಿರುವುದನ್ನು ಸ್ಥಳೀಯವಾಗಿ ಸಾರ್ವಜನಿಕರು ಹಲವಾರು ಕೋನಗಳಲ್ಲಿ ವಿಶ್ಲೇಷಣೆ ಮಾಡುತ್ತಿದ್ದಾರೆ. ದೂರಿನಲ್ಲಿ ಬಲತ್ಕಾರಕ್ಕೆ ಪ್ರಯತ್ನಿಸಿದ ವ್ಯಕ್ತಿಯು ಈ ಹಿಂದೆ ಪಟ್ಟಣದ ಸರ್ಕಾರಿ ಪದವಿ ಪೂರ್ವ ವಿದ್ಯಾಲಯದಲ್ಲಿ ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದು ಸದ್ಯ 2 ವರ್ಷಗಳಿಂದ ಅಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ ಹಾಗೂ ಈ ಬಲಾತ್ಕಾರ ಪ್ರಯತ್ನಕ್ಕೆ ಒಳಗಾಗಿದ್ದ ವಿದ್ಯಾರ್ಥಿನಿ ಸಹ ಕುಕನೂರು ಪಟ್ಟಣದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾಗಿರುವುದಿಲ್ಲ ಬದಲಿಗೆ ತಾಲೂಕಿನ ಬೇರೊಂದು ಕಾಲೇಜಿನಲ್ಲಿ ಖಾಸಗಿ ಅಭ್ಯರ್ಥಿಯಾಗಿ ಪರೀಕ್ಷೆಗೆ ನೊಂದಾಯಿಸಿಕೊಂಡಿದ್ದು ಬೇರೆ ಕಾಲೇಜಿನ ವಿದ್ಯಾರ್ಥಿನಿ ಹಾಗೂ ಪಟ್ಟಣದ ವಿದ್ಯಾಲಯದಿಂದ ಎರಡು ವರ್ಷದ ಹಿಂದೆಯೇ ಹೊರ 'ಗೆ ಹೋದ ಉಪನ್ಯಾಸಕನ ಮೇಲೆ ದೂರು ಬಂದಿರುವುದು ಆಶ್ಚರ್ಯಕರವಾಗಿದ್ದು ಹಲವಾರು ಆಯಾಮವನ್ನು ಪಡೆದುಕೊಳ್ಳುತ್ತದೆ ಎಂದು ಪಟ್ಟಣದಲ್ಲಿ ಸಾರ್ವಜನಿಕರು ಮಾತನಾಡಿಕೊಳ್ಳುತ್ತಿದ್ದಾರೆ. ಅಷ್ಟಕ್ಕೂ ಆ ವಿದ್ಯಾರ್ಥಿನಿಯು ತನ್ನ ಹಾಗೂ ಮನೆತನದ ಮರ್ಯಾದೆಗೆ ಅಂಜಿ ವಿಷಯವನ್ನು ಗೌಪ್ಯವಾಗಿ ಇಟ್ಟುಕೊಂಡಿದ್ದಾಳೆ ಎಂದು ಗುಪ್ತ ದೂರಿನಲ್ಲಿ ನಮೂದಿಸಿದ್ದು, ದೂರು ನೀಡಿದ ವಿದ್ಯಾರ್ಥಿನಿಯರಿಗೆ ಹೇಗೆ ಗೊತ್ತಾಯ್ತು ಎಂಬ ಅನುಮಾನ ಎಲ್ಲರಲ್ಲಿ ಕಾಡ ತೊಡಗಿದೆ.

ಆರೋಪಿತ ಅತಿಥಿ ಉಪನ್ಯಾಸಕ ಪ್ರತಿಷ್ಠಿತ ಪತ್ರಿಕೆಯ ಕುಕನೂರು ತಾಲೂಕ ವರದಿಗಾರರು ಸಹ ಆಗಿದ್ದು ಅವರ ಮೇಲೆ ಏನೋ ಹಳೆಯ ಸೇಡಿನಿಂದ ಈ ರೀತಿಯಾಗಿ ಅವರ ತೇಜೋವದೆ ಮಾಡಲು ಯಾ–ರೋ ಪ್ರಯತ್ನಿಸುತ್ತಿದ್ದಾರೆ ಎಂಬ ಮಾತುಗಳು ಸಹ ನಾಗರಿಕರಲ್ಲಿ ಕೇಳಿ ಬರುತ್ತಿದ್ದು ಇದರ ಜೊತೆಗೆ ಕಾಲೇಜಿನ ಪ್ರಾಂಶುಪಾಲರ ಬಗ್ಗೆಯೂ ಸಹ ದೂರಿನಲ್ಲಿ ನಮೂದಿಸಲಾಗಿದ್ದು ಈ ಹಿಂದೆ ಅತಿಥಿ ಉಪನ್ಯಾಸಕನನ್ನು ಕೆಲಸದಿಂದ ತೆಗೆದುಹಾಕಿದ್ದರು ಸಹ ಪ್ರಾಂಶುಪಾಲರಿಗೆ ಆತ್ಮೀಯನಾಗಿದ್ದ ಈತ ಸಹಜವಾಗಿ ಕಾಲೇಜಿಗೆ ಬರುವುದು, ಹೋಗುವುದನ್ನು ಮಾಡುತ್ತಿದ್ದ ಇದನ್ನು ಕಂಡ ಇತರ ಉಪನ್ಯಾಸಕರು ಪ್ರಾಂಶುಪಾಲರಲ್ಲಿ ಆಕ್ಷೇಪಣೆ ಸಲ್ಲಿಸಿದ್ದರು ಸಹ ಈತನ ವಿರುದ್ಧ ಯಾವುದೇ ಕ್ರಮ ಕೈಗೊಂಡಿರಲಿಲ್ಲ ಎಂದು ಸಹ ಕಾಲೇಜ್ ಮೂಲಗಳಿಂದ ತಿಳಿದು ಬಂದಿರುತ್ತದೆ. ಇನ್ನೊಂದಡೆ ಖಾಸಗಿ ಅಭ್ಯರ್ಥಿಯಾಗಿ ಪರೀಕ್ಷೆಗೆ ಸಜ್ಜಾಗುತ್ತಿದ್ದ ವಿದ್ಯಾರ್ಥಿನಿ ಪಕ್ಕದ ಊರಿನಿಂದ ಇದೇ ಕಾಲೇಜಿಗೆ ಪ್ರತಿದಿನ ತರಗತಿಗೆ ಹಾಜರಾಗುತ್ತಿದ್ದಳು ಆದ್ದರಿಂದ ಈಕಿಗೆ ನೋಟ್ಸ್ ನೀಡುವ ನೆಪದಲ್ಲಿ ಅತಿಥಿ ಉಪನ್ಯಾಸಕ ಮನೆಗೆ ಕರೆದು ಈ ಕೃತ್ಯ ಎಸೆದಿದ್ದಾನೆ ಎಂದು ದೂರಿನಲ್ಲಿ ನಮೂದಿಸಲಾಗಿದ್ದು ಕಾಲೇಜಿನ ದಾಖಲಾತಿ ಪ್ರಕಾರ ಈ ವ್ಯಕ್ತಿ ಎರಡು ವರ್ಷದ ಹಿಂದೆಯೇ ಕಾಲೇಜ್ ಬಿಟ್ಟಿದ್ದಾನೆ ಎಂದು ದಾಖಲಾತಿ ಹೇಳುತ್ತಿದ್ದು, ಗುಪ್ತ ದೂರು ಸ್ಪಷ್ಟ ಚಿತ್ರಣ ಸಿಗದೆ ಹಲವಾರು ರೀತಿಯ ಗೊಂದಲಗಳಿಗೆ ಕಾರಣವಾಗಿದ್ದು ದೂರಿನ ಅನ್ವಯ ಪೊಲೀಸರು ಈಗಾಗಲೇ ತಮ್ಮ ಕಾರ್ಯಾಚರಣೆ ಪ್ರಾರಂಭಗೊಳಿಸಿದ್ದು ವಿದ್ಯಾರ್ಥಿನಿಯನ್ನು ಪೊಲೀಸರು ವಿಚಾರಿಸಿದಾಗ ಇದೆಲ್ಲ ಬರೀ ಸುಳ್ಳು ಈ ರೀತಿ ಏನು ನಡೆದೇ ಇಲ್ಲ ಎನ್ನುವ ಉತ್ತರ ವಿದ್ಯಾರ್ಥಿನೀಯಿಂದ ಬಂದಿದೆ ಎಂದು ಇದು ಬಂದಿರುವುದಾಗಿ ಖಚಿತ ಮಾಹಿತಿ ಪೊಲೀಸ್ ಮೂಲಗಳಿಂದ ಕೇಳಿ ಬಂದಿರುತ್ತದೆ.

# ಧರ್ಮದ ಬಗ್ಗೆ ಮಾತನಾಡಿದರೆ ಸಾಲದು ಆಚರಣೆಯಲ್ಲಿ ಇರಬೇಕು: ಚೆನ್ನವೀರ ಶ್ರೀ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಜಿಲ್ಲಾಡಳಿತ ಮತ್ತು ವೀರಶೈವ ಲಿಂಗಾಯತ ಸಮಾಜದಿಂದ ನಿನ್ನೆ ಸಂಜೆ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಹಮ್ಮಿಕೊಂಡಿತ್ತು.

ಹರಗಿನದೋಣಿಯ ಪಂಚವರ್ಣಿಗಿ ಮಠದ ಅಭಿನವ ಸಿದ್ದಲಿಂಗ ಶ್ರೀಗಳು, ಸಾನಿಧ್ಯವಹಿಸಿದ್ದರು.

ಆಂದ್ರಪ್ರದೇಶದ ಪಾಲ್ತೂರು ಮಠದ ಚೆನ್ನವೀರಸ್ವಾಮಿ ಶ್ರೀಗಳು, ರೇಣುಕರ ಬಗ್ಗೆ ಉಪನ್ಯಾಸ ನೀಡಿ, ಧರ್ಮದ ಬಗ್ಗೆ ಕೇವಲ ಮಾತನಾಡಿದರೆ ಸಾಲದು, ಆಚರಣೆಯಲ್ಲಿ ಕಮ್ಮಿ ಆಗಬಾರದು.ಧರ್ಮವೂ ವಿಜ್ಞಾನದಿಂದ ಕೂಡಿದ್ದರೆ ಅದಕ್ಕೆ ಸಾವಿಲ್ಲ. ವೀರಶೈವ ಲಿಂಗಾಯತ ಧರ್ಮದ ಆಚರಣೆಯಲ್ಲಿ ವೈಜ್ಞಾನಿಕತೆ ಇರುವುದರಿಂದಲೇ ಇಂದಿಗೂ ಇದು ಜೀವಂತವಾಗಿರಲು ಸಾಧ್ಯವಾಗಿದೆಂದರು.

ಪಾಲಿಕೆ ಸದಸ್ಯೆ ಸುರೇಖ ಮಲ್ಲನಗೌಡ, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಅಧ್ಯಕ್ಷ ಬಿಚ್ಚುಗಲ್ ಪಂಚಾಕ್ಷರಪ್ಪ, ವೀರಶೈವ ವಿದ್ಯಾವರ್ಧಕ ಸಂಘದ ಖಜಾಂಚಿ ಬೈಲಯವದ್ದಿಗೇರಿ ಎರ್ರಿಸ್ವಾಮಿ, ಗ್ಯಾರೆಂಟಿ ಸಮಿತಿಯ ತಾಲೂಕು ಅಧ್ಯಕ್ಷ ಗೋನಾಳ್ ನಾಗಭೂಷಣಗೌಡ, ದರೂರು ಪುರುಷೋತ್ತಮಗೌಡ ಮೊದಲಾದವರು ಇದ್ದರು.

ಈ ವೇಳೆ ವೀರಶೈವ ಸಮಾಜದ ಮುಖಂಡರಾದ ಪಲ್ಲೇದ ಪಂಪಾಪತಿ, ಸಿದ್ದಾಂತಶಿಖಾಮಣಿಯ ಭೋದಕರಾದ ಅನುರಾಧ, ಸ್ವರ್ಣಲತ, ಗೀತಾ ಹೊಸರುಮಠ, ಸವಿತಾ, ವಾಣಿಶ್ರೀ, ನಾಗರಾಜ ಮಠಂ, ಡಾ.ರಾಜಶೇಖರ್ ಕೆರೆನಳ್ಳಿ, ಈಶ್ವರಸ್ವಾಮಿ, ಮಾಜಿಯೋಧ ರುದ್ರಮುನಿಸ್ವಾಮಿ, ಪಂಚ ಲೋಹದ ರೇಣುಕಾಚಾರ್ಯರ ವಿಗ್ರಹವನ್ನು ಮರಿಸ್ವಾಮಿ ಮಠಕ್ಕೆ ಕೊಡುಗೆ–ಯಾಗಿ ನೀಡಿರುವ ಜೋಳದರಾಸಿ ಪ್ಯಾಟ್ಯಾಳ್ ಬಸವರಾಜ್ ಸೇರಿದಂತೆ ಅನೇಕ ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಯ್ತು.

ಸಂಡೂರಿನ ವೀರಭದ್ರಯ್ಯ ಮತ್ತು ತಂಡದಿಂದ ಭಕ್ತಿಗೀತೆಗಳ ಗಾಯನ ನಡೆಯಿತು. ಹೇಮಾ ಹಿರೇಮಠ, ನಾಗರತ್ನ ಅವರು ಕಾರ್ಯಕ್ರಮ ನಿರ್ವಹಿಸಿದರು. ಕಸಂ ಇಲಾಖೆಯ ಸನಿ ಬಿ.ನಾಗರಾಜ್ ಸ್ವಾಗತಿಸಿದರು. ಜಿಪಂ ಮಾಜಿ ಸದಸ್ಯ ಗೋನಾಳ್ ರಾಜಶೇಖರಗೌಡ ಪ್ರಸಾದದ ವ್ಯವಸ್ಥೆ ಮಾಡಿದ್ದರು.

ವೀರಶೈವ ಲಿಂಗಾಯತ ಸಮಾಜದ ಸಂಚಾಲಕ ಎಂ.ಚಂದ್ರಮೌಳಿ, ಬದವರಾಜ್ ಬಿಸಲಹಳ್ಳಿ, ಎಣ್ಣೆ ಎರ್ರಿಸ್ವಾಮಿ, ನಾಗರಾಜ ಸ್ವಾಮಿ, ಡಿ.ಅರುಣ್ ಕುಮಾರ್ ಮೊದಲಾದವರು ಇದ್ದರು.

ಮೆರವಣಿಗೆ:

ನಗರದ ಮುನಿಷಿಪಲ್ ಹೈಸ್ಕೂಲ್ ಮೈದಾನದಿಂದ ರೇಣುಕಾಚಾರ್ಯರ ಭಾವಚಿತ್ರ ಮತ್ತು ವಿಗ್ರಹದ ಮೆರವಣಿಗೆ ಗಡಗಿ ಚೆನ್ನಪ್ಪ ವೃತ್ತದ ಮೂಲಕ ರಂಗ ಮಂದಿರಕ್ಕೆ ಜನಪದ ಕಲಾ ತಂಡಗಳ ಮೂಲಕ ಸಾಗಿ ಬಂತು.

# ರಜೆ ಇಲ್ಲದಿದ್ದರೂ ತೆರೆಯದ ಕಾಲೇಜ್ ಗೇಟ್

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಸರ್ಕಾರಿ ರಜೆ ಇಲ್ಲದೆ, ಇದ್ದರೂ ಸ್ಥಳೀಯವಾಗಿ ಯಾವುದೇ ಜಾತ್ರಾ ಮಹೋತ್ಸವಗಳು ಇಲ್ಲದೆ ಇದ್ದರೂ ಸಹ ಕುಕನೂರು ಪಟ್ಟಣದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಮಾತ್ರ ನಿದ್ರಾವಸ್ಥೆಯಲ್ಲಿದ್ದು ಮಧ್ಯಾಹ್ನದವರೆಗೆ ಗೇಟ್ ತೆಗೆದ ಇದ್ದ ಘಟನೆ ಜರುಗಿದೆ.



ಕೊಪ್ಪಳ ಜಿಲ್ಲೆಯ ಯಲಬುರ್ಗಾ ಮತ್ತು ಕುಕುನೂರು ತಾಲೂಕುಗಳನ್ನು ಒಳಗೊಂಡ ಯಲಬುರ್ಗಾ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಅಭಿವೃದ್ಧಿಯ ಹರಿಕಾರ ಎಂದೇ ಹೆಸರು ಹೊಂದಿರುವ ಶಾಸಕ ಬಸವರಾಜ ರಾಯರೆಡ್ಡಿ ಅವರು ಕ್ಷೇತ್ರದ ಶೈಕ್ಷಣಿಕ ಗುಣ ಮಟ್ಟ ಪ್ರಗತಿಗೊಳಿಸಲು ಸಾಲು ಸಾಲು ಶಾಲಾ–ಕಾಲೇಜುಗಳನ್ನು ಮಂಜೂರು ಮಾಡಿಸುತ್ತಿದ್ದು ಉತ್ತಮವಾದ ಸಂಗತಿಯಾಗಿದೆ ಆದರೆ ಇತ್ತ ಕಡೆ ಕಾಲೇಜಿನ ಪ್ರಾಂಶುಪಾಲರು ಕೆಲಸದ ದಿನದಲ್ಲೂ ಸಹ ಕಾಲೇಜ್ ಗೇಟ್ ಗೆ ಬೀಗ ಹಾಕಿ ಹಾಯಾಗಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಪಟ್ಟಣದ ಕಾಲೇಜು ಬಾಗಿಲು ತೆರೆಯದೆ ಇರುವುದನ್ನು ಕಂಡ ಸಾರ್ವಜನಿಕರು ಪತ್ರಿಕಾ ವರದಿಗಾರರಿಗೆ ಕರೆ ಮಾಡಿ ತಿಳಿಸಿದಾಗ ನೈಜತೆ ತಿಳಿಯಲು ಹೋದ ಪತ್ರಕರ್ತರಿಗೂ ಸಹ ಆಶ್ಚರ್ಯ ಎದುರಾಗಿದ್ದು ಮಧ್ಯಾಹ್ನ 1:00 ಗಂಟೆ ಆದರೂ ಸಹ ಕಾಲೇಜ್ ಗೇಟ್ ತೆರೆದೆ ಇರುವುದು ಗಮನಕ್ಕೆ ಬಂದಿದ್ದು ತಕ್ಷಣ ಪ್ರಾಂಶುಪಾಲರಿಗೆ ವಿಚಾರಿಸಿದಾಗ ನನ್ನ ಸಂಬಂಧಿಕರ ಮನೆಯಲ್ಲಿ ಶುಭ ಕಾರ್ಯವಿದೆ ಆದ್ದರಿಂದ ನಾನು ಈ ದಿನ ವಿದ್ಯಾಲಯದ ಕಡೆಗೆ ಆಗಮಿಸಿಲ್ಲ ಎಂಬ ಹಾರೈಕೆ ಉತ್ತರವನ್ನು ನೀಡಿರುತ್ತಾರೆ.

ನಂತರ ಜಿಲ್ಲೆಯ ಪದವಿ ಪೂರ್ವ ಶಿಕ್ಷಣದ ಉಪ ನಿರ್ದೇಶಕರಿಗೆ ಕರೆ ಮಾಡಿ ಜಿಪಿಎಸ್ ಫೋ–ಟೋ ರಮಾನಿಸಿದಾಗ ಉಪ ನಿರ್ದೇಶಕರು ತಕ್ಷಣ ಪ್ರಾಂಶುಪಾಲರಿಗೆ ಕರೆ ಮಾಡುವುದಾಗಿ ತಿಳಿಸುತ್ತಾರೆ, ಇದಾಗಿ 10ರಿಂದ 15 ನಿಮಿಷಗಳ ನಂತರ ಕಾಲೇಜ್ ಸಿಬ್ಬಂದಿಯೊಬ್ಬರು ಓಡೋಡಿ ಬಂದು ಗೇಟ್ ತೆಗೆದ ಘಟನೆಗೆ ಕುಕನೂರು ಪದವಿ ಪೂರ್ವ ವಿದ್ಯಾಲಯ ಸಾಕ್ಷಿಯಾಗಿದೆ.

ಕೈತುಂಬ ಸಂಬಳ ಪಡೆಯುವ ಸರ್ಕಾರಿ ಕಾಲೇಜಿನ ಸಿಬ್ಬಂದಿಗಳು ತಮಗೆ ಮನಸೋ ಇಚ್ಛೆಯಂತೆ ಕಾಲೇಜ್ ಬಂದ್ ಮಾಡುವುದು, ದೊರೆಯುವುದು ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದೆ.

# ಸಿಲಿಂಡರ್ ಸ್ಫೋಟ ಮನೆ ಛಿದ್ರ ಛಿದ್ರ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಜಿಲ್ಲೆಯ ಸಂಡೂರು ತಾಲೂಕಿನ ತಾಳೂರು ಗ್ರಾಮದ ಮನೆಯೊಂದರಲ್ಲಿ ಅಡುಗೆ ಅನಿಲದ ಸಿಲಿಂಡರ್ ಸ್ಫೋಟ ಆಗಿದ್ದು. ಈ ಸ್ಫೋಟದ ತೀವ್ರತಗೆ. ಇದರಿಂದ ಮನೆ ಛಿದ್ರ ಛಿದ್ರಗೊಂಡಿದೆ.ಸುಭಾನಿ ಸಾಬ್ ಎನ್ನುವರ ಮನೆಯಲ್ಲಿ ಇಂದು ಬೆಳಿಗ್ಗೆ ಹೊಸ ಸಿಲಿಂಡರ್ ತಂದು ಕೂಡಿಸುವಾಗ ಗ್ಯಾಸ್ ಲೀಕೆಜ್ ಅಗಿದೆ. ಕೂಡಲೇ ಮನೆಯವರೆಲ್ಲ ಹೊರಗೆ ಬಂದಿದ್ದಾರೆ. ಆಗ ಕ್ಷಣಾರ್ಧದಲ್ಲಿ ಸಿಲಿಂಡರ್ ಬ್ಲಾಸ್ಟ್ ಅಗಿದೆ.ಅದೃಷ್ಟವಾಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ಸ್ಫೋಟದ ತೀವ್ರತೆಗೆ ಪಕ್ಷದ ಮನೆಯೂ ಕುಸಿದು ಹೋಗಿದೆ. ಸುಬಾನಿ ಸಾಬ್ ಸೇರಿದಂತೆ ಇನ್ನಿಬ್ಬರಿಗೆ ಗಾಯವಾಗಿದೆ. ಅವರನ್ನು ತೋರಣಗಲ್ಲು ಸಂಜೀವಿನಿ ಆಸ್ಪತ್ರೆಗೆ ದಾಖಲು ಮಾಡಿದೆ. ಈ ಬಗ್ಗೆ ತೋರಣಗಲ್ಲು ಪೊಲೀಸರು ಪ್ರಜರಣ ದಾಖಲಿಸಿಕೊಂಡು ಮುಂದಿನಕ್ರಮ ಕೈಗೊಂಡಿದ್ದಾರೆ.

# ಕೆರೆಗಳು ತುಂಬಿಸಿ ಕೆಟ್ಟಿರುವ ಬೋರ್ವೆಲ್ ನೀರಿನ ಘಟಕ ದುರುಸ್ತಿಗೊಳಿಸಲು ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಈಗಾಗಲೇ ಬೇಸಿಗೆ ಆರಂಭಿಸುತ್ತಿದ್ದು ಮುಂಜಾಗ್ರತೆ ಕ್ರಮವಾಗಿ ಕಾಲುವೆಯ ನೀರುಗಳ ಮೂಲಕ ತಾಲೂಕಿನಲ್ಲಿರುವ ಕೆರೆಗಳನ್ನು ತುಂಬಿಸುವುದರ ಜೊತೆಗೆ ಸಾರ್ವಜನಿಕರಿಗೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆಗೆ ಸೂಕ್ತ ಕೈಗೊಳ್ಳುವಂತೆ ರೈತ ಮುಖಂಡ ಪಂಪಣ್ಣ ಎಸ್. ಜಡಿ ಒತ್ತಾಯಿಸಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು

ತಾಲೂಕಿನಲ್ಲಿರುವ ಕೆರೆಗಳು ಭತ್ತಿ ಹೋಗಿದ್ದು ದನ ಕರು ಪಕ್ಷಿ ಪ್ರಾಣಿಗಳಿಗೆ ನೀರಿನ ಸಮಸ್ಯೆ ಹೆಚ್ಚಾಗಿದೆ ಈಗಾಗಲೇ ಬೇಸಿಗೆ ಆರಂಭಿಸಿದ್ದು ತಾಲೂಕಿನ ಕೇಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಡುತ್ತಿದೆ ಗ್ರಾಮೀಣ ಪ್ರದೇಶಗಳಲ್ಲಿನ ಕೊಳವೆ ಬಾವಿಗಳು ಕೆಟ್ಟು ನಿಂತಿದ್ದು ಅವುಗಳ ದುರಸ್ತಿಗೆ ಅಧಿಕಾರಿಗಳು ಮುಂದಾಗಿಲ್ಲ ಮತ್ತು ಸರ್ಕಾರ ಗ್ರಾಮೀಣ ಪ್ರದೇಶದ ಜನರಿಗಾಗಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಆರಂಭಿಸಿ ಕೋಟಿಗಟ್ಟಲೆ ಹಣ ಖರ್ಚು ಮಾಡಿದೆ ಆದರೆ ಸಾರ್ವಜನಿಕರಿಗೆ ಮಾತ್ರ ಅವುಗಳ ಉಪಯೋಗಕ್ಕೆ ಬಾರದಂತಾಗಿದೆ ವಡಗೇರಾ ಪಟ್ಟಣದಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು ಅಧಿಕಾರಿಗಳು ಎಚ್ಚೆತ್ತುಕೊಂಡು ಕೂಡಲೇ ಬಗೇಹರಿಸಬೇಕು ಗ್ರಾಮೀಣ ಭಾಗದಲ್ಲಿಯು ಕುಡಿಯುವ

ನೀರಿನ ಶುದ್ದೀಕರಣ ಘಟಕಗಳು ಕೆಟ್ಟ ನಿಂತು ಧೂಳು ತಿಂ-ದು ತುಕ್ಕು ಹಿಡಿದಿವೆ ಅವುಗಳ ದುರಸ್ತಿಗೆ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ ಇದು ಸರಿಯಲ್ಲ ಗ್ರಾಮೀಣ ಪ್ರದೇಶದಲ್ಲಿ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಡುತ್ತಿದೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತುಕೊಂಡು ದುರಸ್ತಿಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಬೇಕು ಮತ್ತು ಗ್ರಾಮೀಣ ಭಾಗದ ಕೆರೆಗಳಿಗೆ ನೀರು ತುಂಬಿಸಿ ಕೆಟ್ಟು ನಿಂತಿರುವ ಬೋರ್ ವೆಲ್ ಹಾಗೂ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ದುರಸ್ತಿಗೊಳಿಸಿ ತಾಲೂಕಿನ ಗ್ರಾಮೀಣ ಪ್ರದೇಶ ಜನ ಜಾನುವಾರುಗಳಿಗೆ ಅನುಕೂಲ ಮಾಡಿಕೊಡಬೇಕು ಒಂದು ವೇಳೆ ನಿರ್ಲಕ್ಷವಹಿಸಿದ್ದಲ್ಲಿ ಉಗ್ರ ಹೋರಾಟ ಮಾಡುವುದಾಗಿ ರೈತ ಮುಖಂಡ ಪಂಪಣ್ಣ ಎಸ್. ಜಡಿ ಎಚ್ಚರಿಸಿದ್ದಾರೆ.

# ನಾಮಫಲಕಗಳಲ್ಲಿ ಕನ್ನಡ ಕಡ್ಡಾಯಕ್ಕೆ ಆಗ್ರಹಿಸಿ ಕರವೇ ಮನವಿ



• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಪಟ್ಟಣದ ವ್ಯಾಪ್ತಿಯಲ್ಲಿರುವ ಎಲ್ಲಾ ಅಂಗಡಿ ಮುಗ್ಗಟ್ಟುಗಳು, ಸರ್ಕಾರಿ ಹಾಗೂ ಅರೆ ಸರ್ಕಾರಿ ಕಚೇರಿಗಳು ಮತ್ತು ಶಾಲೆಗಳ ಮೇಲೆ ಕನ್ನಡ ಭಾಷೆಯ ನಾಮಫಲಕಗಳನ್ನು ಕಡ್ಡಾಯವಾಗಿ ಅಳವಡಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ವಲಯ ಘಟಕದ ವತಿಯಿಂದ ಮಂಗಳವಾರ ಪುರಸಭೆಗೆ ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಕನ್ನಡ ನಾಡಿನಲ್ಲಿದ್ದು, ಇಲ್ಲಿನ ಸೌಲಭ್ಯಗಳನ್ನು ಬಳಸಿಕೊಂಡು ಅನ್ಯಭಾಷೆಯ ವ್ಯಾಮೋಹಕ್ಕೆ ಒಳಗಾಗಿರುವುದು ವಿಷಾದನೀಯ. ಕೆಂಭಾವಿ ಪಟ್ಟಣದ ಹಲವೆಡೆ ಆಂಗ್ಲ ಭಾಷೆಯ ನಾಮಫಲಕಗಳು ರಾರಾಜಿಸುತ್ತಿದ್ದು, ಇದು ಕನ್ನಡ ಭಾಷೆಗೆ ಮಾಡುತ್ತಿರುವ ಅವಮಾನವಾಗಿದೆ. ಈ ಬಗ್ಗೆ ಈಗಾಗಲೇ ಹಲವು ಬಾರಿ ಲಿಖಿತ ಹಾಗೂ ಮೌಖಿಕವಾಗಿ ಮನವಿ ಮಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕರವೇ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸುರಪುರ ತಾಲೂಕು ಘಟಕದ ಖಜಾಂಚಿ ಶ್ರೀಶೈಲ ಕಾಚಾಪುರ್, ವಲಯ ಅಧ್ಯಕ್ಷ ಕುಮಾರ್ ಮೊಪಗಾರ, ಕಾರ್ಯದರ್ಶಿ ಶಿವು ಮಲ್ಲಿಬಾವಿ, ಚಾಲಕರ ಸಂಘದ ಗೌರವ ಅಧ್ಯಕ್ಷ ಮಹಿಬೂಬ್ ದಫೆದಾರ್, ಅಂಬಯ್ಯ ಬಡಿಗೇರ, ತಿಪ್ಪೇಶ್ ತಳವಾರ, ನಿಂಗಪ್ಪ ಸುಂಕದ ಸೇರಿದಂತೆ ಸಂಘಟನೆಯ ಪ್ರಮುಖರು ಉಪಸ್ಥಿತರಿದ್ದರು.

ಬಾಕ್ಸ್:

ತಕ್ಷಣವೇ ಪಟ್ಟಣದ ಎಲ್ಲಾ ವಾಣಿಜ್ಯ ಮಳಿಗೆಗಳ ಮೇಲಿರುವ ಅನ್ಯಭಾಷೆಯ ಫಲಕಗಳನ್ನು ತೆರವುಗೊಳಿಸಬೇಕು.

ಕನ್ನಡ ಭಾಷೆಗೆ ಅಗ್ರಸ್ಥಾನ ನೀಡಿರುವ ನಾಮಫಲಕಗಳನ್ನು ಅಳವಡಿಸಲು ಪುರಸಭೆ ಕಟ್ಟುನಿಟ್ಟಿನ ಆದೇಶ ಹೊರಡಿಸಬೇಕು. ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲೂ ಕನ್ನಡ ನಾಮಫಲಕಗಳೇ ಪ್ರಮುಖವಾಗಿರಬೇಕು.

# ಪುಸ್ತಕ ಆಯ್ಕೆ ಪಟ್ಟಿ ಪ್ರಕಟ: ಆಕ್ಷೇಪ ಸಲ್ಲಿಸಲು ಅವಕಾಶ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

2022ನೇ ವರ್ಷದಲ್ಲಿ ಪ್ರಥಮ ಮುದ್ರಣಗೊಂಡು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಪಟ್ಟಿಯನ್ನು ರಾಜ್ಯದ ಎಲ್ಲಾ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳ ಕಚೇರಿಗಳಲ್ಲಿ ಹಾಗೂ ಇಲಾಖೆಯ ಅಧಿಕೃತ ವೆಸೈಟ್ ತಿತಿತಿ.ಜಠಿಟ.ಇಚಿಡಿಟಿಚಿಣಚಿಞಚಿ.ರಠತಿ.ಟಿ ನಲ್ಲಿ 2026 ನೇ ಮಾರ್ಚ್ 02 ರಂದು ಪ್ರಕಟಿಸಲಾಗಿದೆ.

ಆಕ್ಷೇಪಣೆ ಸಲ್ಲಿಸಲು ಅವಕಾಶ. ಆಯ್ಕೆಯಾದ ಪುಸ್ತಕಗಳ ಪಟ್ಟಿಯಲ್ಲಿರುವ ಲೇಖಕರು, ಲೇಖಕ – ಪ್ರಕಾಶಕರು, ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು ತಮ್ಮ ಪುಸ್ತಕಗಳಿಗೆ ಸಂಬಂಧಿಸಿದ ಪುಸ್ತಕದ ಶೀರ್ಷಿಕೆ, ಲೇಖಕರ / ಪ್ರಕಾಶಕರ ಹೆಸರು, ಮುಖ ಬೆಲೆ (ನಿಗದಿತ ಬೆಲೆಯಲ್ಲಿ ವ್ಯತ್ಯಾಸವಿದ್ದಲ್ಲಿ), ಪುಸ್ತಕದ ಅಳತೆ ಮತ್ತು ಪುಟಗಳ ಸಂಖ್ಯೆ ಅಥವಾ ಇತರ ಯಾವುದೇ ತಾಂತ್ರಿಕ ವ್ಯತ್ಯಾಸಗಳಿದ್ದಲ್ಲಿ ತಮ್ಮ ಆಕ್ಷೇಪಣೆ ಅಥವಾ ತಿದ್ದುಪಡಿಗಳನ್ನು ಅಧಿಕೃತ ಮಾಹಿತಿ / ದಾಖಲೆಗಳೊಂದಿಗೆ 2026 ನೇ ಮಾರ್ಚ್ 16ರ ಸಂಜೆ 5.30ರ ಒಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು 560001 ಇಲ್ಲಿಗೆ ಲಿಖಿತವಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ನಿಗದಿತ ಅವಧಿಯ ನಂತರ ಬರುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಏಕಪಕ್ಷೀಯವಾಗಿ ನಿರ್ಣಯವನ್ನು ಕೈಗೊಳ್ಳಲಾಗುವುದು ಎಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆಯುಕ್ತರಾದ ಬಸವರಾಜೇಂದ್ರ ಹೆಚ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿಕ್ಷಣದ ಜೊತೆ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮಹತ್ವ ಕೊಡಿ: ಚವ್ಹಾಣ



ಮಲ್ಲಮ್ಮನುಡಿ ವಾರ್ತೆ ಕಮಲನಗರ

ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳೂ ಅತ್ಯಂತ ಅಗತ್ಯವೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ. ಚವ್ಹಾಣ ಅವರು ತಿಳಿಸಿದರು.

ಕಮಲನಗರ ತಾಲ್ಲೂಕಿನ ಠಾಣಾ ಕುಶನೂರ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಥಮಿಕ ವಿಭಾಗದ ವತಿಯಿಂದ ಸೋಮವಾರ ರಂದು ಶಾಲೆಯ ಆವರಣದಲ್ಲಿ ಏರ್ಪಡಿಸಿದ್ದ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪಾಠದೊಂದಿಗೆ ಕ್ರೀಡೆ, ಕಲೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಮಾನ ಮಹತ್ವ ನೀಡಿದಾಗ ಮಾತ್ರ ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ಪ್ರತಿಭೆ ಬೆಳೆಸಬಹುದು. ಈ ದಿಶೆಯಲ್ಲಿ ಶಿಕ್ಷಕರು ಮತ್ತು ಪಾಲಕರು ಮಹತ್ವ ಕೊಡಬೇಕು ಎಂದರು.

ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದು, ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಾ ಬರುತ್ತಿದ್ದೇನೆ. ಅಗತ್ಯತೆಗೆ ಅನುಗುಣವಾಗಿ ಶಾಲೆ–ಕಾಲೇಜು, ವಸತಿ ಶಾಲೆ, ವಸತಿ ನಿಲಯಗಳನ್ನು ನಿರ್ಮಿಸುತ್ತಿದ್ದೇನೆ. ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸುವಂತೆ ಪಾಲಕರಿಗೆ ಮನವಿ ಮಾಡಿದ ಅವರು, ಬಹುತೇಕ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಸಿಯುತ್ತಿರುವ ಸಂದರ್ಭದಲ್ಲಿ ಠಾಣಾ ಕುಶನೂರ ಕೆಪಿಎಸ್ ಶಾಲೆಯ ಪ್ರಾಥಮಿಕ ವಿಭಾಗದಲ್ಲೇ ಸುಮಾರು 500 ವಿದ್ಯಾರ್ಥಿಗಳಿರುವುದು ಸಂತೋಷಕರ ವಿಷಯವೆಂದು ಅಭಿಪ್ರಾಯಪಟ್ಟರು.

ಇಂದಿನ ದಿನಗಳಲ್ಲಿ ಮೊಬೈಲ್ ಗೀಳು ವಿದ್ಯಾರ್ಥಿಗಳ ಭವಿಷ್ಯಕ್ಕೆ ಹಾನಿಕಾರಕವಾಗುತ್ತಿದೆ. ಪಾಲಕರು ಈ ಕುರಿತು ಜಾಗೃತಿ ವಹಿಸಿ, ಮಕ್ಕಳು ಶಾಲೆಯಿಂದ ಮನೆಗೆ ಬಂದ ಬಳಿಕ ಅವರು ಏನು ಕಲಿತಿದ್ದಾರೆಂದು ವಿಚಾರಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಪ್ರತಿದಿನ ಕನಿಷ್ಠ ಒಂದು ಗಂಟೆಯಾದರೂ ಮಕ್ಕಳಿಗೆ ಸಮಯ ನೀಡಿದರೆ ಅವರ ಭವಿಷ್ಯ ಉಜ್ವಲವಾಗುತ್ತದೆ ಎಂದು ಶಾಸಕರು ಕಿವಿಮಾತು ಹೇಳಿದರು.

ದಯಾನಂದ ಗಡ್ಡೆ ಪ್ರಾಸ್ತಾವಿಕ ಮಾತನಾಡಿದರು. ಠಾಣಾಕುಶನೂರ ವಿರಕ್ತ ಮಠದ ಪೂಜ್ಯ ಸಿದ್ದಲಿಂಗ ಮಹಾಸ್ವಾನಿಗಳು ದಿವ್ಯ ಸಾನಿಧ್ಯ ವಹಿಸಿದ್ದರು. ಪ್ರಾಚಾರ್ಯರಾದ ವಿಜಯಕುಮಾರ ಅಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ರಾಮಶೆಟ್ಟಿ ಪನ್ನಾಳೆ, ಗಿರೀಶ ವಡೆಯರ್, ಕಾಶಿನಾಥ ಜೀರ್ಗೆ, ಶಿವಾಜಿರಾವ ಪಾಟೀಲ ಮುಂಗನಾಳ, ಸತೀಷ ಜೀರ್ಗೆ, ಓಂಕಾರ ಸ್ವಾಮಿ, ಸಚಿನ ರಾಠೋಡ, ಸಿಆರ್ಪಿ ನೌನಾಥ ಸೇರಿದಂತೆ ಇತರರು ಉಪಸ್ಥಿತರಿದ್ದರು. ಸುನೀಲ್ ರಂಡ್ಯಾಳೆ ಸ್ವಾಗತಿಸಿದರು. ವಾಮನರಾವ ಕಾಮತೆಕರ್ ವಂದಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರತಿಭೆ ತೋರಿದ ವಿದ್ಯಾರ್ಥಿಗಳಿಗೆ ಶಾಸಕರು ನಗದು ಬಹುಮಾನ ನೀಡಿ ಪ್ರೋತ್ಸಾಹಿಸಿದರು. ಕೆಪಿಎಸ್ ಶಾಲೆಗೆ ಹೆಚ್ಚಿನ ಅನುದಾನ ನೀಡಿ ಶಾಲೆಯನ್ನು ಮಾದರಿ ರೂಪದಲ್ಲಿ ಅಭಿವೃದ್ಧಿಪಡಿಸಿದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಪಾಲಕರು ಶಾಸಕರಾದ ಪ್ರಭು ಬಿ.ಚವ್ಹಾಣ ಅವರನ್ನು ಸನ್ಮಾನಿಸಿದರು.

# ಸಂಸ್ಕೃತಿಯನ್ನು ಪ್ರದರ್ಶಿಸುತ್ತದೆ ಭಾಷೆ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ನಮ್ಮ ತಾಯಿಭಾಷೆ ನಮಗೆ ಆತ್ಮೀಯತೆ ಮತ್ತು ಸೇರಿದ ಭಾವನೆಯನ್ನು ನೀಡುತ್ತದೆ. ಅದು ನಮ್ಮ ರಕ್ತದಲ್ಲಿ ಬೆಸೆದುಕೊಂಡಿದೆ. ಭಾಷೆ ಕೇವಲ ಸಂವಹನದ ಸಾಧನ ಮಾತ್ರವಲ್ಲ; ಅದು ನಮ್ಮ ಭಾವನೆಗಳು, ಪರಂಪರೆ ಮತ್ತು ವ್ಯಕ್ತಿತ್ವವನ್ನು ಹೊತ್ತಿರುತ್ತದೆ ಎಂದು ಕಲೆ,ಭಾಷಾ, ಮಾನವಿಕತೆ ಮತ್ತು ಸಮಾಜ ವಿಜ್ಞಾನ ನಿಕಾಯದ ಡೀನ್ ಡಾ ನಿಶಾತ ಆರಿಫ ಹುಸ್ಸೇನಿ ಹೇಳಿದರು. ಅವರು ಸೋಮವಾರ ಕೆಬಿಎನ ವಿಶ್ವ ವಿದ್ಯಾಲಯದಲ್ಲಿ ಮಾತ್ರ ಭಾಷಾ ದಿವಸದ ಆಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಒಬ್ಬ ವ್ಯಕ್ತಿ ದಿನದಿಂದ ದಿನಕ್ಕೆ, ವರ್ಷದಿಂದ ವರ್ಷಕ್ಕೆ ತನ್ನನ್ನು ತಾನು ಉತ್ತಮಗೊಳಿಸಬೇಕು. ಬೆಳವಣಿಗೆ ಎಂದರೆ ನಿರಂತರ ಪ್ರಯಾಣ. ಪ್ರತಿಯೊಬ್ಬರೂ ಕಾಲಕ್ರಮೇಣ ತಮ್ಮ ಉತ್ತಮ ರೂಪವನ್ನು ಸಾಧಿಸಲು ಪ್ರಯತ್ನಿಸಬೇಕು.

ಇಂದು "ಓಂಟ" ಮತ್ತು "Dad" ಎಂಬ ಪದಗಳು "Ammi," "Abbu," "Avva," ಮತ್ತು "Appa" ಎಂಬ ಪದಗಳನ್ನು ನಿಧಾನವಾಗಿ ಬದಲಿಸುತ್ತಿವೆ. ಬದಲಾವಣೆ ಸಹಜವಾದರೂ, ನಮ್ಮ ಸಂಸ್ಕೃತಿಯ ಅಭಿವ್ಯಕ್ತಿಗಳನ್ನು ಉಳಿಸಿ ಪುನರುಜ್ಜೀವನಗೊಳಿಸುವ ಶಕ್ತಿ ನಮ್ಮಲ್ಲಿದೆ. ನಮ್ಮ ಪರಂಪರೆಯನ್ನು ಜೀವಂತವಾಗಿಡುವುದು ನಮ್ಮ ಕೈಯಲ್ಲಿದೆ.

ಪ್ರತಿ ಭಾಷೆಯಿಗೂ ತನ್ನದೇ ಆದ ರುಚಿ ಮತ್ತು ಸೌಂದರ್ಯವಿದೆ. ಬಹುಭಾಷಾ ಮತ್ತು ಬಹುಸಾಂಸ್ಕೃತಿಕ ಉತ್ಸವಗಳನ್ನು ಆಚರಿಸುವುದರಿಂದ ನಮ್ಮ ವೈವಿಧ್ಯತೆ ಮತ್ತು ಪರಂಪರೆಯನ್ನು ಗೌರವಿಸುತ್ತೇವೆ. ನಮ್ಮ ಸಂಸ್ಕೃತಿಯ ಶ್ರೀಮಂತಿಕೆಯನ್ನು ವಿಶ್ವಕ್ಕೆ ಪರಿಚಯಿಸಿ, ಹೆಮ್ಮೆಯಿಂದ ಪ್ರದರ್ಶಿಸೋಣ ಎಂದು ಅಭಿಪ್ರಾಯ ಪಟ್ಟರು.

ವಿದ್ಯಾರ್ಥಿನಿಯರಾದ ಅರಿಶಿಯಾ, ಜೈಬಾ, ಮದಿಹಾ ಜಬೀನ, ಶಿಫಾ ಅಂಜುಮ, ಅದೀಬಾ ವಿವಿಧ ರಾಜ್ಯಗಳ ಸಾಂಪ್ರದಾಯಿಕ ಉಡುಪುಗಳನ್ನು ತೊಟ್ಟು ಅಲ್ಲಿನ ರಾಜ್ಯ ಭಾಷೆಯಲ್ಲಿ ಮಾತನಾಡಿದರು.

ಸಹಾಯಕ ಪ್ರಾಧ್ಯಾಪಕರಾದ ರಮೇಶ, ಡಾ ಸಂಗನಗೌಡ ಹಿರೇಗೌಡರ, ಡಾ ತಾಜುದ್ದೀನ, ಡಾ ಅತುಂಗ, ಡಾ ಭಾರತಿ, ಡಾ ಅತಿ ಉಲ್ಲಾಹ, ಡಾ ಅಥರ, ಡಾ ಆಫಷನ ದೇಶಮುಖ ಇವರು ತಮ್ಮ ತವರು ರಾಜ್ಯದ ರಾಜ್ಯಭಾಷೆಗಳಾದ ತಮಿಳು, ಕನ್ನಡ , ತೆಲುಗು, ಮಣಿಪುರಿ , ಒರಿಯಾ , ಹಿಂದಿ , ದಕ್ಕನಿ, ಭಾಷೆಗಳಲ್ಲಿ ಮಾತನಾಡಿದರು.

ಮಾತ್ರ ಭಾಷಾ ದಿವಸದ ಅಂಗವಾಗಿ ಏರ್ಪಡಿಸಿದ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು. ವಿದ್ಯಾರ್ಥಿನಿ ಅಮ್ಮರಾ ಪ್ರಾರ್ಥಿಸಿದಳು, ಆಯೇಷಾ ಅಂಜುಮ ಸ್ವಾಗತಿಸಿದಳು, ಮಸೀರಾ ಬತುಲ ವಂದಿಸಿದಳು.

ಕಲಾ, ಭಾಷಾ ಮನವಿಕತೆ ಮತ್ತು ಸಮಾಜ ವಿಜ್ಞಾನ ನಿಕಾಯದ ಎಲ್ಲ ಪ್ರಾಧ್ಯಪಕರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

# ರೇಣುಕರು ಮನಕುಲದ ಏಳಿಗೆಗಾಗಿ ಜನಿಸಿದ ಮಹಾನ್ ವ್ಯಕ್ತಿ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ವೀರಶೈವ ಧರ್ಮದ ಸಂಸ್ಥಾಪಕರಾದ ಆದಿ ರೇಣುಕರು ಮನುಕುಲದ ಉದ್ಧಾರಕ್ಕಾಗಿ ಅವತರಿಸಿದ ಮಹಾನ್ ವ್ಯಕ್ತಿಯಾಗಿದ್ದಾರೆ ಎಂದು ನಂದವಾಡಗಿ, ಆಳಂದ ಪೂಜ್ಯರಾದ ಡಾ. ಅಭಿನವ ಚೆನ್ನಬಸವ ಶಿವಾಚಾರ್ಯರು ಹೇಳಿದರು.

ಪಟ್ಟಣದ ಕಿಲ್ಲಾ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀಶೈಲ ಪಾದಯಾತ್ರೆಗಳ ದಾಸೋಹ, ಜಾತ್ರಾಮಹೋತ್ಸವದ ಅಂಗವಾಗಿ ಶರಣರ ಜೀವನ ದರ್ಶನ ಪ್ರವಚನ ಕಾರ್ಯಕ್ರಮದಲ್ಲಿ ಶ್ರೀ ಆದಿ ರೇಣುಕಾ ಚಾರ್ಯರ ಜಯಂತಿ ನಿಮಿತ್ತ ಮಾತನಾಡಿದರು.

ಮನುಕುಲದ ಒಳಿತಿಗಾಗಿ ಆದಿ ರೇಣುಕಾ ಚಾರ್ಯರ ತತ್ವ ಆದರ್ಶಗಳು ಸರ್ವಕಾಲಿಕವಾಗಿವೆ.

ರೇಣುಕಾಚಾರ್ಯರ ತತ್ವಾದರ್ಶಗಳು ಸರ್ವಕಾಲಿಕ, ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎನ್ನುವ ಘೋಷವಾಕ್ಯವನ್ನು ಜಗತ್ತಿಗೆ ಸಾರಿದರು. ಮಾನವ ಧರ್ಮ ಉನ್ನತವಾದದು ಎನ್ನುವುದು ಮೊಳಗಿಸಿದರು. ನಮ್ಮ ಧರ್ಮ ಭಾವನಾತ್ಮಕದಿಂದ ಕೂಡಿದೆ. ಮನುಷ್ಯನಿಗೆ ನಂಬಿಕೆ ಎನ್ನುವುದು ಬಹಳ ಮುಖ್ಯವಾಗಿದೆ. ನಂಬಿಕೆ ಎನ್ನುವ ಪದಕ್ಕೆ ಅತ್ಯಂತ ಮೌಲ್ಯವಿದೆ. ಸಮಾಜದಲ್ಲಿ ಪರಸ್ಪರ ಭಾಂದವ್ಯದಿಂದ ಬದುಕು ಕಟ್ಟಿಕೊಳ್ಳಬೇಕು. ಈ ಆಧುನಿಕ ಬದುಕಿನಲ್ಲಿ ನಂಬಿಕೆಯನ್ನು ಉಳಿಸಿಕೊಳ್ಳುವಂತ ಕೆಲಸ ನಾವು ನೀವೆಲ್ಲರೂ ಮಾಡಬೇಕಾಗಿದೆ. ಆರೋಗ್ಯಕರ ಸಮಾಜ, ಬದುಕು ಸುಂದರವಾಗಲು ಪ್ರತಿಯೊಬ್ಬರೂ ಆದಿ ರೇಣುಕಾಚಾರ್ಯರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದರು.

ದೇವಸ್ಥಾನದಲ್ಲಿ ಹಮ್ಮಿಕೊಂಡಿರುವ ಶರಣರ ಜೀವನ ದರ್ಶನ ಪ್ರವಚನ ಕಾರ್ಯಕ್ರಮದ ವೇದಿಕೆಯಲ್ಲಿ ಶ್ರೀ ಆದಿ ರೇಣುಕಾ ಚಾರ್ಯರ ಭಾವಚಿತ್ರಕ್ಕೆ ಭಕ್ತಿ– ಭಾವದಿಂದ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ ಜಯಂತಿ ಆಚರಿಸಿದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಸುರೇಶಗೌಡ ಪಾಟೀಲ್ ಆದಾಪೂರು, ಮಹೇಶಸ್ವಾಮೀ ವಸ್ತ್ರದ್, ಲಿಂಗಪ್ಪ ಹಣಿಗಿ, ವಿಶ್ವನಾಥ ದೇಸಾಯಿ, ಅನಿಲಕುಮಾರ ಬುಶೆಟ್ಟಿ, ಶಶಿಧರ್ ಕಂಚಿಮಠ, ಕಾಳಪ್ಪ ಬಡಿಗೇರ, ಉದಯಕುಮಾರ, ಶರಣಪ್ಪ ಕಗ್ಗಲ್ , ದೇವಸ್ಥಾನದ ಅರ್ಚಕ ವಿರೇಶ, ಸುರೇಶ, ಸದಾನಂದಯ್ಯಸ್ವಾಮೀ ಹಿರೇಮಠ, ಚಂದ್ರು ಕೆ ವಿ, ಸಂಗೀತ ಬಳಗ ಹಾಗೂ ಸಕಲ ಸದ್ಭಕ್ತರು ಇದ್ದರು.

# ನಾರ್ಕೋಟಿಕ್ ಮಾದಕ ವಸ್ತು ಜಪ್ತಿ ಆರೋಪಿಗಳ ಬಂಧನ: ಪ್ರದೀಪ್ ಗುಂಟಿ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಬೀದರ ಪೊಲೀಸರ ಕಾರ್ಯಾಚರಣೆ ಮಾಡಿ ನಾರ್ಕೋಟಿಕ್ ಮಾದಕ ದ್ರವ್ಯ ಅಂಶಗಳಿರುವ ಸುಮಾರು 59,511 ರೂ. ಮೌಲ್ಯದ ಗುಳಿಗೆಗಳು ಹಾಗೂ ಸಿರಪ್ ಬಾಟಲಿಗಳನ್ನು ಜಪ್ತಿ ಮಾಡಲಾಗಿದ್ದು, ಜೊತೆಗೆ ಸುಮಾರು 75 ಸಾವಿರ ರೂ. ಮೌಲ್ಯದ ಎರಡು ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣ ಸಂಬಂಧ ಮೂವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೈದರಾಬಾದ್‌ನಿಂದ ಮಾದಕ ಅಂಶ ಹೊಂದಿರುವ ಸಿರಪ್ ಬಾಟಲಿಗಳು ಮತ್ತು ಪೇನ್‌ಕಿಲ್ಲರ್ ಗುಳಿಗೆಗಳನ್ನು ಬೀದರ್ ನಗರದ ಯುವಕರಿಗೆ ಮಾರಾಟ ಮಾಡುವ ಉದ್ದೇಶದಿಂದ ಇಬ್ಬರು ಬೈಕ್‌ಗಳಲ್ಲಿ ಸಾಗಣೆ ಮಾಡುತ್ತಿದ್ದ ವೇಳೆ ಪೊಲೀಸರು ಅವರನ್ನು ಬಂಧಿಸಿದ್ದಾರೆ ಎಂದು ತಿಳಿಸಿದರು.

ಪೊಲೀಸರು ಸುಮಾರು 4,800 ಗುಳಿಗೆಗಳು ಹಾಗೂ 100 ಸಿರಪ್ ಬಾಟಲಿಗಳನ್ನು ಜಪ್ತಿ ಮಾಡಿದ್ದಾರೆ. ಆರೋಪಿಗಳನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ. ಇಂತಹ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಪದೇ ಪದೇ ತೊಡಗುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ರೌಡಿಶೀಟ್ ತೆರೆಯುವುದಲ್ಲದೆ ಗಡಿಪಾರು ಕ್ರಮ ಜರುಗಿಸಲಾಗುವುದು ಎಂದು ಎಸ್‌ಪಿ ಎಚ್ಚರಿಸಿದ್ದಾರೆ.

ಇದೇ ಸಂದರ್ಭದಲ್ಲಿ ಚಂದ್ರಕಾಂತ ಪೂಜಾರಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರು–1 ಬೀದರ, ಎಸ್.ಎನ್ ಸನದಿ ಡಿಎಸ್‌ಪಿ ಸೆನ್ ಪೊಲೀಸ್ ಠಾಣೆ ಹಾಗೂ ದೂದ್ ಪೀರ್ ಹೆಚ್ ಮುಲ್ಲಾ ಡಿಎಸ್‌ಪಿ ಬೀದರ ಉಪವಿಭಾಗ ರವರ ನೇತೃತ್ವದಲ್ಲಿ, ಪಾಲಕ್ಷಯ್ಯ ಹಿರೇಮಠ ಪೊಲೀಸ್ ನಿರೀಕ್ಷಕರು ನಗರ ವೃತ್ತ, ಹಾಗೂ ಸಿದ್ದಣ್ಣ ಗಿರಿಗೌಡರ ಪಿಎಸ್‌ಐ ಮಾರ್ಕೆಟ್ ಪೊಲೀಸ್ ಠಾಣೆ ಹಾಗೂ ಸಿಬ್ಬಂದಿಯವರಾದ ಶೀವ ರಾಜ , ಸಿದ್ರಾಮ್, ಈರಾರೆಡ್ಡಿ , ಮುತ್ತಣ್ಣ ಸೇರಿದಂತೆ ಅನೇಕ ಸಿಬ್ಬಂದಿಗಳು ಭಾಗವಹಿಸಿದರು ಈ ಸಂಬಂಧ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಿಶ್ವ ಶ್ರವಣ ದಿನದ ಅಂಗವಾಗಿ ಜಾಗೃತಿ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣಾಧಿಕಾರಿಗಳ ಕಛೇರಿ, ಜಿಲ್ಲಾ ಆಸ್ಪತ್ರೆ ಹಾಗೂ ಸರ್ವೋದಯ ಗ್ರಾಮೀಣ ಕೈಗಾರಿಕಾ ತರಬೇತಿ ಸಂಸ್ಥೆ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಸಭಾಭವನದಲ್ಲಿ ಮಂಗಳವಾರಂದು ವಿಶ್ವ ಶ್ರವಣ ದಿನ ಜಾಗೃತಿ ಕಾರ್ಯಕ್ರಮ ಹಾಗೂ ಕಿವಿ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣಾಧಿಕಾರಿ ಡಾ. ಪ್ರಕಾಶ ಹೆಚ್. ಮಾತನಾಡಿ, ಪ್ರತಿ ವರ್ಷ ಮಾರ್ಚ್ 3 ರಂದು "ವಿಶ್ವ ಶ್ರವಣ ದಿನ" ಕಾರ್ಯಕ್ರಮ ಆಚರಿಸಲಾಗುತ್ತದೆ. ಈ ಕಾರ್ಯಕ್ರಮದ ಉದ್ದೇಶ ಶ್ರವಣದೋಷ ಮತ್ತು ಕಿವುಡುತನ ತಡೆಗಟ್ಟುವಿಕೆ ಮತ್ತು ನಿಯಂತ್ರಣದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವುದಾಗಿದೆ. "ಸಮುದಾಯಗಳಿಂದ ತರಗತಿಗಳಿಗೆ: ಎಲ್ಲಾ ಮಕ್ಕಳಿಗೆ ಶ್ರವಣ ಆರೈಕೆ, ಯಾವುದೇ ಮಗು ಶ್ರವಣ ಅಥವಾ ಶ್ರವಣ ಸಮಸ್ಯೆಗಳಿಂದ ಭವಿಷ್ಯದಲ್ಲಿ ಹಿಂದೆ ಉಳಿಯದಂತೆ ಈಗಲೇ ನಿಗಾವಹಿಸಿ" ಎಂಬ ಘೋಷವಾಕ್ಯದೊಂದಿಗೆ ಈ ವರ್ಷ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಆಚರಿಸಲಾಗುತ್ತದೆ. ಕಿವಿಯು ಪ್ರತಿಯೊಬ್ಬ ಮನುಷ್ಯನ ಪಂಚೇಂದ್ರಿಯಗಳಲ್ಲಿ ಪ್ರಮುಖ ಅಂಗವಾಗಿದ್ದು, ಅದನ್ನು ಪ್ರತಿಯೊಬ್ಬರೂ ತಮ್ಮ ಜೀವನದುದ್ದಕ್ಕೂ ರಕ್ಷಣೆ ಮಾಡಿಕೊಳ್ಳಬೇಕು. ಕಿವಿಯಲ್ಲಿ ಕಡ್ಡಿ ಹಾಕಬಾರದು, ಎಣ್ಣೆ ಹಾಕಬಾರದು, ನಕಲಿ ವೈದ್ಯರ ಕಡೆಯಿಂದ ಕಿವಿಯಲ್ಲಿ ಗುಗ್ಗೆ ತೆಗೆಸಿಕೊಳ್ಳಬಾರದು. ವೈದ್ಯರ ಸಲಹೆ ಇಲ್ಲದೆ ಕಿವಿಯಲ್ಲಿ ಏನೂ ಹಾಕಬಾರದು, ಕಲುಷಿತ ನೀರಿನಲ್ಲಿ ಈಜಬಾರದು ಎಂದು ತಿಳಿಸಿದರು. ಕಿವಿನೋವು, ಸೋರುವಿಕೆ ಕಂಡು ಬಂದರೆ ತಮ್ಮ ಸಮೀಪದ ತಾಲೂಕಾ/ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಕಿವಿ, ಮೂಗು, ಗಂಟಲು ತಜ್ಞರನ್ನು ಸಂಪರ್ಕಿಸಬೇಕು ಹಾಗೂ 2 ವರ್ಷದೊಳಗಿನ ಮಕ್ಕಳಿಗೆ ಉಚಿತ ಶ್ರವಣ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುವುದು ಎಂದು ತಿಳಿಸಿದರು. ಎಲ್ಲರೂ ತಮ್ಮ ತಮ್ಮ ಕಿವಿಯ ರಕ್ಷಣೆಯ ಬಗ್ಗೆ ಜಾಗೃತರಾಗಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಿವಿ, ಮೂಗು ಹಾಗೂ ಗಂಟಲು ತಜ್ಞರಾದ ಡಾ. ಅವಿನಾಶ ಮಾತನಾಡಿ, ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮ, ನವಜಾತು ಶಿಶುವಿನ ಕಿವಿಯ ಆರೈಕೆ ಮತ್ತು ಕಾರ್ಯಕ್ರಮದಡಿಯಲ್ಲಿ ಸಿಗುವ ಸೇವಾ ಸೌಲಭ್ಯಗಳ ಮತ್ತು ಚಿಕಿತ್ಸೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವ್ಹಿ.ಪಿ. ಇವರು ಮಾತನಾಡಿ, ಕಿವಿಯ ಆರೋಗ್ಯ ರಕ್ಷಣೆಯಲ್ಲಿ ಅನುಸರಿಸಬೇಕಾದ ನಿಯಮಗಳ ಕುರಿತು ವಿವರವಾಗಿ ಮಾತನಾಡಿದರು. ಆಡಿಯೋಲಾಜಿಸ್ಟ್ ಬಿಂದು ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮದಡಿಯಲ್ಲಿ ಕಿವಿಯ ಪರೀಕ್ಷೆ ಹಾಗೂ ಸೇವಾ ಸೌಲಭ್ಯಗಳ ಬಗ್ಗೆ ಮಾತನಾಡಿದರು. ನಂತರ, ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ಉಪನ್ಯಾಸಕರಿಗೆ ಕಿವಿಯ ತಪಾಸಣೆ ಮಾಡಿ, ನ್ಯೂನ್ಯತೆವುಳ್ಳವರಿಗೆ ಚಿಕಿತ್ಸೆ ನೀಡಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ನಿಂಗಪ್ಪ ಗದ್ದಿಗೇರಿ ಮಾತನಾಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹಮ್ಮಿಕೊಳ್ಳುವ ಜಾಗೃತಿ ಕಾರ್ಯಕ್ರಮ ಹಾಗೂ ಕಿವಿಯ ತಪಾಸಣಾ ಶಿಬಿರ ಇಂದಿನ ವಿದ್ಯಾರ್ಥಿಗಳಿಗೆ ಬಹಳ ಪ್ರಯೋಜನಕಾರಿಯಾಗಿದೆ. ಜೊತೆಗೆ ಮಾನಸಿಕ ಆರೋಗ್ಯ ಕಾರ್ಯಕ್ರಮದ ಬಗ್ಗೆ ವಿದ್ಯಾರ್ಥಿಗಳು ಸದುಪಯೋಗಪಡೆದುಕೊಂಡು ತಮ್ಮ ತಮ್ಮ ಗ್ರಾಮಗಳಲ್ಲಿ, ವಾರ್ಡ್ಗಳಲ್ಲಿ ಹಾಗೂ ಸುತ್ತ–ಮುತ್ತಲಿನ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ನಗರ ಆರೋಗ್ಯ ಕೇಂದ್ರದ ಸಿಬ್ಬಂದಿ ಶ್ರೀನಿವಾಸ, ಆರೋಗ್ಯ ನಿರೀಕ್ಷಣಾಧಿಕಾರಿ ಲೋಹಿತ, ಆಶಾ ಕಾರ್ಯಕರ್ತೆಯರು, ಸಿಬ್ಬಂದಿಗಳು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಿದರು.

# ಪ್ರಜಾಪ್ರಭುತ್ವದಲ್ಲಿ ಕಾನೂನಿನ ಅರಿವು ಪ್ರತಿಯೊಬ್ಬರಿಗೂ ಅನಿವಾರ್ಯ: ನ್ಯಾ. ವಾನಖೇಡೆ



• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ**

ಪ್ರಜಾಪ್ರಭುತ್ವದಲ್ಲಿ ಕಾನೂನಿನ ಅರಿವು ಪ್ರತಿಯೊಬ್ಬರಿಗೂ ಅನಿವಾರ್ಯ, ಪ್ರತಿಯೊಬ್ಬರೂ ತಮ್ಮ ಹಕ್ಕುಗಳು ಮತ್ತು ಕಾನೂನು ಅರಿವು ಹೊಂದುವುದು ಅತ್ಯಗತ್ಯ ಎಂದು ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಸಂಚಾರಿ ನ್ಯಾಯಾಲಯ, ಕಮಲನಗರ ನ್ಯಾಯಧೀಶರಾದ ವಿನಾಯಕ ವಾನಖೇಡೆ ಅಭಿಪ್ರಾಯಪಟ್ಟರು.

ಪಟ್ಟಣದಲ್ಲಿ ಪೊಲೀಸ್ ಠಾಣೆ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲ್ಲೂಕು ಕಾನೂನು ಸೇವೆಗಳ ಸಮಿತಿ, ತಾಲ್ಲೂಕು ವಕೀಲರ ಸಂಘ, ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಈಚೆಗೆ ಏರ್ಪಡಿಸಿದ್ದ ರಸ್ತೆ ಸುರಕ್ಷತಾ ಜಾಗೃತಿ ಮತ್ತು ಕಾನೂನು ಅರಿವು ನೆರವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.ಶಿಕ್ಷಣ ಪಡೆದಾಗ ಕಾನೂನಿನ ಜ್ಞಾನ ಮೂಡುತ್ತದೆ. ಆಗ ಸಮಾಜದಲ್ಲಿ ಶಾಂತಿ ಹಾಗೂ ಸಹಬಾಳ್ವೆಯಿಂದ ಬದುಕಲು ಸಾಧ್ಯ ಎಂದರು.ಪಿಎಐ ಆಶಾ ರಾಠೋಡ್ ಮಾತನಾಡಿ, ಪ್ರತಿನಿತ್ಯ ಅಪಘಾತ ಪ್ರಕರಣಗಳು ಕಡಿಮೆಗೊಳಿಸಬೇಕಾದರೇ, ರಸ್ತೆ ಸುರಕ್ಷತೆ ಬಗ್ಗೆ ಸಾರ್ವಜನಿಕರು, ವಿದ್ಯಾರ್ಥಿಗಳು ತಿಳಿದು ತಮ್ಮ ಪೋಷಕರಿಗೆ ಜಾಗೃತಿ ಮೂಡಿಸಬೇಕು ಎಂದರು.ಔರಾನ ಸರ್ಕಾರಿ ವಕೀಲ ಶಿವರಾಜ ಶೇಟಕಾರ ಮಾತನಾಡಿ, ಹುಟ್ಟಿದ ಕ್ಷಣದಿಂದಲೂ ಹಕ್ಕುಗಳು ಅನ್ವಯವಾಗುತ್ತವೆ ಎಂದರು.ಈ ಸಂದರ್ಭದಲ್ಲಿ ವಕೀಲರಾದ ಪ್ರೀಯಂಕಾ ಮೇತ್ರೆ(ಕೋಟೆ), ಭೀಮರಾವ ಗಾಯಕವಾಡ್, ಸುರೇಶ, ಪೊಲೀಸ್ ಸಿಬ್ಬಂದಿ ಎಎಐ ವಸಂತ, ಲೋಕೇಶ, ಶಿವಾನಂದ, ಸತೀಷ, ಸಂತೋಷ, ದಶರಥ, ಮಲ್ಲಿಕಾರ್ಜುನ, ವೈಜನಾಥ, ರಾಜಕುಮಾರ ಸೋನಾಖುಎ, ಅಂಕುಶ ಭವರಾ ಸೇರಿದಂತೆ ಶರಣಬಸಪ್ಪ ಪಬ್ಲಿಕ್ ಶಾಲೆ, ಡಾ। ಚನ್ನಬಸವ ಪ್ರೌಢ ಶಾಲೆ ಮತ್ತು ಭಾಗಿರಥಿ ಪಬ್ಲಿಕ್ ಶಾಲೆ ಸಿಬ್ಬಂದಿ ಹಾಗೂ ಮಕ್ಕಳು ಪಾಲ್ಗೊಂಡಿದ್ದರು.

## ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ

# ಪ್ರಭಾಕರ್‌ಗೆ ಗಾಂಧಿ ಪುರಸ್ಕಾರ ಪ್ರಧಾನ



ಬೆಂಗಳೂರು: ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ, ಯೋಗಕ್ಷೇಮ ಮೀಡಿಯಾ ಪ್ರೈವೇಟ್ ಲಿಮಿಟೆಡ್, ವಿಶ್ವಂ ಟಿವಿ ವತಿಯಿಂದ ನೀಡಿದ ಗಾಂಧಿ ಪುರಸ್ಕಾರವನ್ನು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ ಪ್ರಭಾಕರ್ ಅವರಿಗೆ ಶಕ್ತಿ ಭವನದಲ್ಲಿ ಪ್ರದಾನ ನಸುಕಿನ ನೊಗ ನಾಟಕ ಪ್ರದರ್ಶನಕ್ಕೆ ಕಾರಣಾಂತರದಿಂದ ಕೆವಿಪಿ ಅವರು ಬರಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಇಂದು ಪ್ರಶಸ್ತಿಯನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು, ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷರಾದ ಶಂಭುಲಿಂಗ, ಯೋಗಕ್ಷೇಮ ಮೀಡಿಯಾ ಪ್ರೈವೇಟ್ ಲಿಮಿಟೆಡ್ ನ ಪ್ರಧಾನ ವ್ಯವಸ್ಥಾಪಕರಾದ ಡಾ.ಎಸ್ ಎಲ್ ಎನ್ ಸ್ವಾಮಿ ಅವರುಗಳು ಪ್ರದಾನ ಮಾಡಿದರು.ಈ ಸಂದರ್ಭದಲ್ಲಿ ಮಂಡ್ಯ ರವಿ ಶ್ರೀವತ್ಸ ಕೆ ಎಸ್ ಹಾಗೂ ಪ್ರತಿನಿಧಿ ಪತ್ರಿಕೆ ಸಂಪಾದಕರಾದ ಸಿ.ಕೆ ಮಹೇಂದ್ರ, ಧರ್ಮಪುರಾ ನಾರಾಯಣ, ಜಗದೀಶ್ ಉಪಸ್ಥಿತರಿದ್ದರು.

# ನಾಗಲಕ್ಷ್ಮೀ ಚೌಧರಿ: ಅಂಬ್ಯುಲೆನ್ಸ್‌ಗೆ ಚಾಲನೆ

• **ಮಲ್ಲಮ್ಮ ನುಡಿ, ಬೆಂಗಳೂರು**

ಚಿಕ್ಕಬಾಣಾವರದಲ್ಲಿ ಕಾಂಗ್ರೆಸ್ ಮುಖಂಡ ಮಹಮದ್ ಸಲೀಂ ನೇತೃತ್ವದಲ್ಲಿ ಕಮ್ಮಗೊಂಡನಹಳ್ಳಿಯ ಮಸ್ಜೀದ್ ಎ ನೂರಾನಿ, ಹಾಗೂ ಒನ್ ನೇಷನ್ ಒನ್ ಟ್ರಸ್ಟ್ ಸಹಯೋಗದೊಂದಿಗೆ ಚಿಕ್ಕಬಾಣಾವರ ಹಾಗೂ ದಾಸರಹಳ್ಳಿಯ ಬಡಜನರಿಗೆ ಉಚಿತ ಆಂಬುಲೆನ್ಸ್ ಸೇವೆಗಾಗಿ ಎರಡು ವಾಹನಗಳಿಗೆ ರಾಜ್ಯ ಮಹಿಳಾ ಆಯೋ ಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಚಾಲನೆ ನೀಡಿದರು.



ಈ ವೇಳೆ ಹ್ಯೂಮನ್ ರೈಟ್ಸ್ ಪ್ರೊಟೆಕ್ಷನ್ ಕಮಿಟಿ ರಾಜ್ಯಾಧ್ಯಕ್ಷ ಬಿ.ಎಂ. ಚಿಕ್ಕಣ್ಣ, ಕಾಂಗ್ರೆಸ್ ಮುಖಂಡರಾದ ಬಿ.ಎಂ. ಜಗದೀಶ್, ಹರೀಶ್ ಪಾರ್ಥ, ಪದಾಧಿಕಾರಿಗಳಾದ ಮೊಹಮದ್ ಮುಸ್ತಫಾ, ಅಜೀಂ, ಕಿಶೋರ್ ಎಂ.ಡಿ, ರಿಯಾ, ರಿಹಾನಾ, ಮನ್ಸೂರ್, ಯಾಸೀರ್, ಅಬ್ದುಲ್ಲ, ಮತ್ತಿತರರು ಇದ್ದರು, ವಾಹನಕ್ಕೆ ಮೊಬೈಲ್ ಸಂಖ್ಯೆ: 9008666229/9343733277.

# ಪಟ್ಟಿ ಪ್ರಕಟ; ಆಕ್ಷೇಪೆ ಸಲ್ಲಿಸಲು ಅವಕಾಶ

ರಾಯಚೂರು 2022ನೇ ವರ್ಷದಲ್ಲಿ ಪ್ರಥಮ ಮುದ್ರಣಗೊಂಡು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಪಟ್ಟಿಯನ್ನು ರಾಜ್ಯದ ಎಲ್ಲಾ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳ ಕಚೇರಿಗಳಲ್ಲಿ ಹಾಗೂ ಇಲಾಖೆಯ ಅಧಿಕೃತ ವೆಬ್‌ಸೈಟ್ ತಿತಿತಿ.ಜರಿಟ.ಇಚಿಡಿಟಿಚಿಣಚಿಇಚಿ. ರಠತ.ಏಟನಲ್ಲಿ 2026 ನೇ ಮಾರ್ಚ್ 02 ರಂದು ಪ್ರಕಟಿಸಲಾಗಿದೆ.

ಆಕ್ಷೇಪಣೆ ಸಲ್ಲಿಸಲು ಅವಕಾಶ: ಆಯ್ಕೆಯಾದ ಪುಸ್ತಕಗಳ ಪಟ್ಟಿಯಲ್ಲಿರುವ ಲೇಖಕರು, ಲೇಖಕ – ಪ್ರಕಾಶಕರು, ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು ತಮ್ಮ ಪುಸ್ತಕಗಳಿಗೆ ಸಂಬಂಧಿಸಿದ ಪುಸ್ತಕದ ಶೀರ್ಷಿಕೆ, ಲೇಖಕರ / ಪ್ರಕಾಶಕರ ಹೆಸರು, ಮುಖ ಬೆಲೆ (ನಿಗದಿತ ಬೆಲೆಯಲ್ಲಿ ವ್ಯತ್ಯಾಸವಿದ್ದಲ್ಲಿ), ಪುಸ್ತಕದ ಅಳತೆ ಮತ್ತು ಪುಟಗಳ ಸಂಖ್ಯೆ ಅಥವಾ ಇತರ ಯಾವುದೇ ತಾಂತ್ರಿಕ ವ್ಯತ್ಯಾಸಗಳಿದ್ದಲ್ಲಿ ತಮ್ಮ ಆಕ್ಷೇಪಣೆ ಅಥವಾ ತಿದ್ದುಪಡಿಗಳನ್ನು ಅಧಿಕೃತ ಮಾಹಿತಿ / ದಾಖಲೆಗಳೊಂದಿಗೆ 2026 ನೇ ಮಾರ್ಚ್ 16ರ ಸಂಜೆ 5.30ರ ಒಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು □ 560001 ಇಲ್ಲಿಗೆ ಲಿಖಿತವಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ನಿಗದಿತ ಅವಧಿಯ ನಂತರ ಬರುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಏಕಪಕ್ಷೀಯವಾಗಿ ನಿರ್ಣಯವನ್ನು ಕೈಗೊಳ್ಳಲಾಗುವುದು ಎಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆಯುಕ್ತರಾದ ಬಸವರಾಜೇಂದ್ರ ಹೆಚ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಣ್ಣದ ಓಕುಳಿಯಲ್ಲಿ ಕುಣಿದು ಕುಪ್ಪಳಿಸಿದ ಯುವಕರು



• **ಮಲ್ಲಮ್ಮ ನುಡಿ ವಾರ್ತೆ ಚಡಚಣ**

ಹೋಳಿ ಹುಣ್ಣಿಮೆಯ ಪ್ರಯುಕ್ತ ಚಡಚಣ ತಾಲೂಕಿನ ಧೂಳಖೇಡ ಗ್ರಾಮದಲ್ಲಿ ಮಂಗಳವಾರ ಯುವಕರು ಬಣ್ಣದೋಕುಳಿಯಲ್ಲಿ ಮಿಂದೇಳುವ ಮೂಲಕ ಸಂಭ್ರಮದ ಹಬ್ಬಕ್ಕೆ ಸಾಕ್ಷಿಯಾದರು.

ಮಂಗಳವಾರ ಬೆಳಗಾಗುತ್ತಿದ್ದಂತೆಯೇ ರಸ್ತೆಗಿಳಿದ ಚಿಣ್ಣರು ಹಾಗೂ ಯುವಕರು ನಾನಾ ನಮೂನೆಯ ಬಣ್ಣದೋಕುಳಿ ತುಂಬಿದ ಬಾಟಲಿ, ಡಬ್ಬಿಗಳ ಮೂಲಕ ಪರಸ್ಪರ ಬಣ್ಣ ಎರಚಿದರು.

ಸೋಮವಾರ ರಾತ್ರಿ ಕಾಮದಹನ ಪೂರ್ಣಗೊಳಿಸಿ, ಮಧ್ಯರಾತ್ರಿಯವರೆಗೆ ಹಾಡು, ಕುಣಿತದಲ್ಲಿ ತೊಡಗಿದ್ದ ಯುವ ಜನತೆ ಮಂಗಳವಾರ ಬೆಳಗ್ಗೆಯಿಂದಲೇ ಬಣ್ಣದಾಟದಲ್ಲಿ ತೊಡಗಿದ್ದರು. ಮಧ್ಯಾಹ್ನ ಸುಮಾರು 2.30 ರವರೆಗೆ ಬಣ್ಣದಲ್ಲಿ ಮುಳುಗಿ ಎದ್ದರು.

ಧೂಳಖೇಡ ಗ್ರಾಮದ ನೂರಾರು ಯುವಕರು, ಮಹಿಳೆಯರು ಮಕ್ಕಳು ವಯಸ್ಸಿನ ಹಂಗಿಲ್ಲದೆ ರಸ್ತೆಗಳ ಮೇಲೆ ಬಣ್ಣದ ಓಕುಳಿಯಲ್ಲಿ ತೇಲಾಡಿದರು.

ಹಲವು ಯುವಕರ ತಂಡಗಳು ಮಡಿಕೆ ಒಡೆದು ಪರಸ್ಪರ ಬಣ್ಣ ಸವರುವ, ಬಣ್ಣದೋಕುಳಿ ಎರಚುವ, ಮೊಟ್ಟೆ, ಟೊಮೆಟೊ ಪರಸ್ಪರ ಒಡೆದುಕೊಂಡು ಖುಷಿ ಪಟ್ಟರು. ಯುವಕರು ಅಷ್ಟೆ ಅಲ್ಲದೆ, ಮಧ್ಯ ವಯಸ್ಕರು ಮಕ್ಕಳೊಂದಿಗೆ ಸೇರಿ ಹೋಳಿ ಆಚರಿಸಿದರೆ, ಮಕ್ಕಳು ಗುಂಪು ಕಟ್ಟಿಕೊಂಡು ಬಣ್ಣ ಪಿಚಕಾರಿಗಳನ್ನು ಹಿಡಿದು ಸಂಭ್ರಮಿಸಿದರು.

# ಚೆನ್ನೂರ ತಾಂಡದಲ್ಲಿ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರಕ್ಕೆ ಚಾಲನೆ



• **ಮಲ್ಲಮ್ಮ ನುಡಿ, ಹುಣಸಗಿ**

ಶ್ರೀ ಆದಿ ಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು ಹಾಗೂ ಸ್ವಾಮಿ ವಿವೇಕಾನಂದ ಪದವಿ ಮಹಾವಿದ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನಾ ಸಮಾರಂಭವು ತಾಲೂಕಿನ ಚೆನ್ನೂರ ತಾಂಡದಲ್ಲಿ ರಾಷ್ಟ್ರೀಯ ಭಾವೈಕ್ಯತೆಯ ವಾತಾವರಣದಲ್ಲಿ ಸಡಗರದಿಂದ ಜರುಗಿತು.

ವಿ.ಎಸ್.ಪಿ.ಎಂ.ಐ.ಟಿ.ಐ ಕಾಲೇಜಿನ ಪ್ರಾಚಾರ್ಯ ಬಸವರಾಜ್ ಮರೋಳ ಮುಖ್ಯ ಅತಿಥಿಯಾಗಿ ದೀಪ ಬೆಳಗಿಸುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ, ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳ ಜೊತೆಗೆ ಸಾಮಾಜಿಕ ಸೇವೆಯಲ್ಲೂ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು. ಎನ್‌ಎಸ್‌ಎಸ್ ಶಿಬಿರಗಳು ವಿದ್ಯಾರ್ಥಿಗಳಿಗೆ ಸಮಾಜದ ನೆಲೆಯಲ್ಲಿರುವ ಸಮಸ್ಯೆಗಳನ್ನು ನೇರವಾಗಿ ಅರ್ಥಮಾಡಿಕೊಳ್ಳಲು ಹಾಗೂ ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಸಹಕಾರಿಯಾಗುತ್ತವೆ. ಶಿಬಿರವನ್ನು ಸದುಪಯೋಗಪಡಿಸಿಕೊಂಡು ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಅಧ್ಯಕ್ಷತೆವಹಿಸಿದ ಪ್ರಾಚಾರ್ಯ ಸುರೇಶ ಕೀರಣಗಿ ಮಾತನಾಡಿ, ಸ್ವಚ್ಛತಾ ಅಭಿಯಾನ, ವೃಕ್ಷಾರೋಪಣ, ಸಾಕ್ಷರತಾ ಜಾಗೃತಿ, ಆರೋಗ್ಯ ಮತ್ತು ನೈರ್ಮಲ್ಯ ಕುರಿತು ಗ್ರಾಮದಲ್ಲಿ ಜಾಗೃತಿ ಮೂಡಿಸುವುದು ಶಿಬಿರದ ಪ್ರಮುಖ ಉದ್ದೇಶವಾಗಿದೆ. ಯುವಜನತೆಯ ಶಕ್ತಿಯನ್ನು ಸಮಾಜದ ಅಭಿವೃದ್ಧಿಗೆ ಬಳಸಿಕೊಳ್ಳುವ ಅಗತ್ಯತೆ ಇದೆ ಎಂದು ತಿಳಿಸಿದರು.

ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಪ್ರಕಾಶ್ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ, ಎನ್‌ಎಸ್‌ಎಸ್ ಕೇವಲ ಒಂದು ಚಟುವಟಿಕೆಯಲ್ಲ, ಅದು ಒಂದು ಜೀವನ ಶೈಲಿ. ಶಿಬಿರದ ಅನುಭವಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಚೋಕ್ಲಾನಾಯಕ್ ಕೃಷ್ಣನಾಯಕ್ ಚವ್ಹಾಣ ಅವರು ಧ್ವಜಾರೋಹಣ ನೆರವೇರಿಸಿದರು. ಉಪನ್ಯಾಸಕರಾದ ಬಸವರಾಜ್ ಅಗ್ನಿ ಕಾರ್ಯಕ್ರಮ ನಿರೂಪಿಸಿದರು. ಸರಸ್ವತಿ ಸ್ವಾಗತಿಸಿದರು. ಪದ್ಮಾವತಿ ಘಂಟಿ ವಂದಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಮುಖಂಡರಾದ ಆನಂದ್ ಘೆಮಲಾ ನಾಯಕ ಖಾರಬಾರಿ, ಸುರನಾಯಕ್ ನೇಮಾನಾಯ್ಕ, ಹನಮಂತ ದೇವಲಾನಾಯ್ಕ, ಉಪನ್ಯಾಸಕರಾದ ಸೋಮಶೇಖರ್ ಸುತಾರ್, ಮಲ್ಲಿಕಾರ್ಜುನ, ವಿಜಯ ತಿರುಪತಿ ರಾಠೋಡ್, ಬಸಪ್ಪ ಶರಣರ, ಪ್ರಾಚಾರ್ಯ ರವಿಕುಮಾರ ಬಂಟನೂರ, ಮಾಜಿ ಗ್ರಾ.ಪಂ ಸದಸ್ಯೆ ಸೋನುಬಾಯಿ ಸೇರಿದಂತೆ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

# ಪ್ರಜಾಸೌಧ ನಿರ್ಮಾಣಕ್ಕೆ ಶಂಕುಸ್ಥಾಪನೆ



• **ಮಲ್ಲಮ್ಮ ನುಡಿ, ಹುಣಸಗಿ**

ತಾಲೂಕಿನ ಬಹುಕಾಲದ ಬೇಡಿಕೆಯಾಗಿದ್ದ ಪ್ರಜಾಸೌಧ ಕಟ್ಟಡ ಕಾಮಗಾರಿಗೆ ಸೋಮವಾರ ಶಾಸಕ ರಾಜಾ ವೇಣುಗೋಪಾಲ ನಾಯಕ ಅವರ ಅಧ್ಯಕ್ಷತೆಯಲ್ಲಿ ಶಂಕುಸ್ಥಾಪನೆ ಸಮಾರಂಭ ನೆರವೇರಿತು.

ಹುಣಸಗಿ ಹೊಸ ತಾಲೂಕು ಆಗಿ ಹಲವು ವರ್ಷಗಳು ಕಳೆದರೂ ಸ್ವಂತ ಆಡಳಿತ ಕಟ್ಟಡದ ಕನಸು ಸಾಕಾರವಾಗಿರಲಿಲ್ಲ. ಸಾರ್ವಜನಿಕರು ವಿವಿಧ ಕಚೇರಿಗಳ ಸೇವೆಗಾಗಿ ಪರದಾಡುವ ಸ್ಥಿತಿ ಇತ್ತು. ಇದೀಗ 6 ಕೋಟಿ 81 ಲಕ್ಷ ರೂ.ಗಳ ವೆಚ್ಚದಲ್ಲಿ ಪ್ರಜಾಸೌಧ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದ್ದು, 11 ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಶಾಸಕ ರಾಜಾ ವೇಣುಗೋಪಾಲ ನಾಯಕ ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, “ನಮ್ಮ ಅವಧಿಯಲ್ಲಿ ಹುಣಸಗಿ ಪಟ್ಟಣಕ್ಕೆ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಕೈಗೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ತಂದು ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು. ಶೀಘ್ರದಲ್ಲೇ ಹೊಸ ಬಸ್ ನಿಲ್ದಾಣ ಹಾಗೂ ಬಸ್ ಘಟಕ ಕಾಮಗಾರಿಗೂ ಸರ್ಕಾರದ ಹಂತದಲ್ಲಿ ಚಾಲನೆ ನೀಡಲಾಗುವುದು,” ಎಂದು ಹೇಳಿದರು.

ತಾಲೂಕು ದಂಡಾಧಿಕಾರಿ ಬಸವರಾಜ ಮಾತನಾಡಿ, ಪ್ರಜಾಸೌಧ ಕಟ್ಟಡ ನಿರ್ಮಾಣದಿಂದ ಆಡಳಿತ ವ್ಯವಸ್ಥೆ ಸುಗಮವಾಗಲಿದ್ದು, ಸಾರ್ವಜನಿಕರಿಗೆ ಒಂದೇ ಸೂರಿನಡಿ ವಿವಿಧ ಇಲಾಖೆಗಳ ಸೇವೆಗಳು ಲಭ್ಯವಾಗಲಿವೆ ಎಂದು ತಿಳಿಸಿದರು.

ಹುಣಸಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಚಂದ್ರಶೇಖರ ದಂಡಿನ ಮಾತನಾಡಿ, ಪಟ್ಟಣಕ್ಕೆ ಪ್ರಜಾಸೌಧ ಕಟ್ಟಡ ನಿರ್ಮಾಣವಾಗುತ್ತಿರುವುದು ತಾಲೂಕಿನ ಅಭಿವೃದ್ಧಿಗೆ ಹೊಸ ಮುನ್ನುಡಿ ಬರೆದಂತಾಗಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯರಾದ ಸಿದ್ದಣ್ಣ ಮಲಗಲದಿನ್ನಿ, ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ರಾಜಶೇಖರಗೌಡ ಪಾಟೀಲ, ಪಟ್ಟಣ ಪಂಚಾಯತ್ ಸದಸ್ಯ ಶರಣು ದಂಡಿನ, ಆರ್.ಎಂ. ರೇವಡಿ, ಸುರಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಿಂಗರಾಜ ಬಾಚಿಮಟ್ಟಿ, ಭಿಮಾರಾಯ ಮೂಲಿನಮನಿ, ಅದ್ಭುಲ ಸುಬಾನ್ ಅಲಿ ಡೆಖ್ಖನ, ಮಲ್ಲಣ್ಣ ಸಾಹುಕಾರ ಮುದೋಳ, ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷ ತಿಪ್ಪನಾಯಕ ರಾಠೋಡ, ಬಸವರಾಜ ಸಜ್ಜನ, ರವಿ ಮಲಗಲದಿನ್ನಿ, ಮಹಾದೇವಿ ಬೇವಿನಾಳಮಠ ಸೇರಿದಂತೆ ಪಟ್ಟಣ ಪಂಚಾಯತ್ ಸದಸ್ಯರು, ಅನೇಕ ಮುಖಂಡರು, ತಾಲೂಕು ಕಂದಾಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಮನರೇಗಾ ಮರುಸ್ಥಾಪಿಸಲು ಕಾಂಗ್ರೆಸ್ ಬ್ರಹತ್ ಜಾಥಾ



• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**

ನಗರದ ಕಾಂಗ್ರೆಸ್ ಕಚೇರಿಯಿಂದ ಹುಣಸೂರು ಉಪವಿಭಾಗಧಿಕಾರಿಗಳ ಕಚೇರಿವರೆಗೆ ಕಾಂಗ್ರೆಸ್ ಪಕ್ಷದ ವತಿಯಿಂದ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ನೇತೃತ್ವದಲ್ಲಿ ಜನರು ಸೇರಿ ವಿಬಿ ಜಿ ರಾಮ್ ಜಿ ಅನ್ನು ಸ್ಥಾಪಿಸಿರುವ ಕೇಂದ್ರ ಸರ್ಕಾರದ ವಿರೋಧಿ ನೀತಿಯನ್ನು ಖಂಡಿಸಿ ಮನರೇಗಾ ಪುನಃ ಮರುಸ್ಥಾಪಿಸುವಂತೆ ಒತ್ತಾಯಿಸಿ ಮನರೇಗಾ ಬಚಾವೋ ಆಂದೋಲನ ಎಂದು ಕಾಂಗ್ರೆಸ್ ಪಕ್ಷದ ಕಛೇರಿಯಿಂದ ಕಾಲ್ನಡಿಗೆ ಜಾಥಾ ಮೂಲಕ ಸಂವಿಧಾನ ವೃತ್ತ, ಹಳೇ ಬಿಎಂ ರಸ್ತೆ,ಕಲ್ಪತರು ವೃತ್ತ,ಹೊಸ ಬಿಎಂ ರಸ್ತೆ ಮೂಲಕ ಉಪವಿಭಾಗಾಧಿಕಾರಿ ಕಛೇರಿಯವರೆಗೆ ಕಾಲ್ನಡಿಗೆ ಜಾಥಾವನ್ನು ನಡೆಸಿರುತ್ತಾರೆ.

ಪ್ರತಿಭಟನೆ ನಡೆಸಿ ಉಪವಿಭಾಗಾಧಿಕಾರಿ ಕಾವ್ಯಾರಾಣಿ ರವರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ನಂತರ ಸುದ್ದಿಗಾರರೊಂದಿಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ:– ನಮ್ಮ ಹೋರಾಟದ ಫಲವಾಗಿ ಹಾಗೂ ಜಿಲ್ಲಾಧಿಕಾರಿರವರು ಸಭೆ ನಡೆಸಿದ ಹಿನ್ನೆಲೆಯಲ್ಲಿ ತಂಬಾಕಿನ ಬೆಲೆ 305 ರೂ ನೀಡುತ್ತಿದ್ದಾರೆ. ಅದಕ್ಕೆ ಮಂಜಣ್ಣ,ಕೆ.ವೆಂಕಟೇಶ್, ನಾನು ಕಾರಣ.ಎಚ್.ಡಿ.ಕುಮಾರಸ್ವಾಮಿ ರವರು ನೆನ್ನೆ ಶೋಗೆ ತಂಬಾಕು ಸಭೆ ಮಾಡಿದ್ದಾರೆ ಹಾಗೂ. ಹುಣಸೂರಿನಲ್ಲಿ ವರ್ಜಿನಿಯಾ ಒಳ್ಳೆಯ ಹೊಗೆಸೊಪ್ಪು ಬೆಳೆಯುತ್ತಿದ್ದಾರೆ. ಕರ್ನಾಟಕದಲ್ಲಿ ಕಡಿಮೆ ಬೆಲೆಯನ್ನು ನೀಡುತ್ತಿದ್ದಾ–ರೆ. ಆಂದ್ರದಲ್ಲಿ ಹೊಗೆಸೊಪ್ಪುಗೆ 452 ಬೆಲೆ ರೂ ಮಾಡಿದ್ದಾರೆ. ಎಂದು ತಿಳಿಸಿದರು ಹುಣಸೂರಿನಲ್ಲಿ ನೀವು ಏನು ಅಭಿವೃದ್ಧಿ ಕೆಲಸ ಮಾಡಿದ್ದೀರಿ ಹೇಳಿ.ನರೇಗಾ ಯೋಜನೆಗೆ ಬೆಂಕಿ ಇಟ್ಟರು,ನಮ್ಮ ಯೋಜನೆಗಳನ್ನು ಬದಲಾಯಿಸಿ ಹಾಳು ಮಾಡುತ್ತಿದ್ದಾರೆ.80 ವರ್ಷಗಳಲ್ಲಿ ಅಭಿವೃದ್ಧಿ ಮಾಡಿದ ಕಾಮಗಾರಿಗೆ ಅಪಮಾನ ಮಾಡುತ್ತಿದ್ದಾರೆ.

ಕೃಷಿ ಟೈಮಲ್ಲಿ ನರೇಗಾ ಯೋಜನೆ ಇರಲ್ಲ.ಕಾಂಗ್ರೆಸ್ ಎಲ್ಲಾ ಯೋಜನೆಯನ್ನು ಸುಟ್ಟು ಹಾಕಿದ್ದಾರೆ.ನರೇಗಾ ಯೋಜನೆಗೆ ರಾಜ್ಯದಿಂದ 40% ನೀಡಬೇಕು ಕೇಂದ್ರದಿಂದ 60% ನೀಡುತ್ತೇವೆಂದು ಹೇಳುತ್ತಿದ್ದಾರೆ.

ನರೇಗಾ ಯೋಜನೆ 20 ವರ್ಷಗಳ ಕಾಲದಲ್ಲಿ 80 ಸಾವಿರ ಕೋಟಿ ಹಣವನ್ನು ವಿನಿಯೋಗ ಮಾಡಲಾಗಿದೆ. ಈ ಯೋಜನೆ ಯಿಂದ 1.10 ಲಕ್ಷ ಜನರು ಫಲಾನುಭವಿಗಳು ಇದ್ದಾರೆ. ಒಂದು ವರ್ಷದಲ್ಲಿ 100 ದಿನಗಳ ಉದ್ಯೋಗ ಅವಕಾಶ ಇತ್ತು. ಮುಂದಿನ ದಿನಗಳಲ್ಲಿ ಗಾಂಧಿ ಹೆಸರು ತೆ–ಗೆದು ಗೂಡ್ಸೆ ಹೆಸರು ತಂದರೂ ಆಶ್ಚರ್ಯ ಇಲ್ಲ. ವಿಬೀ ರಾಮ್ ಜೀ ಎಂಬ ಹೆಸರಲ್ಲಿ ಬದಲಾವಣೆ ಮಾಡಿದ್ದಾರೆ.

ಭಾರತ ಸರ್ಕಾರ ಅಮೇರಿಕಾದ ಜೊತೆಗೆ 45 ಲಕ್ಷ ಕೋಟಿ ಯಷ್ಟು ವ್ಯವಹಾರ ಒಪ್ಪಂದಕ್ಕೆ ಸಹಿಹಾಕಿದ್ದಾರೆ. ಅಮೇರಿಕಾ 200% ಸಬ್ಸಿಡಿ ಕೊಡುತ್ತದೆ . ಭಾರತದಲ್ಲಿ ಯಾವುದೇ ರೈತರಿಗೆ ಸಬ್ಸಿಡಿ ಕೊಡಲ್ಲ.ವಿಬಿ ಜೀ ರಾಮ್ ಜಿ ಹೆಸರಲ್ಲಿ ಸ್ಥಾಪನೆ ಮಾಡಿದೆ ಅದರಲ್ಲಿ ರಾಮನಾ ಹೆಸರು ಇಲ್ಲ, ಗಾಂಧಿ ಹೆಸರು ಇಲ್ಲ. ನಾವು ಮಂಜಣ್ಣ ತಂಬಾಕು ಮಾರುಕಟ್ಟೆ ಭೇಟಿ ಕೊಟ್ಟು ಸಿಎಂ ರವರಿಗೆ ಸಭೆ ಮಾಡಿ ಎಂದು ಕೇಳಿಕೊಂಡಿದ್ದಕ್ಕೆ ಡಿಸಿ ಸಭೆ ಮಾಡಿದ್ದಕ್ಕೆ ಈಗ 305 ರೂ ಸಿಗುತ್ತಿದೆ ಎಂದು

ಮಾಜಿ ಶಾಸಕ ಎಚ್.ಪಿ. ಮಂಜುನಾಥ್ ಮಾತನಾಡಿ:– ಹುಣಸೂರು ತಾಲ್ಲೂಕಿನಲ್ಲಿ 600 ಹೆಚ್ಚು ಗ್ರಾ.ಪಂ ಸದಸ್ಯರಿದ್ದಾರೆ ನರೇಗಾ ಯೋಜನೆಯನ್ನು ಮುಂದುವರೆಸುತ್ತಾರೆ ಎಂಬ ಅಶಾಭಾವನೆ ಇದೆ.

ನರೇಗಾ ಯೋಜನೆಯನ್ನು ಕಾಂಗ್ರೆಸ್ ಪಕ್ಷ ಮಾಡಿದ್ದಾರೆ ಅದನ್ನು ಬದಲಾವಣೆ ಮಾಡಿ ವಿಬಿ ಜೀ ರಾಮ್ ಜೀ ಎಂದು ಹೆಸರು ಇಟ್ಟರೆ ಆಯ್ತು, ಹೊಟ್ಟೆ ಹಸಿವಿಗೆ ದೇವರು ಬರಲ್ಲ.ನಾವೇ ದುಡಿಯಬೇಕು. ಎಂದರು

ಭಾರತ ದೇಶವು ಜಗತ್ತಿನಲ್ಲಿ ಅತಿ ಹೆಚ್ಚು ಸಾಲ ಮಾಡಿದ ದೇಶವಾಗಿದೆ. ಸುಮಾರು 246 ಲಕ್ಷ ಕೋಟಿ ಸಾಲ ಮಾಡಿದ್ದಾರೆ ಮೋದಿಯವರು.ಪ್ರದಾನಿಯವರು ಇಸ್ರೇಲ್ ಗೆ ಹೋಗಿ ಅಲ್ಲಿ ಅಪ್ಪಂದಿರ ದೇಶ್ ಇಸ್ರೇಲ್ ಎಂದು, ಅಮ್ಮಂದಿರ ದೇಶ ಭಾರತವೆಂದು ಹೇಳುತ್ತಾರೆ. ಮೋದಿಯವರು

ಇಸ್ರೇಲ್ ಹೋಗಿ ಬಂದ ತಕ್ಷಣ ಅಲ್ಲಿ ಯುದ್ಧ ಪ್ರಾರಂಭವಾಗಿದೆ.

ನಮ್ಮ ದೇಶದಲ್ಲಿ ಇಬ್ಬರು ಪ್ರಭಾವಿ ಉದ್ಯಮಿಗಳನ್ನು ಬೆಳೆಸುತ್ತಿದ್ದೀರಿ. ಜನರೊಂದಿಗೆ ಜನತಾದಳ ಈಗ ರಾಜ್ಯಾದ್ಯಂತ ನಡೆಯುತ್ತಿದೆ. ಯಾ–ರೋ ಸೋಷಿಯಲ್ ಮೀಡಿಯಾದಲ್ಲಿ ಹಾಕಿದ್ದಾರೆ. ಮಂಜಣ್ಣ ಪ್ರತಿನಿತ್ಯ ಜನರೊಂದಿಗೆ, ಆದರೆ ಜನತಾದಳ ಮೂರು ವರ್ಷಕ್ಕೊಮ್ಮೆ ಜನರೊಂದಿಗೆ ಜನತಾದಳ ಎಂದು ಹಾಕಿದ್ದಾರೆ.

ನಾನು ಲಕ್ಷ್ಮಣ್ ಪ್ರತಿದಿನ ಜನರೊಂದಿಗೆ ಇರುತ್ತೇವೆ.ಜನರೊಂದಿಗೆ ನಾನು ಸದಾ ಇರುತ್ತೇನೆ.ಮುಂಬರುವ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಯಾರು ಗ್ರಾ.ಪಂ.ಯಲ್ಲಿ ಹೆಚ್ಚು ಖರ್ಚು ಮಾಡದೇ ಗೆಲ್ಲಬೇಕು

ಏಕೆಂದರೆ ಖರ್ಚು ಮಾಡಿದ ಹಣ ಸಹ ಬರುವುದಿಲ್ಲ.ನೀವು ಸರ್ಕಾರದ ಅನುದಾನ ಹಾಗೂ ತಮ್ಮ ಹಣದಿಂದ ಕೆಲಸ ಮಾಡುತ್ತಿದ್ದೀರಿ. ಉದ್ಯೋಗ ಖಾತ್ರಿ ಯೋಜನೆ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಪ್ರಯೋಜನ ವಾಗುತ್ತಿತ್ತು.ಅದಕ್ಕೆ ಕೇಂದ್ರ ಸರ್ಕಾರ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ಕಾರ್ಯಕ್ರಮದಲ್ಲಿ ಜಿಲ್ಲಾದ್ಯಕ್ಷ ಬಿಜೆ ವಿಜಯ್ ಕುಮಾರ್,ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಭೋವಿ ನಿಗಮ ಮಂಡಳಿ ಅಧ್ಯಕ್ಷ ರಾಮಪ್ಪ ಭೋವಿ ಆಶ್ರಯ ಸಮಿತಿಯ ಸದಸ್ಯರಾದ ಮೊಹಮ್ಮದ್ ಸಲಾಉದ್ದೀನ್ ಅಮೀನ್ ವಕ್ ಬೋರ್ಡ್ ಸದಸ್ಯರಾದ ಅಜ್ಗರ್ ಪಾಶ. ಯೋಜನೆಯ ಸಮಿತಿ ಸದಸ್ಯರಾದ ಅಫ್ರೋಜ್ ಅಹ್ಮದ್ ಕಾಂಗ್ರೆಸ್ ಪಕ್ಷದ ಯುವ ಕಾರ್ಯಕರ್ತರು ಫೈಸಲ್ ಕೌಶಿಕ್ ಮುಜೀಬ್ ಅಹಮದ್ ಯಾಸಿರ್ ರಮೇಶ್ ಮಂಜು ರಾಘು ನಾಡಪಳ್ಳಿ ರಾಜು ರವಿ ದೇವರಾಜು ಕುಮಾರ ಅಭಿಮಾನಿಗಳು ಮುಖಂಡರು ಭಾಗವಹಿಸಿರುತ್ತಾರೆ.

# ಅಮರೇಶ್ವರ ಜಾತ್ರೆ: ಪಾದಯಾತ್ರಿಗಳಿಗೆ ದಾಸೋಹ

• **ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರು**

ಅಮರೇಶ್ವರ ಜಾತ್ರೆ–ಯ ಅಂಗವಾಗಿ ಕಸಬಾ ಲಿಂಗಸಗೂರಿನಲ್ಲಿ ಪಾದಯಾತ್ರಿಗಳಿಗೆ ದಾಸೋಹ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ವೀರೇಶ್ ಹೊಸುಗಾರಮಠ ಅವರ ನೇತೃತ್ವದಲ್ಲಿ,

ಅಗಸಿ ಒಳಗಡೆ ಪಾದಯಾತ್ರೆ ಸಾಗುವ ಭಕ್ತರಿಗೆ ಅನ್ನಸಂತರ್ಪಣೆ ಮಾಡಲಾಯಿತು.



ಈ ಸಂದರ್ಭದಲ್ಲಿ ಅಮರೇಶ ಗಾಣಿಗೇರ,

ಮನೋಜ್ ಬಿರಾದಾರ, ಶಂಕರಪ್ಪ ಗೌಡರ, ಶಿವನಗೌಡ ಪೊಲೀಸ್ ಪಾಟೀಲ್, ಬಸಯ್ಯ ಮಠಪತಿ,

ಅಶೋಕ್ ಹಿಪ್ಪರಗಿ ಸೇರಿದಂತೆ ಹಲವಾರು ಮುಖಂಡರು ಉಪಸ್ಥಿತರಿದ್ದರು. ಊರಿನ ಹಿರಿಯರು, ಯುವಕರು ಹಾಗೂ ಮಕ್ಕಳು ಸೇರಿ ಭಕ್ತರಿಗೆ ಸೇವೆ ಸಲ್ಲಿಸಿ ದಾಸೋಹ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಪಾದಯಾತ್ರೆಯಾಗಿ ಆಗಮಿಸಿದ ಭಕ್ತರು ದಾಸೋಹ ಸೇವೆಯನ್ನು ಸ್ವೀಕರಿಸಿ

ಆಯೋಜಕರಿಗೆ ಧನ್ಯವಾದಗಳನ್ನು ತಿಳಿಸಿದರು. ಸಮಾಜಸೇವೆಯ ಜೊತೆಗೆ ಧಾರ್ಮಿಕ ಸಂಪ್ರದಾಯವನ್ನು ಉಳಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆಯೋಜಕರು ಹೇಳಿದರು.

ದಾಸೋಹ ಕಾರ್ಯಕ್ರಮದಿಂದ ಪಾದಯಾತ್ರಿಗಳಿಗೆ ಅನುಕೂಲವಾಗಿದ್ದು, ಗ್ರಾಮೀಣ ಭಾಗದಲ್ಲಿ ಭಕ್ತಿಭಾವ ಮತ್ತು ಸಹಕಾರ ಮನೋಭಾವ ಮತ್ತಷ್ಟು ಬಲಗೊಂಡಿದೆ.

# ಕರ್ತವ್ಯಕ್ಕೆ ನಿರ್ಲಕ್ಷ್ಯ ರಾಷ್ಟ್ರಧ್ವಜಕ್ಕೆ ಅಪಮಾನ ಆರೋಪ: ಪಿಡಿಒ ವಿರುದ್ಧ ಕ್ರಮಕ್ಕೆ ಆಗ್ರಹ




• ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು

ಕರ್ತವ್ಯಕ್ಕೆ ನಿರ್ಲಕ್ಷ್ಯ ತೆ–ೂರಿಸಿ ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿದ್ದಾರೆಂದು ಆರೋಪಿಸಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶೋಭಾ ರಾಣಿ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕರ್ನಾಟಕ ಜನ ಜಾಗೃತಿ ಸಮಿತಿಯ ವತಿಯಿಂದ ಸಹಾಯಕ ಆಯುಕ್ತರ ಕಚೇರಿ ಮುಂದೆ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಧರಣಿಯಲ್ಲಿಪಾಲ್ಗೊಂಡಸಂಘಟನೆ ಸದಸ್ಯರು,ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿದ ಪಿಡಿಓ ವಿರುದ್ಧ 'ರಾಷ್ಟ್ರ ಗೌರವ ಸಂರಕ್ಷಣಾ ಕಾಯ್ದೆ 1971.ಸೆಕ್ಷನ್ 2 ಉಲ್ಲಂಘನೆಯಡಿ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು. ಆದರೆ ಈ ಪ್ರಕರಣದಲ್ಲಿ ಸಂಬಂಧಿಸಿದ ಅಧಿಕಾರಿಗಳು ಯಾವುದೇ ತನಿಖೆ ನಡೆಸದೆ ನಿರ್ಲಕ್ಷ್ಯ ತೋರಿದ್ದು, ಪಿಡಿಓ ಅವರಿಗೆ ಬೆಂಬಲ ನೀಡುತ್ತಿರುವುದು ಮೇಲ್ನೋಟಕ್ಕೆ ಕಾಣಿಸುತ್ತಿದೆ ಎಂದು ಆರೋಪಿಸಿದರು.

ಪಿಡಿಓ ಶೋಭಾ ರಾಣಿ ಅವರು ನೀಡಿದ ಉಡಾಫೆ ಉತ್ತರದ ಕುರಿತು ವಿಡಿಯೋ ಹಾಗೂ ಆಡಿಯೋ ದಾಖಲೆಗಳನ್ನು ನಾವು ಸಲ್ಲಿಸಿದ್ದೇವೆ.

ಇದಾದರೂ ತನಿಖಾ ವರದಿ ಸಿದ್ಧಪಡಿಸದೆ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ ಅವರು ಪಿಡಿಓಗೆ ಪರೋಕ್ಷ ಬೆಂಬಲ ನೀಡುತ್ತಿರುವುದು ಬೇಸರಕಾರಿ ಸಂಗತಿ ಎಂದು ಧರಣಿ ನಿರತರು ಆಕ್ರೋಶ ವ್ಯಕ್ತಪಡಿಸಿದರು.

ಒಂದು ವಾರದೊಳಗೆ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ ಹಾಗೂ ಪಿಡಿಓ ಶೋಭಾ ರಾಣಿ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಅಮಾನತು ಮಾಡಬೇಕು. ಇಲ್ಲದಿದ್ದರೆ ಧರಣಿ ತೀವ್ರಗೊಳಿಸಲಾಗುವುದು ಎಂದು ಸಂಘಟನೆ ಎಚ್ಚರಿಕೆ ನೀಡಿತು.

ಈ ಸಂದರ್ಭದಲ್ಲಿ ಸಂಘದ ಸಂಸ್ಥಾಪಕರಾದ ಯೇಸಪ್ಪ, ತಾಲ್ಲೂಕು ಅಧ್ಯಕ್ಷ ಕಿರಣಕುಮಾರ, ಹುಲುಗಪ್ಪ ಸೈದಾಪುರ, ಮರೆಶ ಭಂಡಾರಿ,

ಚಂದ್ರಪ್ಪ ಕವಿತಾಳ, ಸುರೇಶ್, ಚಿನ್ನಪ್ಪ, ರವಿಕುಮಾರ, ಪ್ರದೀಪ ಚಿಕ್ಕೆಸರೂರ ಸೇರಿದಂತೆ ಹಲವರು ಅನಿರ್ದಿಷ್ಟಾವಧಿ ಧರಣಿಯಲ್ಲಿ ಭಾಗವಹಿಸಿದ್ದರು.

# ಏಳುಬೆಂಚಿಯಲ್ಲಿ ಕಲ್ಬುರ್ಗಿ ಶ್ರೀ ಶರಣಬಸವೇಶ್ವರ ಪುರಾಣ ವಾಚನ ಆರಂಭ

ಮಲ್ಲಮ್ಮ ನುಡಿ ವಾರ್ತೆ ಕುರುಗೋಡು




ತಾಲೂಕಿನ ಏಳುಬೆಂಚಿ ಗ್ರಾಮದಲ್ಲಿ "ವೀರಶೈವ ಸಮಾಜದವರಿಂದ" ಕಲ್ಬುರ್ಗಿ ಶ್ರೀ ಶರಣಬಸವೇಶ್ವರ ಪ್ರಾರಂಭ 02–03–2026 ರಿಂದ ಮುಕ್ತಾಯ 22–03–2026 ರವರಿಗೆ 21 ದಿನಗಳ ಕಾಲ ಪುರಾಣ ವಾಚನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ನಮ್ಮ ಗ್ರಾಮೀಣ ಭಾಗದಲ್ಲಿ ಶರಣರ ತತ್ವಗಳನ್ನು ಎಲ್ಲರೂ ತಿಳಿದುಕೊಂಡು ಸಮಾಜದಲ್ಲಿ ಅವರ ಪಾಲನೆಗಳನ್ನು ಅರಿತು ನಡೆಯಬೇಕು ಎಂದು ನಿವೃತ್ತ ಶಿಕ್ಷಕ ಶ್ರೀ ಡಿ.ಎಂ.ಸದಾಶಿವಯ್ಯ ಸ್ವಾಮಿ ಹೇಳಿದರು. ಶರಣಬಸವೇಶ್ವರರು ಕೇವಲ ಧಾರ್ಮಿಕ ಸಂತನಾಗಿರದೆ ಕಾಯಕ ಮತ್ತು ಜ್ಞಾನದ ಮೂಲಕ ಸಮಾಜದಲ್ಲಿ ಬದಲಾವಣೆ ತಂದ ಮಹಾನ್ ದಾರ್ಶನಿಕರಾಗಿದ್ದರು ಎಂದು ಏಳುಬೆಂಚಿ ಮಠದ ಶ್ರೀ ವೈ.ಎಂ. ಶಿವಕುಮಾರ ಸ್ವಾಮೀಜಿ ಹೇಳಿದರು. ಶ್ರೀ ಶರಣಬಸವೇಶ್ವರ ಮಾನವತಾವಾದವನ್ನು ಎತ್ತಿ ಹಿಡಿದ ಮಹಾನ್ ಸಂತರು. ಜಾತಿ–ಭೇದವಿಲ್ಲದ ಸಮಾಜಗುರು–ಶಿಷ್ಯ ಪರಂಪರೆ ಮತ್ತು ಬದುಕಿನಲ್ಲಿ ಸರಳತೆಯನ್ನು ಬೋಧಿಸಿದ ಅವರ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ. ಅವರ ಪ್ರಮುಖ ತತ್ವಗಳನ್ನು ಈ ಎಲ್ಲರೂ ಅಳವಡಿಸಿಕೊಂಡು ನಡೆಯಬೇಕು ಎಂದು ಶ್ರೀ.ಕರುಣಾಮೂರ್ತಿ ಶಾಸ್ತ್ರಿಗಳು ಹೇಳಿದರು. ಕಲಬುರಗಿಯ ಮಹಾ ದಾಸೋಹಿ ಶ್ರೀ ಶರಣಬಸವೇಶ್ವರರು 18ನೇ ಶತಮಾನದ (ಸುಮಾರು 1746) ಲಿಂಗಾಯತ ಸಂತ ದಾರ್ಶನಿಕ ಮತ್ತು ದಾಸೋಹ ಪರಂಪರೆಯ ಪ್ರವರ್ತಕರು. ಜೇವರ್ಗಿ ತಾಲ್ಲೂಕಿನ ಅರಳಗುಂಡಗಿಯಲ್ಲಿ ಜನಿಸಿದ ಇವರು ಕಲಬುರಗಿಯಲ್ಲಿ ನೆಲೆಸಿ 'ಕಾಯಕವೇ ಕೈಲಾಸ' ತತ್ವದಡಿ ಅನದಾಸೋಹ (ಅನ್ನದಾನ) ಮತ್ತು ಶಿಕ್ಷಣಕ್ಕೆ ಒತ್ತು ನೀಡಿದರು ಎಂದು ಊರಿನ ಮುಖಂಡ ಶ್ರೀ. ವೈ.ಜಿ ತಮ್ಮನಗೌಡ ಹೇಳಿದರು. ನಮ್ಮ ಕಲ್ಬುರ್ಗಿ ಶ್ರೀ ಶರಣಬಸವೇಶ್ವರವರು ವಿದ್ಯಾ ಮತ್ತು ಹಸಿದವರಿಗೆ ಊಟ ನೀಡಬೇಕು ನಮ್ಮ ಜೀವನದಲ್ಲಿ ಇದಕ್ಕಿಂತ ದೊಡ್ಡ ದಾನ ಇನ್ನೊಂದು ಇಲ್ಲ ಎಲ್ಲಾ ಕಾಯಕ ಯೋಗಿಗಳು ಜನರಿಗೆ ಸರಿಯಾದ ಸಮಯಕ್ಕೆ ಏನು ನೀಡಬೇಕು ಅದನ್ನು ಕೊಟ್ಟು ಸಲುಹಿದವರು ನಮ್ಮ ಗ್ರಾಮದ ಜನರು ಶ್ರೀ ಶರಣಬಸವೇಶ್ವರ ಮಾರ್ಗದೊಳಗೆ ನಡೆಯಬೇಕು ಎಂದು ಊರಿನ ಮುಖಂಡ ಶ್ರೀ. ಜಿ.ಕುಮಾರಗೌಡರ ನಯನಗೌಡರು ಹೇಳಿದರು. ಪುರಾಣ ವಾಚನಕಾರರು:– ಶ್ರೀ ಪಕೇಶ್ವರ ಶಾಸ್ತ್ರಿಗಳು ಹಿರೇಮಠ ಬೆಳ್ಳಹಟ್ಟಿ, ದಿಲ್ ರೂಬ್ ವಾದಕರು:– ಎಂ.ಶಾಂತವೀರಯ್ಯ ಸ್ವಾಮಿ ಹಿರೇಮಠ, ತಬಲಾ ವಾದಕರು:– ಶ್ರೀ ಮಾನೇಶ ಕುಮಾರ್ ಹಾಲವಿ, ಹಾರ್ಮೋನಿಯಂ:–ಗಾನಕೋಗಿಲೆ ಶ್ರೀ ಪಂಪನಗೌಡ 64 ಹಳೇಕೋಟೆ ಕಾರ್ಯಕ್ರಮ ಮಾಡಿದರು. ಪುರಾಣದಲ್ಲಿ ಭಾಗವಹಿಸಿದವರು:–ಶ್ರೀ ಡಿ. ಎಂ.ಚೆನ್ನಯ್ಯ ಸ್ವಾಮಿ, ಶ್ರೀ ಗೋಡೆ ಎರ್ರಯಪ್ಪಗೌಡ, ಶ್ರೀ, ಬಲಿಗೌಡರ ರುದ್ರಗೌಡ, ಶ್ರೀ. ಅಂಗಡಿ ಹಗರಪ್ಪ ಗೌಡ, ಶ್ರೀ. ಕಾರೆ ಮೌನೇಶಗೌಡ, ಶ್ರೀ ಕರ್ಚೆಡ್ ಮಹಾದೇವ ಗೌಡ, ಶ್ರೀ ಓಂಕಾರಗೌಡ, ಶ್ರೀ ಎಣ್ಣೆ ಪಂಪಣ್ಣ, ಶ್ರೀ ಕೊಂಚಗೇರಿ ವೀರೇಶಪ್ಪ, ಶ್ರೀ. ಪೋರನಗೌಡರ ಶಂಕರಗೌಡ, ಶ್ರೀ.ಅಂಗಡಿ ರಮೇಶ ಊರಿನ ಎಲ್ಲಾ ವೀರಶೈವ ಧರ್ಮದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಯಲಬುರ್ಗಾದಲ್ಲಿ ರಂಗು ರಂಗಿನ ಹೋಳಿ ಹಬ್ಬ

• ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ

ಪಟ್ಟಣದಲ್ಲಿ ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವು ಸಡಗರ ಸಂಭ್ರಮದಿಂದ ಹೋಳಿ ಹಬ್ಬ ಆಚರಣೆ ಜರುಗುತ್ತಾ ಬಂದಿರುತ್ತದೆ, ಹೋಳಿ ಹುಣ್ಣಿಮೆಯ ಒಂದು ವಾರದ ಮುಂಚಿತವಾಗಿ ಯುವಕರು ಕುಳ್ಳಿನ ಬಣವೆ, ಕಟ್ಟಿಗೆಯನ್ನು ತುಡಗತನದಿಂದ ಕಳವು ಮಾಡಿ ಕಾಮನ ದಹನ ಮಾಡುವ ಜಾಗದಲ್ಲಿ ಸಂಗ್ರಹ ಮಾಡುತ್ತಾರೆ, ಹುಣ್ಣಿಮೆಯ ಐದು ದಿನಗಳ ಮುಂಚಿತವಾಗಿ ಸರ್ಕಾರಿ ಕಾಮ, ದೈವ ಕಾಮ, ಗಾಳಿಯಾರ ಕಾಮ, ಕಂಡೇರ ಕಾಮ ಹೀಗೆ ಪಟ್ಟಣದ ನಾಲ್ಕು ಭಾಗದಲ್ಲಿ ಕಾಮ, ರತಿ, ಭೀಮನ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಅಲಂಕಾರ ಮಾಡುತ್ತಾರೆ, ಆ ಮೂರ್ತಿ ನೋಡುಗರ ಗಮನ ಸೆಳೆಯುವಂತಿರುತ್ತವೆ. ಇಲ್ಲಿಯ ಯುವ ಸಮುದಾಯದವರಿಗೆ ಸಡಗರವೇ ಸಡಗರ ಹರಕಲು ಬಟ್ಟೆಯನ್ನು ಧರಿಸಿಕೊಂಡು, ಬಾಯಿ ಬಡಿದುಕೊಂಡು, ಲಭ, ಲಭಾ... ಅಂತ ಹೋಯ್ಕೊಂಡು, ಹೋಯ್ಕೊಂಡವರ ಬಾಯಿಗೆ ಹೋಳಿಗೆ ತುಪ್ಪ ಎಂದು ಬಾಯಿ ಬಡಿದುಕೊಳ್ಳುತ್ತಾರೆ, ಈ ಹಬ್ಬದ ಮೇರವಣಿಗೆಯ ಸಮಯದಲ್ಲಿ " ಕಳ ಬೇಡ " ಎಂಬ ಸೋಗು ಬಹು ಅಕರ್ಷಿಕ. ಕಳಬೇಡ ಬಂದಾ ದಾರಿ ಬಿಡಿ

ಹೋಳಿ ಹುಣ್ಣಿಮೆಯಂದು ಮಾ 3 ರಂದು ರಾತ್ರಿ ಸಮಯದಲ್ಲಿ ಜರಗುವ ಮೆರವಣಿಗೆಯಲ್ಲಿ " ಕಳ ಬೇಡ " ಎಂಬ ಸೋಗು ಬಹು ಅಕರ್ಷಿಕ. ಕಳಬೇಡ ಎಂದರೆ ಒಬ್ಬ ವ್ಯಕ್ತಿಗೆ ಮುಖಕ್ಕೆ ಮೈಗೆ ಅಚ್ಚುಕಟ್ಟಾಗಿ ಬಣ್ಣ ಬಡಿದು, ಅತನನ್ನು ವಿಕೃತವಾಗಿ ಕಾಣುವಂತೆ ಮಾಡಿ. ಉದ್ದನೆಯ ನಾಲಿಗೆ ಕಪ್ಪು ಬಣ್ಣ ಹಚ್ಚಿ ಅದನ್ನು ಅವನ ತಲೆಗೆ ತೊಡಸಿ ನಂತರ ಅವನ ಬಾಯಿಯೊಳಗೆ ಕೆಂಪನೆಯ ಉದ್ದವಾದ ಬ್ಯಾಗಡಿ ಹಾಳಿಯನ್ನು ನಾಲಿಗೆ ತರಹವೇ ಮಾಡಿ, ಅವನ ಕೈಯಲ್ಲಿ ಕಟ್ಟಿಗೆಯ ಖಡ್ಗವನ್ನು ಕೊಟ್ಟು ಸೊಟಕ್ಕೆ , ಕಾಲಿಗೆ ಗೆಜ್ಜೆ ಸರವನ್ನು ಕಟ್ಟಿ ಅವನೊಬ್ಬ ತದ್ರೂಪಿ ರಾಕ್ಷಸ ತರವೆ ಕಾಣುವಂತೆ ಮಾಡುತ್ತಾರೆ. ಈತನ ಹಾವ ಭಾವ ಥೇಟ್ ರಾಕ್ಷಸನಂತಿದ್ದು, ಬಾಗಿದವರ ಬೆನ್ನ ಮೇಲೆ ಹೆಜ್ಜೆ ಇಡುತ್ತಾ 'ಕಳಬೇಡ' ಅತ್ತಿಂದ್ದ ಅತ್ತ ಜಿಗಿಯುತ್ತ ಮುನ್ನುಗ್ಗುತ್ತಾನೆ, ಬಣ್ಣ ಬಣ್ಣದ ಹೂಗಳಿಂದ ಶೃಂಗಾರಗೊಂಡ ಕಟ್ಟೆಯಿಂದ ಕಳಬೇಡ ವೇಷಧಾರಿ ಯುವಕನ ಬೆನ್ನ ಮೇಲೆ ಕಾಲಿಟ್ಟು ನೆಲಕ್ಕೆ ಜಿಗಿದು ಗೆಜ್ಜೆಗಳನ್ನು ಅಲುಗಾಡಿಸುತ್ತಾ ಕುಣಿತ ಆರಂಭಿಸುತ್ತಾನೆ, ಬೆನ್ನ ಮೇಲೆ ಗಜ್ಜೆ ಶಬ್ದ ಮಾಡುತ್ತಾ ನಿಲ್ಲುತ್ತಾನೆ, ಉರಿಯ ಪಂಜಿಗೆ ಬಾಯಿಯಲ್ಲಿನ ಸೀಮೆ ಎಣ್ಣೆಯನ್ನು ಜನ ಜೋರಾಗಿ ಉಗುಳುತ್ತಿದ್ದಂತೆ ದಿಗ್ಗನೆ ಉರಿ ಕಳಬೇಡನ ಮೈ ಮುಖಕ್ಕೆ ಸಾಗುತ್ತದೆ. ಉರಿಯ ಉಂಡಿಗೆ ಮೈಯೊಡ್ಡಿ ಅದನ್ನು ಭೇಧಿಸಿ ಬಗ್ಗಿದವರ ಮೇಲೆ ಹೆಜ್ಜೆ ಹಾಕುತ್ತಾನೆ ಕಳಬೇಡ. ಆದರೆ ಇದು ಅಷ್ಟೇ ಭಯಾನಕ ವಾಗಿರುತ್ತದೆ, ಇದರ ಜೋತೆಗೆ ಹಾಸ್ಯ ಪ್ರಸಂಗ ಅಣುಕು ಶವಯಾತ್ರೆ ಹೊತ್ತು ತರುವ ಚಕ್ಕಡಿಯಲ್ಲಿ ಸ್ತ್ರೀ ವೇಷದಾರಿ ಪುರುಷರು ಹಾಡಿ ಹಾಡಿ ಅಳುವ ದೃಶ್ಯವಂತೂ ನೋಡುಗರಲ್ಲಿ ಕಚಗುಳಿ ಇಡುತ್ತದೆ. ಹಿಂದಿನ ಚಕ್ಕಡಿಯಲ್ಲಿ ಬಣ್ಣ ತುಂಬಿದ ಬ್ಯಾರೆಲಗಳು ಇರುತ್ತವೆ, ಇದರಲ್ಲು ಬಣ್ಣವನ್ನು ಜನರಿಗೆ ಎರಚುತ್ತಾ–ರೆ ಮತ್ತು ನೋಡುಗರ ಮೇಲೆ ಓಕುಳಿಯಾಡುತ್ತಾರೆ. ಒಟ್ಟಿನಲ್ಲಿ ಯಲಬುರ್ಗಾದ ಈ ಹೋಳಿ ಹಬ್ಬ ಜಾತಿ ಮತ ಎನ್ನದೆ ಸರ್ವರೂ ಒಂದೇ ಎನ್ನುವ ಮನೋಭಾವನೆ ಇಲ್ಲಿಯ ಜನರದು. ಬಹು ಕಾಲದಿಂದಲೂ ಹೀಗೆ ನಡೆದುಕೊಂಡು ಬಂದಿರುವ ಯಲಬುರ್ಗಾದ ಕಾಮನ ಹಬ್ಬ ಇವತ್ತಿಗೂ ಜನಾಕರ್ಷನೆ ಪಡೆಯುತ್ತ ಬಂದಿದೆ. ಮಾ.4 ರಂದು ಬೆಳಿಗ್ಗೆ 5.30 ಗಂಟೆಗೆ ಕಾಮದಹನ ಪ್ರಾರಂಭವಾಗುತ್ತದೆ, ಆಯಾ ಭಾಗದಲ್ಲಿ ಕಾಮ ದಹನವಾದ



ಬಳಿಕ ಕಾಮನ ಬೆಂಕಿಯಿಂದ ಕಡಲೆ ಕಾಳುಗಳನ್ನು ಸುಟ್ಟುಕೊಂಡು ತಿನ್ನುತ್ತಾರೆ, ಇದರಿಂದ ಹಲ್ಲುಗಳು ಗಟ್ಟಿಮುಟ್ಟಿಯಾಗುತ್ತವೆ ಎಂಬ ನಂಬಿಕೆಯಿಂದ ಹಲ್ಲು ಉಜ್ಜಲಾರದೆ ( ತಿಕ್ಕಲಾರದೆ) ಕಡಲೆ ಕಾಳು ತಿನ್ನುತ್ತಾರೆ, ಕಾಮದಹನವಾದ ನಂತರ ಆತನ ಬೂದಿಯನ್ನು ತಮ್ಮ ಹೊಲಕ್ಕೆ ಹಾಕುತ್ತಾರೆ ಇದರಿಂದ ಫಸಲು ಚೆನ್ನಾಗಿ ಬರುತ್ತದೆ ಎಂಬುವದು ರೈತರ ನಂಬಿಕೆಯಾಗಿದೆ, ಕಾಮ ಸತ್ತ ಭೀಮ ಉಳಿದಾ ರತಿದೇವಿ ರಂಡಿ ಮೂಂಡಿ ಆದೋಳೋಪ್ಪೋ" ಎಂದು ಬಾಯಿ ಬಡಿದುಕೊಂಡು ಕಾಮ ದಹನ ಕಾರ್ಯಕ್ರಮದಲ್ಲಿ ಸರ್ವರೂ ಜಾತಿ ಬೇದ ಭಾವ ಮರೆತು ಪ್ರೀತಿಯಿಂದ ಆಚರಣೆ ಮಾಡುವ ಸಂಪ್ರದಾಯವಾಗಿದೆ. ,

# ಅಬಕಾರಿ ಪ್ರಕರಣ: ಕೇಜ್ರಿವಾಲ್, ಸಿಸೋಡಿಯಾ ಛಾರ್ಜ್‌ಶೀಟ್ ತಿರಸ್ಕಾರ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ದೆಹಲಿ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಸಲ್ಲಿಸಿದ್ದ ಛಾರ್ಜ್‌ಶೀಟ್ ಅನ್ನು ದೆಹಲಿಯ ರೋಸ್ ಅವೆನ್ಯೂ ನ್ಯಾಯಾಲಯ ತಿರಸ್ಕರಿಸಿರುವುದಾಗಿ ಆಮ್ ಆದ್ಮಿ ಪಕ್ಷ ತಿಳಿಸಿದೆ.

ಈ ಕುರಿತು ಪ್ರಕಟಣೆ ನೀಡಿರುವ ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಪಕ್ಷದ ಬಳ್ಳಾರಿ ಜಿಲ್ಲಾಧ್ಯಕ್ಷ ಜೆ.ವಿ. ಮಂಜುನಾಥ್ ಅವರು, ಪ್ರಕರಣದಲ್ಲಿ ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಹಾಗೂ ಮಾಜಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ವಿರುದ್ಧದ



ಆರೋಪಗಳು ನ್ಯಾಯಾಲಯದಲ್ಲಿ ತಳ್ಳಿಹಾಕಲ್ಪಟ್ಟಿರುವುದು ಸತ್ಯಕ್ಕೆ ಸಂದ ಜಯವಾಗಿದೆ ಎಂದು ತಿಳಿಸಿದ್ದಾರೆ.

ಕಳೆದ ಮೂರು ವರ್ಷಗಳಿಂದ ಪಕ್ಷ ಹಾಗೂ ನಾಯಕರ ವಿರುದ್ಧ ವಿವಿಧ ರೀತಿಯ ಟೀಕೆ ಮತ್ತು ಆರೋಪಗಳು ಕೇಳಿಬಂದಿದ್ದವು. ರಾಜಕೀಯ ಉದ್ದೇಶಗಳಿಂದ ಈ ಪ್ರಕರಣ ಸೃಷ್ಟಿಸಲಾಗಿತ್ತು ಎಂಬುದು ಇದೀಗ ಸ್ಪಷ್ಟವಾಗಿದೆ ಎಂದು ಅವರು ಹೇಳಿದ್ದಾರೆ. ಈ ಬೆಳವಣಿಗೆ ಭ್ರಷ್ಟಾಚಾರ ಮತ್ತು ಕೋಮುವಾದಿ ರಾಜಕೀಯದ ವಿರುದ್ಧ ಹೋರಾಟಕ್ಕೆ ಇನ್ನಷ್ಟು ಪ್ರೇರಣೆ ನೀಡಲಿದೆ. ಸ್ವಚ್ಛ ಆಡಳಿತದ ಮೂಲಕ ರಾಜಕೀಯ ನಡೆಸುವ ಮಾದರಿಯನ್ನು ಆಮ್ ಆದ್ಮಿ ಪಕ್ಷ ಈಗಾಗಲೇ ತೋರಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭ್ರಷ್ಟಾಚಾರಮುಕ್ತ ಮತ್ತು ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣಕ್ಕಾಗಿ ಜನರು ಆಮ್ ಆದ್ಮಿ ಪಕ್ಷವನ್ನು ಬೆಂಬಲಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ

# ಪುಟ್ಟರಾಜ ಗವಾಯಿಗಳ 112ನೇ ಜಯಂತಿ

• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ನಾಡಿನ ಸಂಗೀತ ಸಾಹಿತ್ಯ ಕ್ಷೇತ್ರಕ್ಕೆ ಲಿಂಗೈಕ ಪಂಡಿತ ಪುಟ್ಟರಾಜ ಗವಾಯಿಗಳ ಕೊಡಿಗೆ ಅಪಾರವಾಗಿದೆ. ಸಂಗೀತ ಕ್ಷೇತ್ರದ ಕಲಾವಿದರಿಗೆ ಆರಾಧ್ಯ ದೈವವಾಗಿದ್ದಾರೆ ಗವಾಯಿಗಳು ಎಂದು ಶ್ರೀ ಪಂಚಾಕ್ಷರಿ ಸಂಗೀತ ಪಾಠಶಾಲೆಯ ಅಧ್ಯಕ್ಷ ಹಾಗೂ ಸಂಗೀತ ಶಿಕ್ಷಕ ಮುರಾರಿ ಭಜಂತ್ರಿ ಹೇಳಿದರು.

ಕುಕನೂರು ಪಟ್ಟಣದ ಎಂಟನೇ ವಾರ್ಡಿನ ದುರ್ಗಾದೇವಿ ದೇವಸ್ಥಾನದಲ್ಲಿ ಶ್ರೀ ಪಂಚಾಕ್ಷರಿ ಸಂಗೀತ ಪಾಠಶಾಲೆ ಹಾಗೂ ಕಲಾವಿದರಿಂದ ಹಮ್ಮಿಕೊಂಡಿದ ಅಂಗೈಕ ಡಾಕ್ಟರ್ ಪಂಡಿತ್ ಪುಟ್ಟರಾಜ ಗವಾಯಿಗಳವರ 112ನೇ ಜಯಂತಿ ಆಚರಣೆ ಮಾಡಿ



ಗವಾಯಿಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದವರು, ಲಕ್ಷಾಂತರ ಅಂದ ಅನಾಥ ಮಕ್ಕಳಿಗೆ ಊಟ ವಸತಿಯೊಂದಿಗೆ ಸಂಗೀತದ ಜ್ಞಾನವನ್ನು ನೀಡಿ ಸ್ವಾಭಿಮಾನ ಬದುಕು ಕಟ್ಟಿಕೊಳ್ಳಲು ದಾರಿದೀಪವಾದವರು. ಹಾಡು ಮುಟ್ಟದ ಸೊಪ್ಪಿಲ್ಲ, ಪುಟ್ಟರಾಜ್ ಗವಾಯಿಗಳು ನೋಡಿಸದ ವಾದ್ಯಗಳಿಲ್ಲ, ಸಕಲ ವಾದ್ಯಗಳನ್ನು ನುಡಿಸಿ ಪರಿಣಿತಿ ಹೊಂದಿದವರು ಗವಾಯಿಗಳು, ಹಲವಾರು ಪುರಾಣಗಳನ್ನು , ನಾಟಕಗಳನ್ನು ರಚಿಸಿದವರು. ಪ್ರತಿ ವರ್ಷ ಪುಟ್ಟರಾಜ ಗವಾಯಿಗಳ ಜಯಂತಿಯನ್ನು ನಮ್ಮ ಕುಕನೂರು ಪಟ್ಟಣದಲ್ಲಿ ಆಚರಿಸುತ್ತಾ ಬಂದಿದ್ದೇವೆ, ಅವರ ಜಯಂತಿ ಆಚರಿಸುವುದರ ಮೂಲಕ ಅವರ ಕೊಡುಗೆ ಮತ್ತು ಅವರ ತತ್ವಸಿದ್ಧಾಂತಗಳನ್ನು ಎಲ್ಲರೂ ರೂಡಿಸಿಕೊಳ್ಳುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಪುಟ್ಟರಾಜ ಗವಾಯಿಗಳವರಿಗೆ ಕರ್ನಾಟಕ ರತ್ನ ಹಾಗೂ ಭಾರತ ರತ್ನ ಪ್ರಶಸ್ತಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ನೀಡಬೇಕಿದೆ ಎಂದರು.

ಈ ಸಂದರ್ಭದಲ್ಲಿ ಜನಪದ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತ ಸಹನಾಯಿ ಕಲಾವಿದ ದೊಡ್ಡ ಯಮನೂರಪ್ಪ ಭಜಂತ್ರಿ, ಶ್ಯಾವಮ್ಮ ಭಜಂತ್ರಿ, ಬಸವರಾಜ ಕಿತ್ತೂರ್, ನಾಗರಾಜ್ ಭಜಂತ್ರಿ, ಮುಕುಂದ ಭಜಂತ್ರಿ, ಚಂದ್ರಶೇಖರ್ ಕಿತ್ತೂರ್, ಅಮರ್ ಹಿರೇಮನಿ, ಮಹೇಶ್ ಶಿರೂರ್, ಶ್ರೀಕಾಂತ್ ಭಜಂತ್ರಿ, ಹುಲ್ಲೇಶ್ ಭಜಂತ್ರಿ, ಜಾನಕಿ ಭಜಂತ್ರಿ, ಸೇರಿದಂತೆ ಇತರರು ಉಪಸ್ಥಿತರಿದ್ದರು.

# ನಿವೇಶನ ರಹಿತ ಫಲಾನುಭವಿಗಳಿಗೆ ಹಕ್ಕುಪತ್ರ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ (ಹೊಸಪೇಟೆ)

ಮುಖ್ಯಮಂತ್ರಿ ಗ್ರಾಮೀಣ ನಿವೇಶನ ಯೋಜನೆಯಡಿಯಲ್ಲಿ ನಿವೇಶನ ರಹಿತ ಅರ್ಹ 74 ಫಲಾನುಭವಿಗಳಿಗೆ ಕಾನೂನು ಬದ್ಧವಾಗಿ ನಿವೇಶನ ಹಕ್ಕುಪತ್ರ ನೀಡಲಾಗಿದೆ ಎಂದು ಶಾಸಕ ಹೆಚ್.ಆರ್. ಗವಿಯಪ್ಪ ಮಾಹಿತಿ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯಿತಿ ಹಾಗೂ ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಮಂಗಳವಾರ ಪಾಪಿನಾಯಕನಹಳ್ಳಿಯ ಚಿಂದುಲ ನಾಗಮ್ಮ ಕಲ್ಯಾಣ ಮಂಟಪದಲ್ಲಿ ಮುಖ್ಯಮಂತ್ರಿ ಗ್ರಾಮೀಣ ನಿವೇಶನ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಮಾಡಿ ಅವರು ಮಾತನಾಡಿದರು.

ಸುಪ್ರೀಂ ಕೋರ್ಟ್ ಆದೇಶದಂತೆ ನಿವೇಶನ ರಹಿತರಿಗೆ ಅಗತ್ಯ ಮೂಲ ಸೌಕರ್ಯ ಒದಗಿಸುವ ದೃಷ್ಟಿಯಿಂದ ನಿವೇಶನ ನೀಡುವುದಲ್ಲದೇ ಅದರ ಜತೆಗೆ ಮನೆ ನಿರ್ಮಿಸಿ ಕೊಡಲಾಗುವ




ವ್ಯವಸ್ಥೆಯೂ ಸಹ ಮಾಡಲಾಗಿದೆ. ಈ ಯೋಜನೆಯನ್ನು ಹೊರ ರಾಜ್ಯಗಳಿಂದ ಬಂದವರಿಗೆ ಅಷ್ಟೇ ಅಲ್ಲದೇ ಸ್ಥಳೀಯರಿಗೂ ಈ ಅವಕಾಶ ನೀಡಲು ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ತಿಳಿಸಿದ ಅವರು, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು. ಉತ್ತಮ ಸಂಸ್ಕಾರ ನೀಡುವ ಮೂಲಕ ಸಮಾಜದಲ್ಲಿ ಗೌರವಯುತ ವ್ಯಕ್ತಿಯನ್ನಾಗಿ ಮಾಡಿ ಎಂದು ಸಲಹೆ ನಿಡಿದರು.

ಪಾಪಿನಾಯಕನಹಳ್ಳಿ ಗ್ರಾಮಸಭೆಯಲ್ಲಿ 97 ಫಲಾನುಭವಿಗಳು ಆಯ್ಕೆಯಾಗಿದ್ದು, ಈ ಪೈಕಿ 74 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಮಾಡಿಲಾಯಿತು. ಇನ್ನುಳಿದ 23 ನಿವೇಶನಗಳಲ್ಲಿ 3 ನಿವೇಶನಗಳು ರೇಷನ್ ಕಾರ್ಡ್ ಇಲ್ಲದೆ, 6 ನಿವೇಶನಗಳು ಸಮರ್ಪಕ ದಾಖಲಾತಿ ಕೊರತೆ ಕಾರಣದಿಂದ ದಾಖಲಾತಿ ಬಾಕಿ ಮತ್ತು 3 ನಿವೇಶನಗಳಿಗೆ ವಿವಿಧ ಕಾರಣಗಳಿಂದ ತಾಲ್ಲೂಕು ಪಂಚಾಯಿತಿಯಲ್ಲಿ ಬಾಕಿ ಇವೆ. ಅವೆಲ್ಲವುಗಳಿಗೂ ಮುಂದಿನ ದಿನಗಳಲ್ಲಿ ಹಕ್ಕುಪತ್ರ ನೀಡಲು ಕ್ರಮವಹಿಸಲಾಗುವುದು. ಇನ್ನುಳಿದ 11 ನಿವೇಶನಗಳು ದಾಖಲಾತಿಗಳು ಈ ಹಿಂದೆ ವಿವಿಧ ವಸತಿ ಯೋಜನೆಯಡಿ ಅರ್ಜಿ ಸಲ್ಲಿಸಿರುವುದರಿಂದ ತಿರಸ್ಕರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ಪಾಪಿನಾಯಕನಹಳ್ಳಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಕಾಧಿಕಾರಿ ಆಲಂ ಭಾಷ, ಗ್ರಾಂ.ಪಂ. ಅಭಿವೃದ್ಧಿ ಅಧಿಕಾರಿ ಭೀರಪ್ಪ, ವಸತಿ ಇಲಾಖೆ ನೂಡಲ್ ಅಧಿಕಾರಿ ಮಹೇಶ್, ಗ್ರಾಮ ಪಂಚಾಯತಿ ಆಢಳಿತಾಧಿಕಾರಿ ಸಿಂಧು ಅಂಗಡಿ, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಪಾಪಿನಾಯಕಹಳ್ಳಿ ಗ್ರಾಮಸ್ಥರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಆರೋಗ್ಯ ಇಲಾಖೆ ಕಾರ್ಯಕ್ರಮದಲ್ಲಿ ಉರ್ದು ಬಳಕೆ ಆಕ್ರೋಶ




ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಆರೋಗ್ಯ ಇಲಾಖೆಯ ಕಾರ್ಯಕ್ರಮದಲ್ಲಿ ಕನ್ನಡ ಭಾಷೆಯನ್ನು ಕಡೆಗಣಿಸಿ ಅಹ್ವಾನ ಪತ್ರಿಕೆ ಮತ್ತು ಕರಪತ್ರಗ ಉರ್ದು ಭಾಷೆ ಬಳಸಿರುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ (ಶಿವರಾಮೇಗೌಡ ಬಣ) ವತಿಯಿಂದ ಪ್ರತಿಭಟನೆ ನಡೆಸಿ ಆಕ್ರೋಶವನ್ನು ವ್ಯಕ್ತಪಡಿಸಿದರು.

ಈ ಕುರಿತು ಬಳ್ಳಾರಿ ಜಿಲ್ಲಾ ಅಧಿಕಾರಿಗಳ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದ ಕರ್ನಾಟಕ ರಕ್ಷಣಾ ವೇದಿಕೆ (ಶಿವರಾಮೇಗೌಡ ಬಣ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾಧ್ಯಕ್ಷ ರಾಜಶೇಖರ್ (ರಾಜಣ್ಣ) ಮಾತನಾಡಿ, ಕರ್ನಾಟಕದಲ್ಲಿ ಆಡಳಿತ ಭಾಷೆ ಕನ್ನಡವಾಗಿರುವ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದ ಆಹ್ವಾನ ಮತ್ತು ವಿವರಗಳನ್ನು ಸಂಪೂರ್ಣವಾಗಿ ಉರ್ದು ಭಾಷೆಯಲ್ಲಿ ಮುದ್ರಿಸಿರುವುದು ಕನ್ನಡಿಗರ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಆರೋಪಿಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ರಾಜ್ಯದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಕಡ್ಡಾಯಗೊಳಿಸಲು ಸರ್ಕಾರ ಕ್ರಮ ಕೈಗೊಂಡಿರುವುದು ಶ್ಲಾಘನೀಯವಾದರೂ, ಕೆಲ ಅಧಿಕಾರಿಗಳು ಕನ್ನಡವನ್ನು ನಿರ್ಲಕ್ಷ್ಯ ಮಾಡುತ್ತಿರುವುದು ಖಂಡನೀಯ ಎಂದರು. ಕನ್ನಡ ನಾಡು–ನುಡಿಯ ಗೌರವ ಕಾಪಾಡುವ ನಿಟ್ಟಿನಲ್ಲಿ ಈ ರೀತಿಯ ಘಟನೆಗಳು ಮರುಕಳಿಸದಂತೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅವರು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳನ್ನು ಮತ್ತು ಸಂಬಂಧಿಸಿದ ಅಧಿಕಾರಿಗಳನ್ನು ಒತ್ತಾಯಿಸಿದರು.

ಆರೋಗ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಚಿವ ದಿನೇಶ್ ಗುಂಡೂರಾವ್ ಅವರ ನಡೆ ಕುರಿತು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಈ ಘಟನೆಗೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸುವಂತೆ ಸರ್ಕಾರವನ್ನು ಆಗ್ರಹಿಸಿದರು.

ಅಷ್ಟೇ ಅಲ್ಲದೆ ಬಳ್ಳಾರಿ ನಗರ ಇತ್ತೀಚಿಗೆ ತುಂಬಾ ಬೆಳೆದಿದ್ದು ಇರುವ ನಾಲ್ಕೈದು ಪೊಲೀಸ್ ಠಾಣೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸರಿಗೆ ಕಾರ್ಯದ ಒತ್ತಡ ಜಾಸ್ತಿಯಾಗಿದೆ ನಗರದ ಅವಶ್ಯಕ ಪ್ರದೇಶಗಳಲ್ಲಿ ಮತ್ತೆರಡು ಪೊಲೀಸ್ ಠಾಣೆಗಳನ್ನು ಆರಂಭಿಸಿ ಹಾಲಿ ಇರುವ ಪೊಲೀಸ್ ಅಧಿಕಾರಿಗಳಿಗೆ ಕಾರ್ಯದ ಒತ್ತಡವನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಎಡಿಸಿ ಅವರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಟಿಗಿ ಸೂರ್ಯನಾರಾಯಣ, ಮೃತ್ಯುಂಜಯ, ಲಕ್ಷ್ಮಣ್, ನೂರ್ ಭಾಷಾ, ದ್ವಾರಕೇಶ್ ಸೇರಿದಂತೆ ಹಲವಾರು ಜನ ಕರವೇ ಕಾರ್ಯಕರ್ತರು ಭಾಗವಹಿಸಿದ್ದರು.

# ಹೋಳಿ ಹಬ್ಬ: ಮದ್ಯ ಮಾರಾಟ ನಿಷೇಧ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕಲಬುರಗಿ ನಗರ ಮತ್ತು ಜಿಲ್ಲೆಯಾದ್ಯಂತ ಇದೇ ಮಾರ್ಚ್ 3 ಮತ್ತು 4 ರಂದು ಹೋಳಿ ಹಬ್ಬ ಶಾಂತಿಯುತವಾಗಿ ಅಚರಿಸುವ ನಿಟ್ಟಿನಲ್ಲಿ ಮಾರ್ಚ್ 3ರ ಮಧ್ಯಾಹ್ನ 3 ಗಂಟೆಯಿಂದ ಮಾರ್ಚ್ 4ರ ಮಧ್ಯರಾತ್ರಿ 12 ಗಂಟೆ ವರೆಗೆ ಜಿಲ್ಲೆಯಾದ್ಯಂತ ಎಲ್ಲಾ ತರಹದ ಮಧ್ಯ ಮಾರಾಟ ಮಾಡುವುದನ್ನು ನಿಷೇಧಿಸಿ ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಆದೇಶ ಹೊರಡಿಸಿದ್ದಾರೆ.

ಹೋಳಿ ಹಬ್ಬ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂದೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ–1965ರ ಕಲಂ 21ರಂತೆ ಜಿಲ್ಲೆಯಾದ್ಯಂತ ಎಲ್ಲಾ ತರಹದ ಮಧ್ಯ ಮಾರಾಟ ಮಾಡುವುದನ್ನು ನಿಷೇಧಿಸಿದಲ್ಲದೆ ಬಾರ್ ಮತ್ತು ರೆಸ್ಟೋರೆಂಟಗಳನ್ನು ಮುಚ್ಚುವಂತೆ ಸಹ ಜಿಲ್ಲಾ ದಂಡಾಧಿಕಾರಿಗಳು ಆದೇಶಿಸಿರುತ್ತಾರೆ.

# ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆ

ಹೊಸಪೇಟೆ: ಯುವಜನತೆಗಾಗಿ ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಮೂರು ಹಂತಗಳಲ್ಲಿ ಆಯೋಜನೆಗೊಳ್ಳುವ ಈ ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ವಿಕಸಿತ ಭಾರತದ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಬಹುದಾಗಿದೆ. ಮೊದಲ ಹಂತದ ಕಾರ್ಯಕ್ರಮದ ಅನ್ವಯ ಜಿಲ್ಲಾಮಟ್ಟದ ಚರ್ಚಾಸ್ಪರ್ಧೆಯನ್ನು ರಾಷ್ಟ್ರೀಯ ಸೇವಾ ಯೋಜನಾ ಘಟಕ, ವಿಜಯನಗರ ಮಹಾವಿದ್ಯಾಲಯ ಹಾಗೂ ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿದ್ಯಾಲಯದ ಸಹಯೋಗದೊಂದಿಗೆ ಇದೇ ಮಾರ್ಚ್ 4 ರಂದು ನಗರದ ವಿಜಯನಗರ ಮಹಾವಿದ್ಯಾಲಯದಲ್ಲಿ "ತುರ್ತುಪರಿಸ್ಥಿತಿಗೆ 50 ವರ್ಷಗಳು : ಭಾರತೀಯ ಪ್ರಜಾಪ್ರಭುತ್ವಕ್ಕೆ ಪಾಠಗಳು" ಎಂಬ ಶೀರ್ಷಿಕೆಯಡಿ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆ ಏರ್ಪಡಿಸಲಾಗಿದೆ. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಸಚಿವ ಡಾ.ಎನ್.ಎಂ.ಸಾಲಿ ಉದ್ಘಾಟಿಸಲಿದ್ದು, ವಿಜಯನಗರ ಮಹಾವಿದ್ಯಾಲಯ ಆಡಳಿತ ಮಂಡಳಿ ಅಧ್ಯಕ್ಷ ಮಲ್ಲಿಕಾರ್ಜುನ ಮೆಟ್ರಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ.ಕುಮಾರ್, ಬುಕ್ಕಾ ಸಂಜೀವ್, ಡಾ.ನಾಗಣ್ಣ ಕಿಲಾರಿ, ಡಾ.ರವಿ ಕಿರಣ, ಡಾ.ಮಲ್ಲಿಕಾರ್ಜುನ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಚರ್ಚಾ ಸ್ಪರ್ಧೆಗೆ ಜಿಲ್ಲೆಯ ಎಲ್ಲಾ ಪದವಿ ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಿ, ಹೆಚ್ಚು ಅಂಕಗಳಿಸಿದ 5 ವಿದ್ಯಾರ್ಥಿಗಳನ್ನು ರಾಜ್ಯಮಟ್ಟಕ್ಕೆ ಆಯ್ಕೆ ಮಾಡಲಾಗುವುದು ಎಂದು ವಿಜಯನಗರ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಮಹಾಂತೇಶ ಆರಾಧ್ಯಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಧಿಕಾರಿಗಳೊಂದಿಗೆ ಸಮಾಲೋಚನೆ
# ಶಿವಾಜಿ ಜಯಂತಿ ಘಟನೆ: ಅಲ್ಪಸಂಖ್ಯಾತರ ಆಯೋಗ ಭೇಟಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ



ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಸದಸ್ಯರುಗಳಾದ ಅಬ್ದುಲ್ ಸಲಾಂ ಪುತ್ತಿಗೆ, ಪರಿಮಳಾ ಜೈನ್ ಹಾಗೂ ಆಯೋಗದ ಅಧ್ಯಕ್ಷರ ಆಪ್ತ ಸಹಾಯಕ ರಾಮಯ್ಯ ಒಳಗೊಂಡ ತಂಡ ನಗರಕ್ಕೆ ಆಗಮಿಸಿ, ಶಿವಾಜಿ ಜಯಂತಿ ಪ್ರಯುಕ್ತ ಜರುಗಿದ ಮೆರವಣಿಗೆ ಸಂದರ್ಭದಲ್ಲಿ ನಡೆದ ಘಟನೆಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಸಮಾಲೋಚನೆ ಸಭೆ ನಡೆಸಿತು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಸಮಾಲೋಚನಾ ಸಭೆಯಲ್ಲಿ ಬಾಗಲಕೋಟೆ ನಗರದಲ್ಲಿ ಫೆಬ್ರವರಿ 19 ರಂದು ಶಿವಾಜಿ ಜಯಂತಿ ಪ್ರಯುಕ್ತ ಮೆರವಣಿಗೆ ಸಂದರ್ಭದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ, ಕೈಗೊಂಡ ಕ್ರಮಗಳ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ವಿವರವಾಗಿ ಸಭೆಗೆ ತಿಳಿಸಿದರು. ಜಿಲ್ಲಾಧಿಕಾರಿ ಸಂಗಪ್ಪ ಅವರು ನಗರದಲ್ಲಿ ಶಾಂತಿ, ಸೌಹಾರ್ದತೆಯನ್ನು ಕಾಪಾಡುವ ನಿಟ್ಟಿನಲ್ಲಿ ಜಿಲ್ಲಾಡಳಿತ ಎಲ್ಲ ರೀತಿಯ ಕ್ರಮಕೈಗೊಂಡಿರುವುದಾಗಿ ತಿಳಿಸಿದರು.

ಅಲ್ಪಸಂಖ್ಯಾತರ ಆಯೋಗದ ತಂಡ ಮಾರ್ಚ 3 ರಂದು ಬೆಳಿಗ್ಗೆ 9 ಗಂಟೆಗೆ ಘಟನಾ ಸ್ಥಳ ಪರಿಶೀಲನೆ ಹಾಗೂ ಸಾರ್ವಜನಿಕರೊಂದಿಗೆ ಸಮಾಲೋಚನೆ ನಡೆಸುವುದಾಗಿ ತಿಳಿಸಿತು. ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಗದೀಶ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಡಿ.ವಾಯ್.ಎಸ್.ಪಿ ಗಜಾನನ ಸುತಾರ, ರೋಶನ್, ಸಂತೋಷ ಬನಹಟ್ಟಿ, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಶಿವಾನಂದ ಪಟ್ಟಣಶೆಟ್ಟಿ, ನಗರಸಭೆ ಪೌರಾಯುಕ್ತ ವಾಸಣ್ಣ ಆರ್, ಸಿಪಿಐ ಮಧು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬಾಹ್ಯ ಪೂಜೆಗಿಂತ ಮಾನಸಿಕ ಪೂಜೆ ಶ್ರೇಷ್ಠ: ಅಮರೇಶ್




• ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು

ಕೊಟ್ಟೂರು ತಾಲೂಕು ಕಛೇರಿಯಲ್ಲಿ ಇಂದು ಶ್ರೀ ಯೋಗಿನಾರಾಯಣ ಯತೀಂದ್ರ(ಕೈವಾರ ತಾತಯ್ಯ) ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು. ತಹಶೀಲ್ದಾರಾದ ಅಮರೇಶ್ ಜಿ ಕೆ ಇವರು ಕೈವಾಋ ತಾತಯ್ಯನವರ ಭಾವಚಿತ್ರಕ್ಕೆ ಪುಪ್ಪಾರ್ಚನೆಯನ್ನು ಮಾಡುತ್ತಾ, ಚಿಕ್ಕಬಳ್ಳಾಪುರ ತಾಲೂಕಿನ ಕೈವಾರದಲ್ಲಿ ಜನಿಸಿದ ನಾರಾಯಣಪ್ಪನವರು ಶ್ರೀಮನ್ ನಾರಾಯಣನ ಕುರಿತು ತಪ್ಪಸ್ಸನ್ನು ಮಾಡಿ ಸಾಧಕರಾದ್ದ-ರಿಂದ ಶ್ರೀ ಯೋಗಿ ನಾರಾಯಣ ಯಂತ್ರೀಂದ್ರರಾಗಿ ಪ್ರಸಿದ್ದಿಯನ್ನು ಪಡೆದಿದ್ದಾರೆ. "ಗುರುಸ್ಮರಣೆ ಮಾಡುತಿದ್ದರೆ ನಮ್ಮೊಳಗೆ ಚಿಂತನೆ ಆರಂಭವಾಗುತ್ತದೆ. ಮನುಷ್ಯನ ದೊಡ್ಡ ಶತ್ರು ಅಹಂಕಾರ, ಈ ಅಹಂಕಾರ ಕಳೆದುಕೊಂಡರೆ ಸಾಧಕನಾಗುತ್ತಾನೆ. ಜನರಿಗೆ ಕಾಣುವಂತೆ ತೋರಿಕೆಯ ಬಾಹ್ಯ ಪೂಜೆಗಿಂತ ಮಾನಸಿಕ ಪೂಜೆ ಶ್ರೇಷ್ಟ" ಎನ್ನುವ ಸಂದೇಶವನ್ನು ಕೈವಾರ ತಾತಯ್ಯನವರು ತಮ್ಮ ಭೋದನೆಯ

ಮೂಲಕ ತಿಳಿಸಿದ್ದಾರೆ. ಜಗತ್ತಿನಲ್ಲಿ ಮುಂದೆ ಜರುಗಬಹುದಾದ ಘಟನೆಗಳ ಕುರಿತು ಮುನ್ನೆಚ್ಚರಿಕೆ ಸಂದೇಶವನ್ನು ನೀಡಿದ "ಕಾಲಜ್ಞಾನ" ಕೃತಿಯನ್ನು ರಚಿಸಿದ್ದು ಈ ಕೃತಿ ಇಂದಿಗೂ ಪ್ರಸಿದ್ದಿಯನ್ನು ಹೊಂದಿದೆ. ಇಂತಹ ಮಹಾನ್ ಚೇತನರು ನೀಡಿದ ಸಂದೇಶವನ್ನು ನಮ್ಮ ಜೀವನಕ್ಕೆ ಅಳವಡಿಸಿಕೊಂಡರೆ ಸಾರ್ಥಕವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಬಲಿಜ ಸಮಾಜದ ಅಧ್ಯಕ್ಷರಾದ ಹರೀಶ್, ಮುಖಂಡರಾದ ಪಿ ಬಾಬಯ್ಯ, ನಾರಾಯಣಪ್ಪ, ಪಿ ಕೊಟ್ರೇಶ್, ಗೋಪಾಲ, ಮುರಳಿ, ಪ್ರಶಾಂತ, ಪ್ರವೀಣ ಕುಮಾರ್, ಕಿರಣ್ ಕುಮಾರ್, ಶಿರಸ್ತೇದಾರರಾದ ಅನ್ನದಾನೇಶ ಬಿ ಪತ್ತಾರ್, ಹೆಚ್ ಎಂ ಕೊಟ್ರಮ್ಮ, ಚಂದ್ರನಾಯ್ಕ, ಕಂದಾಯ ನಿರೀಕ್ಷಕ ಡಿ ಶಿವಕುಮಾರ್, ಸಿಬ್ಬಂದಿ ಮಂಜುನಾಥ, ದೇವರಾಜ ಅರಸು, ಮಂಜಮ್ಮ, ಗೌರಮ್ಮ, ಗ್ರಾಮ ಆಡಳಿತ ಅಧಿಕಾರಿ ರಮೇಶ್, ಜ್ಯೋತಿಬಾಯಿ ಮುಂತಾದವರಿದ್ದರು. ಸಿ ಮ ಗುರುಬಸವರಾಜ ಸ್ವಾಗತಿಸಿ ನಿರ್ವಹಿಸಿದರು.

# ಭಕ್ತರ ಭಕ್ತಿಯೇ ಗವಿಮಠದ ಶಕ್ತಿ : ಅಭಿನವ ಶ್ರೀಗಳು



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ನಗರದ ಗವಿಮಠದಲ್ಲಿ ನಡೆದ ರೇಣುಕಾಚಾರ್ಯರ ಜಯಂತಿ ಹಾಗೂ ಯುಗಮಾನೋತ್ಸ-ವದಲ್ಲಿ ಸಾಧಕರಿಗೆ 'ಅಭಿನವ ರೇಣುಕ ಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು. ವಿವಿಧ ಕ್ಷೇತ್ರದ ಸಾಧಕರಾದ ಶಿವು ಮಠಪತಿ, ಮಲ್ಲಿಕಾರ್ಜುನ ಕಾಡಾದಿ, ಬಸವರಾಜ ಮಾಲಿಪಾಟೀಲ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ತ್ರಿಪುರಾಂತಿನ ಪೂಜ್ಯಶ್ರೀ ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು ನೇತೃತ್ವದಲ್ಲಿ ನಡೆಯಿತು. ಗವಿಮಠ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ, ಪ್ರೊ.ಸೂರ್ಯಕಾಂತ ಶೀಲವಂತ, ಸರಾಫ್ ಬಜಾರ ಸಂಘದ ಅಧ್ಯಕ್ಷ ಚನ್ನಪ್ಪ ರಾಜಾಪುರೆ, ಪ್ರೊ. ರುದ್ರೇಶ್ವರ ಗೋರ್ಟಾ. ರಮೇಶ ರಾಜೋಳೆ, ದಿಲೀಪಕುಮಾರ ದೇಸಾಯಿ ಮತ್ತಿತರರು ಪಾಲ್ಗೊಂಡಿದ್ದರು. ವಿವೇಕ ವಸ್ತ್ರದ್ ಸಂಗೀತ ಪ್ರಸ್ತುತಪಡಿಸಿದರು.

ಕಾರ್ಯಕ್ರಮದ ನೇತೃತ್ವವಹಿಸಿ ಪೂಜ್ಯ ಶ್ರೀ ಡಾ. ಅಭಿನವ ಘನಲಿಂಗರುದ್ರ ಮುನಿ ಶಿವಾಚಾರ್ಯರು ಮಾತನಾಡಿ ಈ ಮಠದ ಆಸ್ತಿ ಗವಿಮಠದ ಭಕ್ತರೆ ಆಗಿದ್ದಾರೆ. ಭಕ್ತರೆ ಮಠದ ಶಕ್ತಿ ಎಂದು ನುಡಿದರು. ಮಂಠಾಳ ಪೂಜ್ಯ ಶ್ರೀ ಅಭಿನವ ಚನ್ನಬಸವ ಸ್ವಾಮೀಜಿಗಳು ಮಾತನಾಡಿ ಘಟದಿಂದ ಮಠ ಮಾಡಿರುವ ಕೀರ್ತಿ ಅಭಿನವ ಶ್ರೀಗಳಿಗೆ ಸಲುತ್ತೆ. ಗುರುವಿನ ಸ್ಥಾನದಲ್ಲಿ ನಿಂತು ಸದಾ ಭಕ್ತರಿಗೆ ಮಾರ್ಗದರ್ಶನ ನೀಡಿ ಸಾಮಾಜಿಕ ಕಾರ್ಯವು ಮಾಡುವ ಮೂಲಕ ಗವಿಮಠ ಶ್ರೀಗಳು ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಜೊತೆಗೆ ಸಾಧಕರಿಗೆ ಗುರುತಿಸಿ ಅವರನ್ನು ಹುರಿದುಂಬಿಸುವ ಕಾರ್ಯ ಗವಿಮಠದಿಂದ ಆಗ್ತಿದೆ ಎಂದು ಶ್ರೀಗಳು ನುಡಿದರು. ಕಾರ್ಯಕ್ರಮದಲ್ಲಿ ಗವಿಮಠದ ಸದ್ಭಕ್ತರು ಗಣ್ಯರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸಿಎಂ ಸಿದ್ದರಾಮಯ್ಯ ಭೇಟಿ ಮಾಡಿದ ಹೊಳಬಸು ಶೆಟ್ಟರ
# ಕ್ಷೇತ್ರದ ಯೋಜನೆಗಳಿಗೆ ಅನುದಾನಕ್ಕೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ



ಈ ತಿಂಗಳು ಮಂಡನೆಯಾಗಲಿರುವ ರಾಜ್ಯ ಬಜೆಟ್‌ನಲ್ಲಿ ಬಾಗಲಕೋಟೆ ವಿಧಾನಸಭೆ ಮತಕ್ಷೇತ್ರದ ಹಲವು ಯೋಜನೆಗಳಿಗೆ ಅಗತ್ಯ ಅನುದಾನ ಮೀಸಲಿಡುವಂತೆ ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ಸಂಚಾಲಕ, ಕಾಂಗ್ರೆಸ್ ಮುಖಂಡ ಹೊಳಬಸು ಶೆಟ್ಟರ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಬಾಗಲಕೋಟೆ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಯೋಜನೆಗಳ ಪಟ್ಟಿಯನ್ನು ನೀಡಿರುವ ಸಲ್ಲಿಸಿರುವ ಅವರು, ಸಂಸ್ಕೃತಿಯ ಪ್ರತೀಕ, ಐತಿಹಾಸಿಕ ಪರಂಪರೆಯ ಬಾಗಲಕೋಟೆ ಹೋಳಿ ಆಚರಣೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವಿಶೇಷ ಪ್ರೋತ್ಸಾಹಧನ ಹಾಗೂ ವಾರ್ಷಿಕ ನೆರವು ನೀಡುವಂತೆ ಕೋರಿದ್ದಾರೆ.

ಜಿಲ್ಲೆಯ ಐತಿಹಾಸಿಕ ರಾಷ್ಟ್ರೀಯ ಪ್ರವಾಸಿ ತಾಣ ಐಹೊಳೆ ಗ್ರಾಮವನ್ನು ಸಂಪೂರ್ಣ ಸ್ಥಳಾಂತರಿ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಬೇಕು, ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖೆಯ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಅನುಷ್ಠಾನಕ್ಕೆ ಅಗತ್ಯ ಅನುದಾನ ಮೀಸಲಿಡಬೇಕು. ಬಾಗಲಕೋಟೆ ನಗರ, ನವನಗರ, ಅಮೀನಗಡ, ಕಮತಗಿ, ಶಿರೂರ ಸೇರಿ ಎಲ್ಲ ನಗರಗಳ ರಸ್ತೆ, ಇನ್ನಿತರ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ 150 ಕೋಟಿ ವಿಶೇಷ ಅನುದಾನ ಘೋಷಿಸುವಂತೆ ಶೆಟ್ಟರ ಆಗ್ರಹಿಸಿದ್ದಾರೆ.

ಹೋಳಿಗೆ ಪ್ರೋತ್ಸಾಹ ಕೊಡಿ : ದೇಶದ ಕೊಲ್ಕತ್ತ ನಗರ ಹೊರತುಪಡಿಸಿದರೆ ಬಾಗಲಕೋಟೆಯ ಹೋಳಿ ಹಬ್ಬ ವಿಶೇಷ ಆಚರಣೆಯ ಪರಂಪರೆ ಹೊಂದಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರೋತ್ಸಾಹ ನೀಡುವ ಜೊತೆಗೆ ಪ್ರತಿವರ್ಷ ಅತ್ಯಂತ ಆಕರ್ಷಕವಾಗಿ ನಡೆಯುವ ಬಣ್ಣದ ಬಂಡಿಗಳು, ಸೋಗಿನ ಬಂಡಿಗಳ ಸಂಸ್ಕೃತಿ ಉಳಿಸಿ, ಬೆಳೆಸಲು ಇಲಾಖೆಯಿಂದ ವಿಶೇಷ ಪ್ರೋತ್ಸಾಹಧನ ನೀಡುವಂತೆ ಮನವಿ ಮಾಡಿದ್ದಾರೆ.

ಬಾಗಲಕೋಟೆ ನಗರದಲ್ಲಿ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರ ಮತ್ತು ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿಯನ್ನು ರಾಜ್ಯ ಸರ್ಕಾರದಿಂದ ನಿರ್ಮಾಣ ಮಾಡಬೇಕು,

ಬಾಗಲಕೋಟೆ ನಗರ ಹೊರವಲಯದ ಸುಕ್ಷೇತ್ರ ಗುಡ್ಡದ ಮಲ್ಲಾಪುರ ಧಾರ್ಮಿಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ವಿಶೇಷ ಒತ್ತು ನೀಡಬೇಕು. ಬಾಗಲಕೋಟೆಯ ನವನಗರ ಮತ್ತು ಅಮೀನಗಡ ಪಟ್ಟಣದಲ್ಲಿ ಸರ್ಕಾರಿ ಪದವಿಪೂರ್ವ ಮಹಾವಿದ್ಯಾಲಯ ಸ್ಥಾಪಿಸಲು ಆಯವ್ಯಯದಲ್ಲಿ ಅಗತ್ಯ ಅನುದಾನ ಒದಗಿಸುವಂತೆ ಅವರು ಕೋರಿದ್ದಾರೆ.

ಖಣದ ಮೂಲಕ ವಿಶ್ವ ಪ್ರಸಿದ್ಧಿ ಪಡೆದಿರುವ ತಾಲೂಕು ಕೇಂದ್ರ ಗುಳೇದಗುಡ್ಡದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಅಗತ್ಯ ನೆರವು ಒದಗಿಸುವಂತೆಯೂ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದು,

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹಲವು ಪ್ರಮುಖ ಯೋಜನೆಗಳಿಗೆ ಬಜೆಟ್‌ನಲ್ಲಿ ಹಣ ಮೀಸಲಿಡುವಂತೆ ಕೋರಿರುವ ಪಟ್ಟಿಯನ್ನು ಸಹ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಅವರಿಗೂ ನೀಡಿರುವುದಾಗಿ ತಿಳಿಸಿರುವ ಹೊಳಬಸು ಶೆಟ್ಟರ, ಕ್ಷೇತ್ರದ ಶಾಸಕರಾಗಿದ್ದ ದಿ.ಎಚ್.ವೈ.ಮೇಟಿ ಅವರ ಕನಸಿನ ಯೋಜನೆಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನಕ್ಕೆ ಮುಂದಾಗಿರುವುದಾಗಿ ತಿಳಿಸಿದ್ದಾರೆ.

# ರೇಣುಕಾದಿ ಶಿವಾಚಾರ್ಯರ ತತ್ವಗಳು ಇಂದಿಗೂ ಪ್ರಸ್ತುತ: ಹಾವಗಿಲಿಂಗೇಶ್ವರ ಶ್ರೀ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಜಗದ್ಗುರು ಶ್ರೀ ರೇಣುಕಾದಿ ಶಿವಾಚಾರ್ಯರ ತತ್ವಾಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಶಿವಣಿ, ಹಲಬರ್ಗಾ, ಹೈದ್ರಾಬಾದ ಮಠದ ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯರು ಪ್ರತಿಪಾದಿಸಿದರು.

ತಾಲೂಕಿನ ಶಿವಣಿ ಗ್ರಾಮದ ಶ್ರೀ ಹಾವಗಿಲಿಂಗೇಶ್ವರ ಮಠದಲ್ಲಿ ಗ್ರಾಮಸ್ಥರ ಪರವಾಗಿ ಆಯೋಜಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವದ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಜಗದ್ಗುರು ಶ್ರೀ ರೇಣುಕಾದಿ ಶಿವಾಚಾರ್ಯರು ಮಾನವ ಜನ್ಮದ ಸಾರ್ಥಕತೆಯ ಬಗ್ಗೆ ಸಾಕಷ್ಟು ತಿಳುವಳಿಕೆ ನೀಡಿದ್ದಾರೆ. ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಸಂದೇಶ ಜಗತ್ತಿಗೆ ಸಾರಿದ ಜಗದ್ಗುರು ರೇಣುಕಾಚಾರ್ಯರ ತತ್ವಾದರ್ಶಗಳು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕಾಗಿದೆ. ಮಾನವ ಜನ್ಮ ದೊಡ್ಡದ್ದು ಅದು ಹಾಳು ಮಾಡದಿರಿ ಹುಚ್ಚಪ್ಪಗಳಿರಾ ಎಂದು ತತ್ವಪದಕಾರರು ತಿಳಿಸಿದ ಹಾಗೆ ಮಾನವ ಜನ್ಮದ ನಿಜಅರ್ಥವನ್ನು ತಿಳಿಸುವಲ್ಲಿ ರೇಣುಕಾದಿ ಶಿವಾಚಾರ್ಯರು ಮುಂಚೂಣಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಜಗದ್ಗುರು ಶ್ರೀ ರೇಣುಕಾಚಾರ್ಯರು ಉದ್ಭವ ಮೂರ್ತಿಯಾಗಿ ಜನ್ಮತಳೆದು ಮಾನವ ಜನ್ಮದ ಉದ್ಧಾರ ಮಾಡಿದ ಪ್ರಥಮ ಶಿವಾಚಾರ್ಯರಾಗಿದ್ದಾರೆ, ವೀರಶೈವ ಧರ್ಮದ ತತ್ವಾದರ್ಶಗಳು ಪಾಲಿಸಿ, ಜಗತ್ತಿನ ಎಲ್ಲರನ್ನು ಉದ್ಧರಿಸಿದ ಕೀರ್ತಿ ಶ್ರೀ ರೇಣುಕಾಚಾರ್ಯರಿಗೆ ಸಲ್ಲುತ್ತದೆ ಎಂದು ಹೇಳಿದರು.

ಮೆರವಣಿಗೆ: ಇದೇವೇಳೆ ಶಿವಣಿ ಗ್ರಾಮದ ವಿವಿಧ ಬೀದಿಗಳಲ್ಲಿ ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯರ ನೇತೃತ್ವದಲ್ಲಿ ಶ್ರೀ ರೇಣುಕಾಚಾರ್ಯರ ಭಾವಚಿತ್ರದ ವೈಭವದ ಮೆರವಣಿಗೆ ನೆಡಯಿತು. ಮೆರವಣಿಗೆಯಲ್ಲಿ ಪಂಚಪೀಠದ ಧ್ವಜಗಳು ರಾರಾಜಿಸಿದವು. ಮೆರವಣಿಗೆಯುದ್ದಕ್ಕೂ ಶ್ರೀ ರೇಣುಕಾಚಾರ್ಯರಿಗೆ ಜಯವಾಗಲಿ, ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎನ್ನುವ ಜಯಘೋಷಗಳು ಮುಗಿಲು ಮುಟ್ಟಿದವು. ಮೆರವಣಿಗೆಯಲ್ಲಿ ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯರ ಜೊತೆಯಲ್ಲಿ, ಸುಮಂಗಲೆಯರ ಕುಂಭ ಕಳಸ ಹೊತ್ತು, ಗ್ರಾಮದ ಪ್ರಮುಖರು ಪಾಲ್ಗೊಂಡು ಮೆರವಣಿಗೆಯ ಮೆರಗು ಹೆಚ್ಚಿಸಿದರು. ಶಾಲಾ ವಿದ್ಯಾರ್ಥಿಗಳು ಭಕ್ತಿಗೀತೆಗಳ ಡಿಜೆ ಶಬ್ದಕ್ಕೆ ಹೆಜ್ಜೆ ಹಾಕಿದರು. ವಿವಿಧ ಧಾರ್ಮಿಕ ಪುರಷರ ವೇಷತೊಟ್ಟು ಗಮನ ಸೆಳೆದರು ಮತ್ತು ಕೋಲಾಟ ಪ್ರದರ್ಶನ ಮಾಡಿದರು.

# ಬೇಸಿಗೆಯಲ್ಲಿ ನೀರಿನ ತೊಂದರೆ ಉಂಟಾಗದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳಿ: ಪ್ರಿಯಾಂಕ್

• ಮಲ್ಲಮ್ಮ ನುಡಿ ವಾರ್ತೆ ಚಿತ್ತಾಪುರ




ಆರಂಭಕ್ಕೂ ಮುನ್ನವೇ ಜಿಲ್ಲೆಯಲ್ಲಿ ವಿಪರೀತ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದ್ದು ಇದರಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ತೊಂದರೆ ಉಂಟಾಗದಂತೆ ಈಗಿನಿಂದಲೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಯಾವ ಯಾವ ಗ್ರಾಮಗಳಲ್ಲಿ ಪ್ರತಿವರ್ಷ ಕುಡಿಯುವ ನೀರಿಗೆ ತೊಂದರೆ ಉಂಟಾಗುತ್ತಿದೆಯೋ ಆ ಗ್ರಾಮಗಳಲ್ಲಿ ಶಾಶ್ವತ ಪರಿಹಾರಕ್ಕೆ ಬೇಕಾಗುವ ಸಿದ್ದತೆಗಳನ್ನು ಮಾಡಿಕೊಂಡು ನೀರಿನ ಭವಣೆ ತಪ್ಪಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಪ್ರಜಾಸೌಧದಲ್ಲಿ ಕ್ಷೇತ್ರದ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಮತ್ತು ಗ್ರಾಮೀಣಾಭಿವೃದ್ದಿ ಪಂಚಾಯತ ರಾಜ್ ಸಚಿವರಾದ ಪ್ರಿಯಾಂಕ್ ಖರ್ಗೆ ಅವರ ಅಧ್ಯಕ್ಷೆಯಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು ತಾಲೂಕಿಗೆ ಕುಡಿಯುವ ನೀರಿಗಾಗಿ ನಾನು ಪ್ರಥಮ ಆದ್ಯತೆಯನ್ನು ನೀಡಿ 3.68 ಕೋಟಿಗೂ ಹೆಚ್ಚಿನ ಅನುದಾನವನ್ನು ಒದಗಿಸಿದ್ದೇನೆ ಆದರೂ ಅಧಿಕಾರಿಗಳ ಸಮನ್ವಯದ ಕೊರತೆಯಿಂದ ನಿಗದಿತ ಸಮಯದಲ್ಲಿ ಕಾಮಗಾರಿಗಳು ಪೂರ್ಣಗೊಳ್ಳುತ್ತಿಲ್ಲಾ. ಕ್ಷೇತ್ರದ ಸನ್ನತಿ ಗ್ರಾಮದ ಜನರು ನದಿ ದಂಡೆಯ ಮೇಲೆ ಇದ್ದರೂ ಅವರಿಗೆ ಕುಡಿಯುವ ನೀರಿನ ತೊಂದರೆ ಇದೆ ಎಂದಾದರೆ ನಮ್ಮ ಅಧಿಕಾರಿಗಳ ಕಾರ್ಯವೈಕರಿಗೆ ಹೇಗಿದೆ ಎನ್ನುವದು ಗೊತ್ತಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನದ ಕೊರತೆಯಿಲ್ಲಾ. ಜಿಲ್ಲಾ ಉಸ್ತುವಾರಿ ಸಚಿವನಾಗಿ ನಾನಿದ್ದೇನೆ, ನಮ್ಮವರೇ ಲೊಕಸಭೆ ಸದಸ್ಯರು, ರಾಜ್ಯಸಭೆ ಸದಸ್ಯರು ಇದ್ದಾರೆ ರಾಜ್ಯ ಮತ್ತು ಕೇಂದ್ರದಲ್ಲಿ ಅನುಮೊದನೆಗೆ ಇರುವ ಕಾಮಗಾರಿಗಳನ್ನು ಮಂಜೂರಿ ಮಾಡಿಸಿಕೊಂಡು ಬರಲು ಯಾವುದೇ ತೊಂದರೆ ಇಲ್ಲಾ ಆದರೂ ನಮ್ಮಲ್ಲಿನ ಅಧಿಕಾರಿಗಳಿಗೆ ಅಭಿವೃದ್ದಿ ಕೆಲಸ ಮಾಡುವ ಆಸಕ್ತಿಯೇ ಎದ್ದು ಕಾಣುತ್ತಿಲ್ಲಾ. ಕಾಮಗಾರಿ ಪ್ರಗತಿಯ ಕುರಿತು ಮಾಹಿತಿ ನೀಡುತ್ತಿಲ್ಲಾ ನಾವುಗಳೇ ಕೇಳಿ ತಿಳಿದುಕೊಳ್ಳಬೇಕಾದ ಅನಿವಾರ್ಯತೆ ಉಂಟಾಗುತ್ತಿದೆ ಹೀಗಾದರೆ ಅಭಿವೃದ್ದಿ ಹಿನ್ನಡೆಯಾಗುವುದಿಲ್ಲವೇ ಎಂದು ಅಧಿಕಾರಿಗಳಿಗೆ ಪ್ರಶ್ನಿಸಿದರು.

> “ ಕ್ಷೇತ್ರದ ಶಾಸಕರಾಗಿರುವ ಪ್ರಿಯಾಂಕ್ ಖರ್ಗೆರವರು ಅಭಿವೃದ್ದಿಯ ಚಿಂತಕರಾಗಿದ್ದು ಸಾವಿರಾರು ಕೊಟಿ ಅನುದಾನವನ್ನು ತಂದು ಮಾದರಿ ಚಿತ್ತಾಪುರ ಮಾಡುವ ಗುರಿಯನ್ನು ಇಟ್ಟುಕೊಂಡಿ-ದ್ದಾರೆ ಇದಕ್ಕೆ ಅಧಿಕಾರಿಗಳ ಸಹಕಾರ ಅಗತ್ಯವಾಗಿದೆ ಅವರು ಸಹಕಾರ ನೀಡಿದಲ್ಲಿ ಇನ್ನು ಹೆಚ್ಚಿನ ಅನುದಾನ ತಂದು ಅಭಿವೃದ್ದಿ ಮಾಡಲು ಸಾಧ್ಯವಾಗುತ್ತದೆ.
> ತಿಪ್ಪಣ್ಣಪ್ಪ ಕಮಕನೂರ, ವಿಧಾನ ಪರಿಷತ್ ಸದಸ್ಯರು.

ತಾಲೂಕಿನಲ್ಲಿ ಅಧಿಕಾರಿಗಳು ಸಮಸ್ಯೆಗಳನ್ನು ಕೇಳಿಕೊಂಡು ಬರುವ ಸಾರ್ವಜನಿಕರೊಂದಿಗೆ ಅಸಭ್ಯವರ್ತಿಸಿ ಕೆಲಸ ಮಾಡಿಕೊಡಲು ಓಡಾಡಿಸುತ್ತಿರುವ ಕುರಿತು ದೂರುಗಳು ಹೆಚ್ಚಾಗಿ ಬರುತ್ತಿವೆ. ಇಂತಹ ದೂರುಗಳು ಮುಂದೆ ಬರದಂತೆ ಎಚ್ಚರಿಕೆ ವಹಿಸಿ ಇಲ್ಲದಿದ್ದಲ್ಲಿ ಕ್ರಮ ಕೈಗೊಳ್ಳಲಾಗುವದು ಎಂ ದು ಎಚ್ಚರಿಕೆ ನೀಡಿದರು. ತಾಲೂ ಕಿನಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆ ಕೈಗೊಳ್ಳಲು ಶಿಕ್ಷಣ ಇಲಾಖೆ ಕೈಗೊಂಡಿರುವ ಕ್ರಮಗಳ ಮಾಹಿತಿ ಪಡೆದರು. ಅಕ್ರಮ ಮದ್ಯ ಮಾರಾಟ ಮತ್ತು ಮಧ್ಯರಾತ್ರಿಯವರೆಗೂ ದಾಬಾಗಳು ತೆರೆದಿರುವ ಕುರಿತು ದೂರುಗಳು ಬರುತ್ತಿದ್ದು ಇವುಗಳ ಕಡಿವಾಣಕ್ಕೆ ಅಬಕಾರಿ ಪೊಲಿಸ್ ಇಲಾಖೆಗೆ ಸೂಚಿಸಿದರು. ಅಧಿಕಾರಿಗಳ ಸಭೆಯಲ್ಲಿ ತೊಗರಿ ಬೋರ್ಡ ಅಧ್ಯಕ್ಷ ಮೆಹಮೂದ ಸಾಹೇಬ, ಜಿಲ್ಲಾಧಿಕಾರಿ, ಜಿಪಂ ಸಿಇಓ, ಎಸ್‌ಪಿ ಜಿಲ್ಲೆ ತಾಲೂಕಿನ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಮಲ್ಲಿಕಾರ್ಜುನ ಮುತ್ಯಾ
## ಪೋಟೋ, ವಿಡಿಯೋ ಅಪಲೋಡ್ ಮಾಡಿದರೆ ಕಾನೂನು ಕ್ರಮ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಮಲ್ಲಿಕಾರ್ಜುನ ಮುತ್ಯಾ ವಿರುದ್ಧದ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಕಿಯನ್ನು ಗುರುತಿಸಬಹುದಾದ ಯಾವುದೇ ಮಾಹಿತಿಯನ್ನು ಮತ್ತು ಬಾಲಕಿಯ ಕುಟುಂಬ ಸದಸ್ಯರನ್ನು ಒಳಗೊಂಡ ಪೋಟೋ ಹಾಗೂ ಸಂಗ್ರಹಿಸಿ ಇಟ್ಟುಕೊಂಡ ವಿಡಿಯೋ ಕ್ಲಿಪಿಂಗ್ ಸಾಮಾಜಿಕ ಜಾಲತಾಣಗಳಲ್ಲಿ ಅಪಲೋಡ್ ಮಾಡುವುದಾಗಲಿ ಮತ್ತು ಬೇರೆಯವರಿಗೆ ಶೇರ್ ಮಾಡಬಾರದು. ಒಂದು ವೇಳೆ ಮಾಡಿದಲ್ಲಿ ಅಂತವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪೃಥ್ವಿಕ್ ಶಂಕರ್ ಅವರು ತಿಳಿಸಿದ್ದಾರೆ.

ಈ ಕುರಿತು ಯಾದಗಿರಿ ಜಿಲ್ಲೆಯ ಗೋಗಿ ಪೊಲೀಸ್ ಠಾಣೆಯಲ್ಲಿ ದಿನಾಂಕ 25-08-2026 ರಂದು ಫಿರ್ಯಾದಿದಾರರಾದ ಶಹಾಪೂರದ ಅಭಿವೃದ್ಧಿ ಯೋಜನಾಧಿಕಾರಿಗಳಾದ ಮಲ್ಲಣ್ಣ ತಂದೆ ಉಮಾಪತಿ ಎಂಬುವರು ಸಲ್ಲಿಸಿದ ದೂರಿನ ಮೇರೆಗೆ ಮಲ್ಲಿಕಾರ್ಜುನ ಮುತ್ಯಾ ಸಾ: ಮಹಲರೋಜಾ ಇವರ ವಿರುದ್ಧ ಗೋಗಿ ಪೊಲೀಸ್ ಠಾಣೆ ಗುನ್ನೆ ನಂ:25/2026 ಕಲಂ 75(2), ಬಿ.ಎನ್.ಎಸ್ ಕಾಯ್ದೆ-2023 ಮತ್ತು ಕಲಂ 12 ಪೋಕ್ಸೋ ಯಾಕ್ಟ್-2012 ಪ್ರಕಾರ ಪ್ರಕರಣ ದಾಖಲಾಗಿ ತನಿಖೆ ಕೈಗೊಳ್ಳಲಾಗಿದ್ದು, ಸಾರ್ವಜನಿಕರು ಈ ಪ್ರಕರಣದಕ್ಕೆ ಯಾವುದೇ ಪೋಟೋ ಅಥವಾ ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಾದ ವ್ಯಾಟ್ಸ್ ಆಫ್, ಪೇಸ್ಬುಂಕ್, ಇನ್ಸ್ ಗ್ರಾಮ್ ಸೇರಿದಂತೆ ಇನ್ನಿತರೆ ಕಡೆಗಳಲ್ಲಿ ಹಂಚಿಕೊಂಡಲ್ಲಿ ಅಂತವರ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳಲಾಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರಕಟಣೆ ತಿಳಿಸಿದ್ದಾರೆ.

# ಮಧ್ಯಪ್ರಾಚ್ಯ ದೇಶಗಳಲ್ಲಿನ ಬಿಕ್ಕಟ್ಟು ಸಹಾಯವಾಣಿ ಆರಂಭ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಮಧ್ಯಪ್ರಾಚ್ಯ ದೇಶಗಳಲ್ಲಿ ಬಿಕ್ಕಟ್ಟು ಯಾದಗಿರಿ ಜಿಲ್ಲೆಯ ಪ್ರಯಾಣಿಕರ ನೆರವಿಗಾಗಿ ಸಹಾಯವಾಣಿ ಆರಂಭಿಸಲಾಗಿದೆ ಎಂದು ಯಾದಗಿರಿ ಅಪರ ಜಿಲ್ಲಾಧಿಕಾರಿ ಶ್ರೀ ರಮೇಶ ಕೋಲಾರ ಅವರು ತಿಳಿಸಿದ್ದಾರೆ. ಮಧ್ಯಪ್ರಾಚ್ಯದ ಕೆಲವು ದೇಶಗಳಲ್ಲಿ ಪ್ರಚಲಿತದಲ್ಲಿರುವ ಅಸ್ಥಿರ ಪರಿಸ್ಥಿತಿಯಿಂದಾಗಿ ಅಂತರಾಷ್ಟ್ರೀಯ ವಿಮಾನಯಾನ, ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಯಾದಗಿರಿ ಜಿಲ್ಲೆಯ ಸಾರ್ವಜನಿಕರ ಹಿತದೃಷ್ಟಿಯಿಂದ ಜಿಲ್ಲಾಡಳಿತ ಈ ಕೆಳಗಿನ ಮಾಹಿತಿಯನ್ನು ಹಂಚಿಕೊಂಡಿದೆ, ವೈಮಾನಿಕ ನಿರ್ಬಂಧ ಮತ್ತು ಪ್ರಚಲಿತ ಸ್ಥಿತಿ, ಇರಾನ್, ಇಸ್ರೇಲ್, ಲೆಬನಾನ್, ಸೌದಿ ಅರೇಬಿಯಾ ಸೇರಿದಂತೆ ಒಟ್ಟು 11 ದೇಶಗಳ ವೈಮಾನಿಕ ಮಾರ್ಗಗಳನ್ನು (Airspace) ಮಾರ್ಚ್ 2ರ ವರೆಗೆ ಮುಚ್ಚಲಾಗಿದೆ. ಈ ಅನಿರೀಕ್ಷಿತ ಅಡಚಣೆಯಿಂದಾಗಿ ಹಾಗೂ ಕರ್ನಾಟಕದ ಅನೇಕ ಪ್ರಯಾಣಿಕರು ಯುಎಇ (ದುಬೈ) ಸೇರಿದಂತೆ ವಿವಿಧ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಸಿಲುಕಿಕೊಂಡಿದ್ದಾರೆ. ಜಿಲ್ಲಾಡಳಿತದ ಕ್ರಮಗಳು : ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರ ನಿರ್ದೇಶನದಂತೆ, ರಾಜ್ಯ ಮತ್ತು ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರ 24ಥ7 ಕಾರ್ಯನಿರ್ವಹಿಸುತ್ತಿವೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಭಾರತೀಯ ರಾಯಭಾರಿ ಕಚೇರಿಗಳು ನೀಡುವ ಸೂಚನೆಗಳನ್ನು ಜಿಲ್ಲಾಡಳಿತ ನಿರಂತರವಾಗಿ ಗಮನಿಸುತ್ತಿದೆ. ಸಹಾಯವಾಣಿ ಸಂಖ್ಯೆಗಳಿಗೆ ಯಾದಗಿರಿ ಜಿಲ್ಲೆಯ ನಿವಾಸಿಗಳು ಅಥವಾ ಅವರ ಸಂಬಂಧಿಕರು ಹೆಚ್ಚಿನ ಮಾಹಿತಿಗಾಗಿ ಮತ್ತು ಸಹಾಯಕ್ಕಾಗಿ ಸಂಪರ್ಕಿಸಬಹುದು, ಯಾದಗಿರಿ ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರ 08473253950, ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ 080 22340676, 08022253707, ಟೋಲ್ ಫ್ರೀ ಸಂಖ್ಯೆ 1070ಗೆ ಕರೆ ಮಾಡಿ ಮಾಹಿತಿ ಹಾಗೂ ಸಹಾಯ ಪಡೆಯಬಹುದು. ಸಾರ್ವಜನಿಕರಿಗೆ ಪ್ರಮುಖ ಸೂಚನೆಗಳು : ಮಧ್ಯಪ್ರಾಚ್ಯ ದೇಶಗಳಲ್ಲಿರುವ ಕರ್ನಾಟಕದ ನಿವಾಸಿಗಳು ಹಾಗೂ ಜಿಲ್ಲೆಯವರಿದ್ದಲ್ಲಿ ಅಲ್ಲಿನ ಸ್ಥಳೀಯ ಸರ್ಕಾರಗಳು ನೀಡುವ ಸುರಕ್ಷತಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸಂಕಷ್ಟದಲ್ಲಿರುವವರು ಆಯಾ ದೇಶದ ಭಾರತೀಯ ರಾಯಭಾರಿ ಕಚೇರಿಯ ಸಹಾಯವಾಣಿಗೆ ಕರೆಮಾಡಬೇಕು ಅಥವಾ ಸಾರಥಿ ಸಹಾಯತಾ (Sarthi Sahayata) ಪೋರ್ಟಲ್‌ನಲ್ಲಿ www.meaers.com/request/home ನೋಂದಾಯಿಸಿಕೊಳ್ಳಬೇಕು.

## ಜೀವನಹಳ್ಳಿಯಲ್ಲಿ ಸಚಿವ ಪಾದಯಾತ್ರೆ



**ಬೆಂಗಳೂರು:** "ಜನತೆಗೆ ಗೌರವಯುತವಾಗಿ ಜೀವನ ನಡೆಸಲು ಮೂಲಸೌಕರ್ಯ ಕಲ್ಪಿಸುವುದೇ ಜನಪ್ರತಿನಿಧಿಗಳ ಕರ್ತವ್ಯ" ಎಂದು ಸಚಿವ ಕೆ.ಜೆ.ಜಾರ್ಜ್ ಅನಿಸಿಕೆ ವ್ಯಕ್ತಪಡಿಸಿದರು.

ಇಂಧನ ಸಚಿವರು ಹಾಗೂ ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ಶಾಸಕರೂ ಆಗಿರುವ ಕೆ.ಜೆ.ಜಾರ್ಜ್ ಮಂಗಳವಾರ ಜೀವನಹಳ್ಳಿ ವ್ಯಾಪ್ತಿಯಲ್ಲಿ ಪಾದಯಾತ್ರೆ ನಡೆಸುವ ಮೂಲಕ ಜನರ ಸಮಸ್ಯೆಗಳನ್ನು ಆಲಿಸಿದರು. ಕೈಗೊಂಡಿರುವ ವಿವಿಧ ಕಾಮಗಾರಿಗಳ ಪರಿಶೀಲನೆ ನಡೆಸಿ ವೇಗವಾಗಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಕುಡಿಯುವ ನೀರು, ವಿದ್ಯುತ್, ರಸ್ತೆ, ವಸತಿ ಯೋಜನೆಗಳು ಮತ್ತು ಸಂಚಾರ ದಟ್ಟಣೆ ನಿರ್ವಹಣೆ ಸಂಬಂಧ ಚರ್ಚೆ ನಡೆಸುತ್ತ ಸ್ಥಳೀಯ ಜನರನ್ನು ಮಾತನಾಡಿಸುತ್ತಾ ಸಚಿವ ಜಾರ್ಜ್ ಅಧಿಕಾರಿಗಳಿಗೆ ಕ್ಷೇತ್ರದಲ್ಲಿ ಆಗಬೇಕಿರುವ ಕೆಲಸಗಳನ್ನು ಪಾದಯಾತ್ರೆ ಮೂಲಕ ಮನವರಿಕೆ ಮಾಡಿಕೊಟ್ಟರು. ಜೀವನಹಳ್ಳಿ ವ್ಯಾಪ್ತಿಯಲ್ಲಿ ಅಗಸ ವೃತ್ತಿಯಲ್ಲಿ ತೊಡಗಿರುವ ಜನರಿಗೆ ಸುಸಜ್ಜಿತವಾದ ವಸತಿ ಸಂಕೀರ್ಣ ನಿರ್ಮಿಸಿದ್ದು, ಅಗತ್ಯ ಸೌಲಭ್ಯಗಳನ್ನು ತುರ್ತಾಗಿ ಸಿದ್ದಪಡಿಸುವಂತೆ ಸೂಚಿಸಿದರು.

## ಮನರೇಗಾ ಮರುಸ್ಥಾಪಿಸುವಂತೆ ಒತ್ತಾಯ





**ಹುಣಸೂರು:** ನಗರದ ಕಾಂಗ್ರೆಸ್ ಕಚೇರಿಯಿಂದ ಹುಣಸೂರು ಉಪವಿಭಾಗಧಿಕಾರಿಗಳ ಕಚೇರಿವರೆಗೆ ಕಾಂಗ್ರೆಸ್ ಪಕ್ಷದ ವತಿಯಿಂದ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ನೇತೃತ್ವದಲ್ಲಿ ಜನರು ಸೇರಿ ವಿಬಿ ಜಿ ರಾಮ್ ಜಿ ಅನ್ನು ಸ್ಥಾಪಿಸಿರುವ ಕೇಂದ್ರ ಸರ್ಕಾರದ ವಿರೋಧಿ ನೀತಿಯನ್ನು ಖಂಡಿಸಿ ಮನರೇಗಾ ಪುನಃ ಮರುಸ್ಥಾಪಿಸುವಂತೆ ಒತ್ತಾಯಿಸಿ ಮನರೇಗಾ ಬಚಾವೋ ಆಂದೋಲನ ಎಂದು ಕಾಂಗ್ರೆಸ್ ಪಕ್ಷದ ಕಛೇರಿಯಿಂದ ಕಾಲ್ನಡಿಗೆ ಜಾಥಾ ಮೂಲಕ ಸಂವಿಧಾನ ವೃತ್ತ, ಹಳೇ ಬಿಎಂ ರಸ್ತೆ,ಕಲ್ಪತರು ವೃತ್ತ,ಹೊಸ ಬಿಎಂ ರಸ್ತೆ ಮೂಲಕ ಉಪವಿಭಾಗಾಧಿಕಾರಿ ಕಛೇರಿಯವರೆಗೆ ಕಾಲ್ನಡಿಗೆ ಜಾಥಾವನ್ನು ನಡೆಸಿರುತ್ತಾರೆ.

ಪ್ರತಿಭಟನೆ ನಡೆಸಿ ಉಪವಿಭಾಗಾಧಿಕಾರಿ ಕಾವ್ಯಾರಾಣಿ ರವರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ. ನಂತರ ಸುದ್ದಿಗಾರರೊಂದಿಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ನಮ್ಮ ಹೋರಾಟದ ಫಲವಾಗಿ ಹಾಗೂ ಜಿಲ್ಲಾಧಿಕಾರಿರವರು ಸಭೆ ನಡೆಸಿದ ಹಿನ್ನೆಲೆಯಲ್ಲಿ ತಂಬಾಕಿನ ಬೆಲೆ 305 ರೂ ನೀಡುತ್ತಿದ್ದಾರೆ. ಅದಕ್ಕೆ ಮಂಜಣ್ಣ, ಕೆ.ವೆಂಕಟೇಶ್, ನಾನು ಕಾರಣ. ಎಚ್.ಡಿ.ಕುಮಾರಸ್ವಾಮಿ ರವರು ನೆನ್ನೆ ಶೋಗೆ ತಂಬಾಕು ಸಭೆ ಮಾಡಿದ್ದಾರೆ ಹಾಗೂ ಹುಣಸೂರಿನಲ್ಲಿ ವರ್ಜಿನಿಯಾ ಒಳ್ಳೆಯ ಹೊಗೆಸೊಪ್ಪು ಬೆಳೆಯುತ್ತಿದ್ದಾರೆ. ಕರ್ನಾಟಕದಲ್ಲಿ ಕಡಿಮೆ ಬೆಲೆಯನ್ನು ನೀಡುತ್ತಿದ್ದಾರೆ. ಆಂದ್ರದಲ್ಲಿ ಹೊಗೆಸೊಪ್ಪುಗೆ 452 ಬೆಲೆ ರೂ ಮಾಡಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾದ್ಯಕ್ಷ ಬಿಜೆ ವಿಜಯ್ ಕುಮಾರ್,ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಭೋವಿ ನಿಗಮ ಮಂಡಳಿ ಅಧ್ಯಕ್ಷ ರಾಮಪ್ಪ ಭೋವಿ ಆಶ್ರಯ ಸಮಿತಿಯ ಸದಸ್ಯರಾದ ಮೊಹಮ್ಮದ್ ಸಲಾಉದ್ದೀನ್ ಅಮೀನ್ ವಕ್ ಬೋರ್ಡ್ ಸದಸ್ಯರಾದ ಅಜ್ಗರ್ ಪಾಶ. ಯೋಜನೆಯ ಸಮಿತಿ ಸದಸ್ಯರಾದ ಅಫ್ರೋಜ್ ಅಹ್ಮದ್ ಕಾಂಗ್ರೆಸ್ ಪಕ್ಷದ ಯುವ ಕಾರ್ಯಕರ್ತರು ಫೈಸಲ್ ಕೌಶಿಕ್ ಮುಜೀಬ್ ಅಹಮದ್ ಯಾಸಿರ್ ರಮೇಶ್ ಮಂಜು ರಾಘು ನಾಡಪಳ್ಳಿ ರಾಜು ರವಿ ದೇವರಾಜು ಕುಮಾರ ಅಭಿಮಾನಿಗಳು ಮುಖಂಡರು ಭಾಗವಹಿಸಿರುತ್ತಾರೆ.

## ಯುಕ್ತಿ –2026 ವಿಶೇಷ ಕಾರ್ಯಕ್ರಮ



**ವಿಜಯಪುರ:** ಇತ್ತೀಚಿಗೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆದ ಯುಕ್ತಿ–2026 ಎಂಬ ವಿಶೇಷ ತಾಂತ್ರಿಕ ಕಾರ್ಯಾಗಾರ ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸಿದ ವಿಜಯಪುರದ ಬಿಎಲ್‌ಡಿಇ ಡಾ.ಫ.ಗು. ಹಳಕಟ್ಟಿ ಇಂಜನಿರಯಿಂಗ್ ಮಹಾವಿದ್ಯಾಲಯದದ ತಂಡ ದಿ ರೈಸಿಂಗ್ ರನ್‌ವೇಯಲ್ಲಿ ಪ್ರಥಮ ಬಹುಮಾನ ಗಳಿಸಿದೆ.

ಮಹಾವಿದ್ಯಾಲಯದ 32 ಕ್ಕೂ ಹೆಚ್ಚು ಉತ್ಸಾಹಿ ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಕರ್ನಾಟಕದಾದ್ಯಂತ ಪ್ರಮುಖ ಎಂಜಿನಿಯರಿಂಗ್ ಕಾಲೇಜುಗಳ ಪ್ರತಿಭಾನ್ವಿತ ತಂಡಗಳೊಂದಿಗೆ ಸ್ಪರ್ಧಿಸಿದರು.

ತೀವ್ರ ಸ್ಪರ್ಧೆಯ ನಡುವೆ 'ಕಲರವ' ತಂಡವು ನ್ಯಾಯಾಧೀಶರು ಮತ್ತು ಪ್ರೇಕ್ಷಕರನ್ನು ಸಮಾನವಾಗಿ ಆಕರ್ಷಿಸಿತು.

ದಿ ರೈಸಿಂಗ್ ರನ್‌ವೇಯಲ್ಲಿ ಅವರ ಸೃಜನಶೀಲತೆ, ಆತ್ಮವಿಶ್ವಾಸ, ಸಮನ್ವಯ ಮತ್ತು ವಿಷಯಾಧಾರಿತ ಪ್ರಸ್ತುತಿ ಅವರು ಚಾಂಪಿಯನ್‌ಗಳಾಗಿ ಹೊರಹೊಮ್ಮಲು ಸಹಾಯ ಮಾಡಿತು.

ವಿದ್ಯಾರ್ಥಿಗಳಿಗೆ ಡಾ.ವೈ.ಎ. ಕುಲಕರ್ಣಿ ಮಾರ್ಗದರ್ಶನ ಮಾಡಿದ್ದರು, ಡಾ.ಶಿಲ್ಪಾ ಪಾಟೀಲ ತಂಡಕ್ಕೆ ನಿರ್ದೇಶನ ನೀಡಿದ್ದರು. ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯದರ್ಶಿ ಗೇಬ್ರಿಯಲ್ ಶೆರ್ವಿನ್, ಪ್ರಿಯಾಂಕಾ ಅರ್ಜುನ್ ಕಲ್ವಾಡ್ ತಂಡದ ನೇತೃತ್ವ ವಹಿಸಿದ್ದರು.

ವಿದ್ಯಾರ್ಥಿಗಳ ಸಾಧನೆಗೆ ಪ್ರಾಚಾರ್ಯ ಪ್ರಾಂಶುಪಾಲ ಡಾ. ಮಂಜುನಾಥ್.ಪಿ. ಹರ್ಷ ವ್ಯಕ್ತಪಡಿಸಿದ್ದಾರೆ.

# ಎಚ್.ಡಿಕೆ, ಅಶೋಕ್; ತಾ ಕಳ್ಳ–ಪರರ ನಂಬ



**ರಾಜಕೀಯ–ಜನಮೇಜಯ**

**● ಸಿದ್ದರಾಮಯ್ಯ**

**ರಾಜ್ಯ ಮುಖ್ಯಮಂತ್ರಿ**

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮೇಲೆ ಕಣ್ಣಿಡಲು ಫೋನ್ ಕದ್ದಾಲಿಕೆ ನಡೆಯುತ್ತಿದೆ ಎಂಬ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್ ಮತ್ತು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರ ಆರೋಪ "ತಾ ಕಳ್ಳ ಇತರರ ನಂಬ" ಎಂಬ ಗಾದೆಯಂತಿದೆ. ಇದೊಂದು ಅತೃಪ್ತ ಆತ್ಮಗಳ ಹತಾಶ ಹೇಳಿಕೆ.

ಈ ಬಾರಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದ ನಂತರ ಈ ನಿರುದ್ಯೋಗಿ ವಿರೋಧ ಪಕ್ಷದ ನಾಯಕರು ನನ್ನ ಮತ್ತು ಡಿ.ಕೆ.ಶಿವಕುಮಾರ್ ಅವರ ನಡುವಿನ ಸಂಬಂಧಕ್ಕೆಹುಳಿ ಹಿಂಡಲು ಪ್ರಯತ್ನಿಸುತ್ತಲೇ ಇದ್ದಾರೆ, ಇದರಿಂದ ಅವರೊಳಗೆ ತುಂಬಿಕೊಂಡಿರುವ ಹುಳಿ ಖಾಲಿಯಾಗಬಹುದೇ ಹೊರತು ನಮ್ಮ ಹಾಲು–ಜೇನಿನಂತಹ ಸಂಬಂಧದ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ ಎನ್ನುವುದು ಇಬ್ಬರಿಗೂ ತಿಳಿದಿರಲಿ.

ಆರೋಪ ಮಾಡಿರುವ ಒಬ್ಬರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು,ಇನ್ನೊಬ್ಬರು ಉಪಮುಖ್ಯಮಂತ್ರಿ ಮತ್ತು ಗೃಹ ಸಚಿವರಾಗಿದ್ದವರು. ಅವರ ಕಾಲದಲ್ಲಿ ಕೂಡಾ ಗುಪ್ತಚರ ವಿಭಾಗ ಮುಖ್ಯಮಂತ್ರಿಯವರ ಬಳಿಯೇ ಇತ್ತು. ಅವರ ಹೇಳಿಕೆಗಳನ್ನು ಗಮನಿಸಿದರೆ ಇವರಿಬ್ಬರೂ ತಮ್ಮ ಅನುಭವದ ಬಲದಿಂದಲೇ ಈ ಆರೋಪ ಮಾಡುತ್ತಿರುವಂತೆ ಕಾಣಿಸುತ್ತಿದೆ.

ನಮ್ಮದು ಆಂತರಿಕ ಪ್ರಜಾಪ್ರಭುತ್ವ ಇರುವ ಪಕ್ಷ. ಕಾಂಗ್ರೆಸ್ ಪಕ್ಷ ಎನ್ನುವುದು ಪ್ರಧಾನಿ ಎದುರು ಬಾಯಿ ಬಿಡಲಾಗದೆ ಕೈಕಾಲು ನಡುಗುವಂತಹ ಸ್ಥಿತಿ ಇರುವ ಬಿಜೆಪಿಯೂ ಅಲ್ಲ, ಏಕ ಕುಟುಂಬದ ಅಧಿಪತ್ಯ ಇರುವ ಜೆಡಿಎಸ್ ಕೂಡಾ ಅಲ್ಲ. ನಮ್ಮ ಶಾಸಕರಲ್ಲಿ ಯಾರೂ ಕೂಡಾ ನನ್ನ ಇಲ್ಲವೇ ಡಿ.ಕೆ.ಶಿವಕುಮಾರ್ ಬೆಂಬಲಿಗರಲ್ಲ,ಎಲ್ಲರೂ ಕಾಂಗ್ರೆಸ್ ಪಕ್ಷದ ಬೆಂಬಲಿಗರು. ಪಕ್ಷದ ಶಿಸ್ತಿನ ಚೌಕಟ್ಟಿನೊಳಗೆ ವೈಯಕ್ತಿಕವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ, ಜೊತೆಯಲ್ಲಿ ಊಟ–ತಿಂಡಿ ಮಾಡುವ ಎಲ್ಲ ಸ್ವಾತಂತ್ರ್ಯಗಳು ಅವರಿಗೆ ಇದೆ. ಆದರೆ ಯಾವ ಶಾಸಕರು ಏನನ್ನೇ ಹೇಳಿದರೂ ಅಂತಿಮವಾಗಿ ಅವರನ್ನೂ ಸೇರಿದಂತೆ ನಾನು ಮತ್ತು ಶಿವಕುಮಾರ್ ನಮ್ಮ ಪಕ್ಷದ ಹೈಕಮಾಂಡ್ ಆದೇಶಕ್ಕೆ ತಲೆಬಾಗುವವರು. ಇದನ್ನು ನಾವಿಬ್ಬರೂ ಒಂದಲ್ಲ ನೂರು ಬಾರಿ ಹೇಳಿದ್ದೇವೆ. ಇದೇ ಅಂತಿಮ ಸತ್ಯ.

ಈ ರೀತಿ ಸುಳ್ಳು ಸುದ್ದಿಗಳನ್ನು ಹರಡಿ ನಮ್ಮಿಬ್ಬರ ಸಂಬಂಧವನ್ನು ಕೆಡಿಸಿ ಡಿ.ಕೆ.ಶಿವಕುಮಾರ್ ಅವರನ್ನು ಒಲಿಸಿಕೊಳ್ಳುವ ದುರಾಲೋಚನೆ ಏನಾದರೂ ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಇದ್ದರೆ, ಅವರ ಹಗಲು ಕನಸುಗಳಿಗೆ ಶುಭ ಹಾರೈಸುತ್ತೇನೆ. ಶಿವಕುಮಾರ್ ಒಬ್ಬ ಕಟ್ಟಾ ಕಾಂಗ್ರೆಸಿಗ, ಸುಳ್ಳು ಕೇಸ್ ಗಳನ್ನು ಹಾಕಿ, ಜೈಲಿಗೆ



ಕಳಿಸಿ ಅವರನ್ನು ಮಣಿಸುವ ಎಲ್ಲ ಪ್ರಯತ್ನಗಳನ್ನು ಬಿಜೆಪಿ ಮಾಡಿಯಾಗಿದೆ.

ಕರ್ನಾಟಕದ ಇತ್ತೀಚಿನ ರಾಜಕೀಯ ಇತಿಹಾಸದ ಪುಟಗಳ ಮೇಲೆ ಒಮ್ಮೆ ಕಣ್ಣಾಡಿಸಿದರೆ ಈ ಫೋನ್ ಕದ್ದಾಲಿಕೆ, ಗೂಢಚರ್ಯೆಗಳೆಲ್ಲ ಯಾವ ಪಕ್ಷದ ದುಷ್ಕೃತ್ಯಗಳು ಎನ್ನುವುದು ಅರಿವಾಗುತ್ತದೆ. ಈ ದುರ್ಬುದ್ಧಿಯ ಕಾರಣದಿಂದಾಗಿಯೇ ರಾಜ್ಯ ರಾಜಕೀಯದಲ್ಲಿ ಆಪರೇಷನ್ ಕಮಲ, ರೆಸಾರ್ಟ್ ರಾಜಕಾರಣ, ವಚನಭಂಗದಂತಹ ಅನಿಷ್ಟಗಳು ಕಾಣಿಸಿಕೊಂಡಿರುವುದು. 2004ರಿಂದ 2013 ವರೆಗಿನ ಒಂಬತ್ತು ವರ್ಷಗಳ ಅವಧಿಯಲ್ಲಿ ರಾಜ್ಯ ಐದು ಮುಖ್ಯಮಂತ್ರಿಗಳನ್ನು, 2018ರಿಂದ 2023ರ 5 ವರ್ಷಗಳ ಅವಧಿಯಲ್ಲಿ ಮೂರು ಮುಖ್ಯಮಂತ್ರಿಗಳನ್ನು ರಾಜ್ಯ ಕಾಣುವಂತಾಗಲು ಇವರೊಳಗಿನ ಪರಸ್ಪರ ಅಪನಂಬಿಕೆ, ದ್ವೇಷ, ಅಸೂಯೆ, ಬೆನ್ನಿಗೆ ಚೂರಿ ಹಾಕುವ ಕುತಂತ್ರಗಳೇ ಕಾರಣ.

2018ರಲ್ಲಿ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಆದಿಚುಂಚನಗಿರಿಯ ಪೂಜ್ಯ ನಿರ್ಮಲಾನಂದನಾಥ ಸ್ವಾಮಿಗಳ ಫೋನನ್ನೆ ಕದ್ದಾಲಿಸಿದ್ದಾರೆ ಎಂದು ಈಗಿನ ಅವರ ರಾಜಕೀಯ ಸಂಗಾತಿ ಬಿ.ವೈ ವಿಜಯೇಂದ್ರ ಅವರೇ ಆರೋಪ ಮಾಡಿದ್ದರು. ಇದರ ಬಗ್ಗೆ ತನಿಖೆ ಮಾಡಿದ್ದ ಸಿಬಿಐ, ಒಬ್ಬ ಸ್ವಾಮೀಜಿಗಳದ್ದಷ್ಟೇ ಅಲ್ಲ, ಬದಲಿಗೆ ಏಳು ಸ್ವಾಮೀಜಿಗಳ ಫೋನ್ ಗಳ ಕದ್ದಾಲಿಕೆ ಮಾಡಲಾಗಿದೆ ಎಂದು ತಿಳಿಸಿತ್ತು. ನಂಬಿಕೆಗೆ ತಾನು ಅರ್ಹ ಅಲ್ಲ ಎಂದು ಸಾಬೀತು ಮಾಡಿರುವ ಕುಮಾರಸ್ವಾಮಿವರನ್ನು ಬಿಜೆಪಿಯವರು ಸುಮ್ಮನೆ ಬಿಟ್ಟಾರೆಯೇ? ಅವರ ವಿರುದ್ಧವೂ ಗೂಢಚಾರರನ್ನು ಬಿಟ್ಟಿರಬಹುದು.

ಹೆಚ್.ಡಿ.ಕುಮಾರಸ್ವಾಮಿ ಮತ್ತು ಆರ್ ಅಶೋಕ್ ಅವರು ತಮ್ಮ ಅಮೂಲ್ಯ ಕ್ಷಣಗಳನ್ನು ಈ ರೀತಿ ಕುಟಿಲ ರಾಜಕೀಯದಲ್ಲಿ ವ್ಯರ್ಥಮಾಡುವ ಬದಲಿಗೆ ರಚನಾತ್ಮಕ ವಿರೋಧ ಪಕ್ಷದ ರೀತಿಯಲ್ಲಿ ಕೆಲಸ ಮಾಡಿ ರಾಜ್ಯಕ್ಕೆ ಒಳ್ಳೆಯದನ್ನು ಮಾಡಲಿ ಎಂದು ಹಾರೈಸುತ್ತೇನೆ. ವಿರೋಧ ಪಕ್ಷಗಳ ಎಲ್ಲ ಕುತಂತ್ರ–ಕುಚೇಷ್ಟೆಗಳ ನಡುವೆಯೂ ಈ ಅವಧಿಯನ್ನು ಕಾಂಗ್ರೆಸ್ ಪಕ್ಷ ಪೂರ್ಣಗೊಳಿಸಲಿದೆ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯೇ ಇರುತ್ತಾರೆ.

## ಸಿಮೆಂಟ್ ಪದರು ಕಳಚಿದ್ದು ನಮಗೂ ಮುಜುಗರ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ನಗರದ ಹೊರವಲಯದಲ್ಲಿರುವ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಪ್ರಬುದ್ಧ ಅಕಾಡೆಮಿಯ ಕಟ್ಟಡ ಪಕ್ಕದ ಉಪಾಹಾರ ಗೃಹದ ತಾರಸಿಯ ಸಿಮೆಂಟ್ ಪದರು ಕುಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಆರ್ ಐಡಿಎಲ್ ಪ್ರಭಾರ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿರುವ ಎಇಇ ಸೌರಭ್ ಭೀಮನ್ ಅವರನ್ನು ಸೋಮವಾರ ರಾತ್ರಿಯೇ ಅಮಾನತುಗೊಳಿಸಲಾಗಿದೆ. ಈ ಕುರಿತು ಮಂಗಳವಾರ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು, ಪ್ರಬುದ್ಧ ಅಕಾಡೆಮಿ ಕಟ್ಟಡ ಪಕ್ಕದ ಉಪಾಹಾರ ಗೃಹದ ತಾರಸಿಯ ಸಿಮೆಂಟ್ ಪದರು ಕುಸಿದು ಬಿದ್ದಿರುವ ಸುದ್ದಿ ತಿಳಿದು ವೈಯಕ್ತಿಕವಾಗಿ ಬೇಸರವಾಗಿದೆ. ನಾನು ಸಮಾಜ ಕಲ್ಯಾಣ ಇಲಾಖೆ ಸಚಿವನಾಗಿದ್ದಾಗ ಬಹಳ ಕಷ್ಟಪಟ್ಟು ಕೇಂದ್ರ ಮಂಜೂರು ಮಾಡಿಸಲಾಗಿತ್ತು.



ಹಲವಾರು ಯುವಕರ ಕನಸು ಕನಸಾಗಲು ಈ ಸಂಸ್ಥೆ ಕಟ್ಟಿದ್ದೇವೆ. ಸಿಮೆಂಟ್ ಪದರು ಕಳಚಿ ಬಿದ್ದಿದ್ದ–ರಿಂದ ನಮಗೂ ಮುಜುಗರವಾಗಿದೆ. ಈಗಾಗಲೇ ಇಲಾಖೆಯ ಎಇಇ ಅವರನ್ನು ಸೋಮವಾರವೇ ಅಮಾನತು ಮಾಡಲಾಗಿದೆ' ಎಂದು ತಿಳಿಸಿದರು.

## ವಾರ್ಷಿಕ ಸಾಧನೆಯ ಕೈಪಿಡಿ ಅನಾವರಣ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ವಿಧಾನ ಪರಿಷತ್ ಶಾಸಕರಾಗಿ ಒಂದು ವರ್ಷ ಪೂರ್ಣಗೊಳಿಸಿದ ಬಸನಗೌಡ ಬಾದರ್ಲಿ ರವರ ತಮ್ಮ ಅವಧಿಯಲ್ಲಿ ಸಾಮಾಜಿಕ. ಆರ್ಥಿಕವಾಗಿ ಕ್ಷೇತ್ರದಲ್ಲಿ ವಾರ್ಷಿಕ ಕೈಗೊಂಡು ಸಾಧನೆಯ ಕೈಪಿಡಿ ಅನಾವರಣ ಕಾರ್ಯಕ್ರಮ ಹಾಗೂ ಬಸನಗೌಡ ಫೌಂಡೇಷನ್ ವತಿಯಿಂದ ಮೇ 3–5–2026 ರಂದು ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ನಗರದ ತಾಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವೆಂಕಟೇಶ್ ರಾಗಲಪರ್ವಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಸಿಂಧನೂರು ಸಂಭ್ರಮದೊಂದಿಗೆ ಬಸನಗೌಡ ಬಾದರ್ಲಿ ಫೌಂಡೇಷನ್ ಟೆಸ್ಟ್ ವತಿಯಿಂದ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಯುವಕ ಯುವತಿಯರಿಗೆ ಉದ್ಯೋಗ ಮೇಳ, ವಿವಿಧ ಪರೀಕ್ಷೆಗಳು ತರಬೇತಿ ಶಿಬಿರ, ಕೋವಿಡ್ ನಲ್ಲಿ ಆರೋಗ್ಯ ಸೇವೆ, ಆರೋಗ್ಯ




ಮೇಳ, ಶ್ರೀ ಶಕ್ತಿ ವಿವಿಧ ಮಹನೀಯರು ಹುಟ್ಟು ಹಬ್ಬದ ಅಂಗವಾಗಿ ರಕ್ತ ಭಂಡಾರ ಪರೀಕ್ಷೆ ಶಿಬಿರ, ಬಿಡ ರೋಗಿಗಳು ಆರೋಗ್ಯ ಸಮಸ್ಯೆ.ಸಹಾಯ ಸಹಕಾರ ಮತ್ತು ಬ್ಲಡ್ ಅವಶ್ಯಕತೆ ಇದ್ದವರಿಗೆ ತಮ್ಮ ಬ್ಲಡ್ ಬ್ಯಾಂಕ್ ಸಹಯೋಗದಲ್ಲಿ ಬ್ಲಡ್ ಒದಗಿಸಿದ್ದಾರೆ. ಅನೇಕರು ಜನಪರವಾಗಿ ಕಾರ್ಯವು ಯಶಸ್ವಿಗೊಳಿಸಿದ್ದಾರೆ. ಎಂದರೆ ತಪ್ಪಾಗಲಾರದು ಎಂದು ವೆಂಕಟೇಶ್ ರಾಗಲಪರ್ವಿ ತಿಳಿಸಿದರು.

## ಶರಣಬಸವೇಶ್ವರ ರಥ ವೈಭವ 8ಕ್ಕೆ, ಹೊಸ ತೇರು, ಪ್ರಶಸ್ತಿ ಪ್ರದಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮಹಾದಾಸೋಹಿ ಶ್ರೀ ಶರಣಬಸವೇಶ್ವರ 2042 ಮಹಾದಾಸೋಹ ಯಾತ್ರೆ ರಥೋತ್ಸವ ಮಾ.8ರಂದು ಸಂಜೆ 6ಕ್ಕೆ ಲಕ್ಷಾಂತರ ಭಕ್ತರ ಮಧ್ಯೆ ಮತ್ತು 7ರಂದು ಸಂಜೆ 6ಕ್ಕೆ ಉಚ್ಚಾಯಿ ನೆರವೇರಲಿದೆ ಎಂದು ಪೀಠಾಧಿಪತಿ ಶ್ರೀ ದೊಡ್ಡಪ್ಪಅಪ್ಪ, ಮಾತೋಶ್ರೀ ದಾಕ್ಷಾಯಿಣಿ ಅಪ್ಪ ಹೇಳಿದರು.

ವಿದ್ಯಾಭಂಡಾರಿ ಲಿಂಗೈಕ್ಯ ಶರಣಬಸವಪ್ಪ ಅಪ್ಪ ಅವರ ಅದ್ದೂರಿ ಮತ್ತು ಅರ್ಥಪೂರ್ಣ ಜಾತ್ರೋತ್ಸವ ನಡೆಸಲು ಸಕಲ ಸಿದ್ಧತೆ ಮಾಡಿಕೊಂಡಿದ್ದು, ಬಂಧವಾರದಿಂದಲೇ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸಂಪ್ರದಾಯದಂತೆ ಪೂಜ್ಯ ದೊಡ್ಡಪ್ಪ ಅಪ್ಪ ಅವರು ಶರಣಬಸವೇಶ್ವರರ ಪರುಷ ಬಟ್ಟಲು, ಲಿಂಗ ಸಜ್ಜಿಗೆ ಪ್ರದರ್ಶಿಸಿ ಶಂಬನಾದ ಮೊಳಗಿಸುವ ಮೂಲಕ ರಥೋತ್ಸವಕ್ಕೆ ಚಾಲನೆ



ನಿಮಿತ್ತ ಡಾ.ಶರಣಬಸವಪ್ಪ ಅಪ್ಪ ಜೀವನ ಪ್ರದರ್ಶನ ಬುಧವಾರ ನಡೆಯಲಿದೆ. ಪೂಜ್ಯರ ಜನನ, ತೊಟ್ಟಿಲು, ಬಾಲ್ಯ, ಶಿಕ್ಷಣ ಕುರಿತು ಶರಣಬಸವೇಶ್ವರ ಕಲಾ ಕಾಲೇಜಿನ ಬಳಗ ನಾಟಕ ಪ್ರದರ್ಶಿಸಲಿದೆ. 5ರಂದು ಶರಣಬಸವ ವಿವಿ ತಂಡದಿಂದ ಡಾ.ಅಪ್ಪ ಅವರ ತತ್ವಜ್ಞಾನ ಅಧ್ಯಯನ ನಾಟಕ, ಗೋದುತಾಯಿ ಕಲಾ, ವಾಣಿಜ್ಯ, ವಿಜ್ಞಾನ ಮಹಿಳಾ ಪದವಿ ಕಾಲೇಜಿನಿಂದ ಡಾ.ಅಪ್ಪಾಜಿ ಪೀಠಾರೋಹಣ, ವಿದ್ಯಾವರ್ಧಕ ಸಂಘದ ಅಧ್ಯಕ್ಷತೆ ಕುರಿತು. 7ರಂದು ಗೋದುತಾಯಿ ಶಿಕ್ಷಣ



ಕಾಲೇಜಿನಿಂದ ಡಾ.ಅಪ್ಪ ದಾಸೋಹ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಆರ್ಥಿಕ ಕ್ಷೇತ್ರ ಆಧರಿಸಿ ನಾಟಕ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು.

ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ಶರಣಕುಮಾರ ಮೋದಿ, ಶರಣಬಸವ ವಿಶ್ವವಿದ್ಯಾಲಯ ಕುಲಪತಿ ಅನೀಲಕುಮಾರ ಬಿಡವೆ, ಡಾ.ಅಲ್ಲಮಪ್ರಭು ದೇಶಮುಖ, ಶಿವಾನಿ ಅಪ್ಪ, ಭವಾನಿ ಅಪ್ಪ, ಮಹೇಶ್ವರಿ ಅಪ್ಪ, ಪ್ರೊ.ನೀಲಾಂಬಿಕಾ ಪಾಟೀಲ್, ಶಿವರಾಜ ಇದ್ದರು.

## ಸಾಯಿ ವಿಹಾರ ಮಂಗಲದಲ್ಲಿ ಬಿಎಲ್‌ಎ–2 ಕಾರ್ಯಾಗಾರ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಬಿಜೆಪಿ ಪಕ್ಷದ ಬಗ್ಗೆ ಯಾವ ಕಾಂಗ್ರೆಸ್ ನಾಯಕರು ಅಂದು ಹಾಸ್ಯ ಮಾಡಿದ್ದರೋ ಅದೇ ನಾಯಕರು ಇಂದು ತಮ್ಮ ಮಕ್ಕಳನ್ನು ಬಿಜೆಪಿಗೆ ಕಳುಹಿಸುತ್ತಿದ್ದಾರೆ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ವಿಜಯಪುರದ ಸಾಯಿ ವಿಹಾರ ಮಂಗಲ ಕಾರ್ಯಾಲಯದಲ್ಲಿ ನಡೆದ ಬಿಜೆಪಿ ನಗರ ಮಂಡಳ ವತಿಯಿಂದ ಭೂತ್ ಮಟ್ಟದ ಏಜೆಂಟರಿಗೆ ಆಯೋಜಿಸಲಾಗಿದ್ದ ಮಾರ್ಗದರ್ಶನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಇಡೀ ದೇಶದಲ್ಲಿಯೇ ಬಿಜೆಪಿ ಪರವಾದ ಅಲೆ ಇದೆ, ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಪಣಾ ಮನೋಭಾವ, ಅಭಿವೃದ್ಧಿಪರ ದೃಷ್ಟಿಕೋನದ ನಾಯಕತ್ವದಿಂದ ಬಿಜೆಪಿ ಬಲಿಷ್ಠವಾಗಿದೆ, ಕಾಂಗ್ರೆಸ್ ಇಷ್ಟಪಡುತ್ತಿದ್ದ ಅನೇಕರು ಸಹ ಇಂದು ಬಿಜೆಪಿಗೆ ಒಲವು ಬೆಳೆಸಿಕೊಳ್ಳುತ್ತಿದ್ದಾರೆ, ಅಂದು ಆರಂಭದ ದಿನದಲ್ಲಿ ಬೆರಳಣಿಕೆಯಷ್ಟು ಸೀಟುಗಳನ್ನು ಗೆಲ್ಲದ ಬಿಜೆಪಿಯನ್ನು ನೋಡಿ ನಗುತ್ತಿದ್ದ ಕಾಂಗ್ರೆಸ್ ನಾಯಕರೇ ಇಂದು ತಮ್ಮ ಮಕ್ಕಳನ್ನು ಬಿಜೆಪಿಗೆ ಕಳುಹಿಸುತ್ತಿದ್ದಾರೆ ಎಂದರು. ಕಾಂಗ್ರೆಸ್ ವೆಂಟಿಲೇಟರ್‌ನಲ್ಲಿರುವ ಹಡಗು, ಶೀಘ್ರವೇ ಅದು ಮುಣುಗುತ್ತದೆ, ಅವರ ರಾಹುಲ್ ಗಾಂಧೀಗೆ ಬದ್ಧತೆಯೇ ಇಲ್ಲ,ಸಂಸತ್‌ನಲ್ಲಿ ಏನು ಮಾತನಾಡುತ್ತಾರೋ ಅವರಿಗೆ ಪರಿವೆಯೇ ಇಲ್ಲ ಎಂದರು.

ಕಾಂಗ್ರೆಸ್‌ನಂತೆ ಬಂಗಾರದ ಚಮಚ ಇರಿಸಿಕೊಂಡು ಜನ್ಮತಾಳಿದ ಪಕ್ಷ ಬಿಜೆಪಿ ಅಲ್ಲ, ಬಿಜೆಪಿ ಬೆಳವಣಿಗೆಯ ಹಿಂದೆ ನೂರಾರು ಶ್ರೇಷ್ಠ




ದಿಗ್ಗಜ ನಾಯಕರ ತ್ಯಾಗ, ಪರಿಶ್ರಮ ಅಡಗಿದೆ, ಪಕ್ಷ ಕಟ್ಟಿದ ಅನೇಕರು ಕಾರ್ಪೋರೇಟರ್ ಸಹ ಆಗಲಿಲ್ಲ, ನಮಗಾಗಿ ಅವರು ಪಕ್ಷ ಕಟ್ಟಿದರು, ವ್ಯಕ್ತಿಗಿಂತ ಪಕ್ಷ ಮುಖ್ಯ, ಪಕ್ಷಕ್ಕಿಂತ ರಾಷ್ಟ್ರ ಮುಖ್ಯ ಎನ್ನುವ ಸಿದ್ಧಾಂತ ಬಿಜೆಪಿಯದ್ದು ಎಂದರು.

ಬಿಜೆಪಿ 8 ವಿಧಾನಸಭಾ ಕ್ಷೇತ್ರದಲ್ಲಿಯೂ ಬಲಿಷ್ಠವಾಗಿದೆ, ಈಗ ಪಕ್ಷ ಸಂಘಟನೆ ಅತ್ಯಂತ ಶಿಸ್ತುಬದ್ಧವಾಗಿ ನಡೆಯುತ್ತಿದೆ ಅದರಲ್ಲಿ ಎರಡು ಮಾತಿಲ್ಲ, ಈ ಸಂಘಟನೆ ಇನ್ನಷ್ಟೂ ಬಲಿಷ್ಠವಾಗಬೇಕು, ಭೂತ್ ಮಟ್ಟದ ಏಜೆಂಟರು ಪಕ್ಷ ಸಂಘಟನೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಾರೆ, ಕಾಂಗ್ರೆಸ್ ಬಗ್ಗೆ ಒಲವು ಇರುವವರು ಎಂದು ಯಾರನ್ನೂ ನಾವು ನಿರ್ಲಕ್ಷ್ಯಿಸುವಂತಿಲ್ಲ, ಕಳೆದ ಬಾರಿ ಅವರು ಕಾಂಗ್ರೆಸ್‌ಗೆ ಮತ ಹಾಕಿರಬಹುದು, ಆದರೆ ಈಗ ಅವರ ಮನ ಪರಿವರ್ತನೆಯಾಗಿರಬಹುದು, ಬಿಜೆಪಿಯ ಅಭಿವೃದ್ಧಿ ಕೆಲಸ ಅವರನ್ನು ಸೆಳೆದಿರಬಹುದಲ್ಲವೇ? ಹೀಗಾಗಿ ಯಾರನ್ನೂ ನಿರ್ಲಕ್ಷ್ಯಿಸಬೇಡಿ ಎಂದು ಕಿವಿಮಾತು ಹೇಳಿದರು.

ಸಂಸದ ರಮೇಶ ಜಿಗಜಿಣಗಿ ಮಾತನಾಡಿ, ಕಾರ್ಯಕರ್ತರೇ ಪಕ್ಷದ ಜೀವಾಳ, ಕಾರ್ಯಕರ್ತರು ಪಕ್ಷದ ಮುಖಂಡರಿಗಾಗಿ ಅನೇಕ ರೀತಿಯಲ್ಲಿ ಶ್ರಮಿಸುತ್ತಾರೆ, ಹೀಗಾಗಿ ಅವರ ಸಂಕಷ್ಟಗಳಿಗೆ ಸ್ಪಂದಿಸುವುದು ಮುಖಂಡರ ಮಾನವೀಯ ಧರ್ಮ, ಕಾರ್ಯಕರ್ತರಿಗೆ ಏನಾದರೂ ತೊಂದರೆಯಾದರೆ ನೇರವಾಗಿ ಹೇಳಿ ಆ ತೊಂದರೆ ನಿವಾರಿಸಲು ನಾನು ಬದ್ಧನಾಗಿರುವೆ ಎಂದರು. ಪಕ್ಷದ ನಾಯಕರನ್ನು ರೂಪಿಸುವವರೇ ಕಾರ್ಯಕರ್ತರು, ಕಾರ್ಯಕರ್ತರ ಶ್ರಮದಿಂದಲೇ ನಾಯಕರಾಗಲು ಸಾಧ್ಯ ಎಂದರು. ಬಿಜೆಪಿ ಎನ್ನುವುದು ನಮ್ಮ ತಾಯಿ ಇದ್ದಂತೆ, ಸಮರ್ಪಣಾ ಮನೋಭಾವದಿಂದ ಪಕ್ಷ ಕಟ್ಟುವ ಈ ಕಾರ್ಯವನ್ನು ಮಾಡೋಣ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ನಗರ ಮಂಡಳ ಅಧ್ಯಕ್ಷ ಸಂದೀಪ ಪಾಟೀಲ, ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮೇಯರ್ ಎಂ.ಎಸ್. ಕರಡಿ, ಉಪ ಮೇಯರ್ ಸುಮಿತ್ರಾ ಜಾದವ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಳನಗೌಡ ಪಾಟೀಲ್, ಈರಣ್ಣ ರಾವೂರ, ರಾಜ್ಯ ಎಸ್ ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಉಮೇಶ್ ಕಾರಜೋಳ್, ರಾಜ್ಯ ಕಾರ್ಯಕಾರಣಿ ಸದಸ್ಯ ಡಾ.ಸುರೇಶ್ ಬಿರಾದಾರ, ಪ್ರಮುಖರಾದ ಭೀಮಾಶಂಕರ್ ಹದನೂರ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಸ್ವಪ್ನಾ ಕಣಮುಚನಾಳ, ಭಾರತಿ ಭುಯ್ಯಾರ, ಪಾಪುಸಿಂಗ ರಜಪೂತ, ಚಿನ್ನು ಚಿನಗುಂಡಿ, ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)